1954

ಸಮ್ರಾಟ ಶ್ರೇಣಿಕ

(ಐತಿಹಾಸಿಕ ಕಾದಂಬರಿ)

❀

ಶ್ರೀ. ಮಿರ್ಜಿ ಅಣ್ಣಾರಾಯರು.

—:O:—

.... [ಬೆಲೆ ರೂ. 1-0-0

ಅಜಿತ ಪ್ರಕಾಶನ, ಬೆಳಗಾವಿ.

Mr. K. Srinivasa Rao
Sundar Cafe Boarding
House.

ವೀರಭಾರತ ಗ್ರಂಥಮಾಲೆ : ೧೩

ಸಮ್ರಾಟ ಶ್ರೇಣಿಕ

(ಐತಿಹಾಸಿಕ ಕಾದಂಬರಿ)

ಲೇಖಕರು:
ಶ್ರೀ. ಮಿರ್ಜಿ ಅಣ್ಣಾರಾಯರು.

೧೯೫೪]

[ಬೆಲೆ: ೧ ರೂ.

ಅಜಿತ ಪ್ರಕಾಶನ, ಬೆಳಗಾಂವಿ.

ಕೃತಜ್ಞತೆ.

ನಮ್ಮ ಅಜಿತ ಪ್ರಕಟನಾಲಯದಿಂದ ಆಗಾಗ ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯವನ್ನು ಒದಗಿಸುತ್ತ ಬಂದಿದ್ದೇವೆ. ಅಲ್ಲದೆ ಸುಲಭ ಬೆಲೆಯಲ್ಲಿ ಜನ ಸಾಮಾನ್ಯರಿಗೂ ತಿಳಿಯುವ ಚಿಕ್ಕ ಚಿಕ್ಕ ಪುಸ್ತಕಗಳನ್ನು ಪ್ರಕಟಿಸಿ, ಸಾಕ್ಷರರ ತಿಳುವಳಿಕೆಯ ಮಟ್ಟವನ್ನು ಏರಿಸಲು ನಮ್ಮ ಕೈಯಿಂದ ಆದಷ್ಟು ಹೆಣಗುತ್ತ ಬಂದಿದ್ದೇವೆ. ಚಿಕ್ಕ ಕಥೆ, ಕಾದಂಬರಿ, ಏಕಾಂಕ ನಾಟಕಗಳ ಜೊತೆಗೆ ಆಗಾಗ ಧಾರ್ಮಿಕ ಸಾಹಿತ್ಯವನ್ನು ಓದುಗರಿಗೆ ಒದಗಿಸುತ್ತಿದ್ದೇವೆ. ಈ ಎಲ್ಲ ನಮ್ಮ ಕಾರ್ಯವನ್ನು ಉದಾರ ಹೃದಯದಿಂದ ಸ್ವೀಕರಿಸಿದ ಕನ್ನಡ ವಾಚಕ ವೃಂದಕ್ಕೆ ನಾವು ತುಂಬ ಕೃತಜ್ಞರಾಗಿದ್ದೇವೆ. ಇನ್ನು ಮುಂದಾದರೂ ಕನ್ನಡಿಗರೆಲ್ಲರು ನಮ್ಮ ಪ್ರಕಾಶನಗಳನ್ನು ಸಂತಸದಿಂದ ಸ್ವಾಗತಿಸುವರೆಂದು ಕೋರುತ್ತೇವೆ.

ನಮ್ಮ ಪ್ರಕಾಶನ ಸಂಸ್ಥೆಯಲ್ಲಿ ಈ ಮೊದಲು ಪ್ರಕಟವಾದ 'ವಿಜಯಶ್ರೀ' ಕಥಾ ಸಂಗ್ರಹದ ಲೇಖಕರಾದ **ಶ್ರೀ. ಮಿರ್ಜಿ ಅಣ್ಣಾರಾಯರು** ಈ ಕಾದಂಬರಿಯನ್ನು ತಮ್ಮ ವಿಶಿಷ್ಟ ಕಥನ ಕೌಶಲ್ಯದಿಂದ ಹೆಣೆದು ನಮಗೆ ಒದಗಿಸಿದ್ದಾರೆ. ಸುಮಾರು ಎರಡೂವರೆ ಸಾವಿರ ವರ್ಷಗಳ ಹಿಂದಿನ ಸಮ್ರಾಟನೊಬ್ಬನ ಜೀವನ ಪ್ರಸಂಗವನ್ನು ಕಾದಂಬರಿಯಲ್ಲಿ ಕೊಡಲು ಮುನ್ನಿಸಿದ್ದಾರೆ. ಅಂದಿನ ಎರಡು ರಾಜ್ಯಗಳಲ್ಲಿ ನಡೆದ ಹೋರಾಟದ ಹಿನ್ನೆಲೆಯಲ್ಲಿ ಸುಂದರ ಪ್ರಣಯ ಕಥೆಯನ್ನು ವಿರಚಿಸಿದ್ದಾರೆ. ಆ ಶ್ರಮಣ ಧರ್ಮದ ವಾತಾವರಣದಲ್ಲಿ ನಿರೂಪಿಸಿದ ಕಥೆಯು ಬೆಳವಣಿಗೆಗೊಂದು ನೈಜತೆ ಬಂದಿದೆ. ಇಂಥ ಸುಂದರ ಕೃತಿಯನ್ನು ಬರೆದು ಕೊಟ್ಟದ್ದಕ್ಕೆ ನಾವು ಶ್ರೀ. ಮಿರಜಿ ಯವರಿಗೆ ಕೃತಜ್ಞತೆಯ ವಂದನೆಯನ್ನು ಅರ್ಪಿಸುತ್ತೇವೆ.

ಬೆಳಗಾಂವಿ.
ತಾ. ೫-೯-೫೪

ತಮ್ಮ,
ಎ. ಪಿ. ಚೌಗುಲೆ.

ಮುದ್ರಕರು ಮತ್ತು ಪ್ರಕಾಶಕರು,
ಎ. ಪಿ. ಚೌಗುಲೆ,
ವೀರಭಾರತ ಮುದ್ರಣಾಲಯ, ಬೆಳಗಾಂವಿ.

ಪ್ರಸ್ತಾವನೆ.

'ಸಮ್ರಾಟ್ ಶ್ರೇಣಿಕ' ಎಂಬುದಿದು ಐತಿಹಾಸಿಕ ಚಿಕ್ಕ ಕಾದಂಬರಿಯು. ಶ್ರೇಣಿಕನು ಜೈನ ಪುರಾಣಿಕ ವ್ಯಕ್ತಿಯು. ಇವನು ಜೈನ ಪುರಾಣಗಳನ್ನೆಲ್ಲ ಭಗವಾನ್ ಮಹಾವೀರ ತೀರ್ಥಂಕರರ ಮುಖದಿಂದ ಸಮವಸರಣದಲ್ಲಿ ಆಲಿಸಿದ ಶ್ರಾವಕ ಮುಖ್ಯನೆಂದು, ಜೈನ ಸಾಹಿತ್ಯದಲ್ಲಿ ಪೂಜ್ಯ ವ್ಯಕ್ತಿಯೆನಿಸಿಕೊಂಡಿದ್ದಾನೆ. ಇಷ್ಟೇ ಅಲ್ಲ, ಶ್ರೇಣಿಕನನ್ನು ಭವಿಷತ್ ಕಾಲದ ತೀರ್ಥಂಕರನಾಗುವ ಜೀವವೆಂದು ಜೈನ ಪರಂಪರೆಯು ಮನ್ನಿಸುತ್ತ ಬಂದಿದೆ. ಈ ಪವಿತ್ರ ವ್ಯಕ್ತಿಯೇ ಭಾರತೀಯ ಇತಿಹಾಸದಲ್ಲಿ ಮಗಧ ದೇಶದ ಪ್ರಸಿದ್ಧ ಅರಸನಾದ ಬಿಂಬಿಸಾರನೆಂದು ಪ್ರಸಿದ್ಧನಾಗಿದ್ದಾನೆ. ಇವನು ಕ್ರಿಸ್ತ ಪೂರ್ವ ೬೦೧ ರಿಂದ ೫೫೨ ರ ವರೆಗೆ ರಾಜ್ಯವಾಳಿದನೆಂದು ಇತಿಹಾಸಕಾರರು ತಿಳಿಯುತ್ತಾರೆ. ಇವನ ಆಳಿಕೆಯಲ್ಲಿ ಮಗಧ ರಾಜ್ಯವು ಒಳ್ಳೇ ಘನತೆಗೇರಿತ್ತು.

ಬಿಂಬಿಸಾರನು ಮೊದಲು ಬೌದ್ಧ ಧರ್ಮಿಯಾಗಿದ್ದನು. ಮುಂದೆ ಚೇಳನಾದೇವಿಯ ಪ್ರಭಾವದಿಂದ ಜೈನ ಧರ್ಮವನ್ನು ಸ್ವೀಕರಿಸಿ, ಭ. ಮಹಾವೀರರ ಶ್ರೇಷ್ಠ ಭಕ್ತನೆನಿಸಿದನು. ಇವನ ಈ ರಾಣಿ ಚೇಳನಾ, ಚೇಟಕನ ಕಿರಿಯ ಮಗಳು. ವೈಶಾಲಿಯ ಅರಸುಗುವರಿ. ಇವಳನ್ನು ಅಪಹರಿಸಿ ತಂದು ವರಿಸಬೇಕಾಯಿತು. ಶ್ರೇಣಿಕ ಹೀಗೆ ಚೇಟಕ ಹಾಗೂ ಬಿಂಬಿಸಾರ ಅರಸರಲ್ಲಿ ಭಿನ್ನ ಮತಗಳಿದ್ದುವು. ಒಬ್ಬ ಗಣರಾಜ, ಇನ್ನೊಬ್ಬ ಸಮ್ರಾಟ್. ಒಬ್ಬ ಜೈನ, ಮಗುದೊಬ್ಬ ಬೌದ್ಧ. ಈ ಧರ್ಮದ್ವಂದ್ವಕ್ಕೆ ಚೇಳನಾ ಸೇತುವೆಯಾದಳು. ಭ. ಮಹಾವೀರ ಅದನ್ನು ಹತ್ತಿ ಮುನ್ನಡೆದರು.

ವೈಶಾಲಿಯ ರಾಜ್ಯಪದ್ಧತಿ ಹಾಗೂ ನಗರ ವರ್ಣನೆಗಳನ್ನು ನಾವು ಬೌದ್ಧ ಸಾಹಿತ್ಯದಲ್ಲಿ ಕಾಣಬಹುದು. ಅದರಂತೆ ಮಗಧದ ರಾಜಧಾನಿಯಾದ ರಾಜಗೃಹದ ವರ್ಣನೆಯನ್ನು ಪರದೇಶದ ಪ್ರವಾಸಿಕರ ವರ್ಣನೆಗಳಿಂದಲೂ ಇತರ ಪುರಾಣ ಗ್ರಂಥಗಳಿಂದಲೂ ತಿಳಿಯಬಹುದು. ಇವುಗಳಿಂದ ಅಂದಿನ ವಾತಾವರಣವನ್ನು ಕಲ್ಪಿಸಿಕೊಳ್ಳಲಿಕ್ಕೆ ತನ್ನ ನೆರವು ಸಿಕ್ಕುವುದು. ಅದರ ಜೊತೆಗೆ ಉತ್ತರ ಭಾರತದ ನನ್ನ ಪ್ರವಾಸದಲ್ಲಿ

ರಾಜಗೃಹ ವೈಶಾಲಿಗಳ ಇಂದಿನ ಅವಶೇಷಗಳನ್ನೂ ನೋಡುವ ಅವಕಾಶವೂ ಲಭಿಸಿತ್ತು. ಅಂದಿನ ವರ್ಣನೆಗೆ ಇಂದು ಕುರುಹುಗಳನ್ನೂ ನಾವು ಅಲ್ಲಿ ಕಾಣುತ್ತೇವೆ. ಈ ಸ್ಥಳ ನಿರೀಕ್ಷಣೆಯಿಂದ ಆಗಲೇ ನನ್ನ ಮನಸ್ಸಿನಲ್ಲಿ ಕಥೆಯು ರೂಪು ಮೂಡಿ ನಿಂತಿತು. 'ಜೈನ ಧರ್ಮ' ಗ್ರಂಥವನ್ನು ಬರೆಯುವಾಗ ಅಲ್ಲಲ್ಲಿ ಓದಿದ ಶ್ರೇಣಿಕನ ಕಥೆಗಳಿಂದ ಅದಕ್ಕೊಂದು ಕಾಂತಿ ಮೈಗೂಡಿತು, ಅದೇ ಈ ಚಿಕ್ಕ ಕಾದಂಬರಿಯಲ್ಲಿ ಮೈದಾಳಿ ನಿಂತಿದೆ. ಇದರಲ್ಲಿ ಬರುವ ಬಿಂಬಿಸಾರ ಅರ್ಥಾತ್ ಶ್ರೇಣಿಕ, ಮಹಾವೀರ, ಅಜಾತಶತ್ರು ಮೊದಲಾದವರೆಲ್ಲ ಐತಿಹಾಸಿಕ ವ್ಯಕ್ತಿಗಳು; ಚೇಳನಾ, ಸುಜ್ಯೇಷ್ಠೆಯರನ್ನು ಇತಿಹಾಸದಲ್ಲಿ ಸೇರಿಸದಿದ್ದರೂ ಪುರಾಣ ಸಾಹಿತ್ಯದಲ್ಲಿ ಅವರನ್ನು ನಾವು ಗುರುತಿಸುತ್ತೇವೆ. ಪುರಾಣ ಕಥೆ, ಇತಿಹಾಸಗಳ ಮಧುರ ಸಂಗ್ರಹದಿಂದ ಈ ಕಥೆಯನ್ನು ಹೆಣೆಯಲಾಗಿದೆ. ನನಗೆ ತಿಳಿದ ಮಟ್ಟಿಗೆ ಪಾತ್ರಗಳ ರುಚಿ, ಶುಚಿಗಳನ್ನು ಕಾಯ್ದುಕೊಳ್ಳಲಿಕ್ಕೆ ಯತ್ನಿಸಲಾಗಿದೆ. ಅದರಂತೆ ಕಥೆಯ ನಿರೂಪಣೆಗೂ ಒಂದು ವಿಶಿಷ್ಟ ತಂತ್ರವನ್ನು ಬಳಿಸಿಕೊಳ್ಳಲಿಕ್ಕೆ ಯತ್ನಿಸಿದೆ. ಇದರಿಂದ ಕಾದಂಬರಿಯು ಓದುಗರ ಮನಸ್ಸನ್ನು ಆಕರ್ಷಿಸುವದೆಂದು ನಂಬಿರುವೆ. ಇದನ್ನು ಪ್ರಕಟಿಸಲು ನೆರವಾದ ಅಜಿತ ಪ್ರಕಾಶನದ ಒಡೆಯರಿಗೆ ನನ್ನ ವಂದನೆಗಳು ಸಲ್ಲಬೇಕು.

ಉಗಾರ
ಪರ್ಯುಷಣ ಪರ್ವ
ತಾ. ೮-೯-೧೯೫೪

ತಮ್ಮ,

ಶ್ರೀ. ಮಿರ್ಜಿ ಅಣ್ಣಾರಾಯರು.

೧

ಪಟ್ಟದರಸಿಯ ಪತ್ರಗಳು.

ಪ್ರಿಯ ಸುಜೇಷ್ಠಾ,

ಅಂದು ನಿನ್ನನ್ನು ಕೋಣೆಯಲ್ಲಿ ಹಾಕಿ, ಬಾಗಿಲ ಮುಚ್ಚಿಕೊಂಡು, ನೆಟ್ಟಗೆ ದ್ಯುತಿಪಲಾಳ ವನಕ್ಕೇನೇ ಬಂದು ಬಿಟ್ಟೆ. ಅಷ್ಟರಲ್ಲಿ ನನ್ನ ಪ್ರಿಯಕರ ಅಲ್ಲಿ ಗೊತ್ತಾದ ಸ್ಥಳಕ್ಕೆ ಬಂದು ದಾರೀ ಕಾಯುತ್ತ ನಿಂತಿದ್ದ! ಇಬ್ಬರೂ ಸೇರಿ ನೋಡುನೋಡುವಷ್ಟರಲ್ಲಿ ವೈಶಾಲಿಯ ಆವರಣವನ್ನು ದಾಟಿ ರಾಜಗೃಹದ ರಾಜಮಾರ್ಗವನ್ನು ಹಿಡಿದೆವು. ಎಂಥ ವಾಯುವೇಗದ ಕುದುರೆಗಳವು! ಸಮ್ರಾಟ್ ಶ್ರೇಣಿಕನ ಪಟ್ಟದರಸಿಯನ್ನು ಕರೆದುಕೊಂಡು ಹೋಗಲಿಕ್ಕೆಂದೇ ಹುಟ್ಟಿಬಂದ ವಾಜಿಗಳವು. ಮಗಧದ ಮಹಾರಾಜನನ್ನು ಮಹಾರಾಣಿಯೊಡನೆ ತಮ್ಮ ಬೆನ್ನ ಮೇಲೆ ಕೂಡಿಸಿಕೊಂಡು ಓಡಲು ಅದಕ್ಕೂ ತುಂಬ ಹೆಮ್ಮೆ ಎನಿಸಿರಬೇಕು. ತಂದೆ ತಾಯಿ, ಅಕ್ಕ ತಂಗಿ, ಬಂಧು ಬಳಗಗಳ ಸಂಬಂಧವನ್ನೆಲ್ಲ ಸಂಪೂರ್ಣವಾಗಿ ಹರಿದೊಗೆದು, ಗಣತಂತ್ರ ರಾಜ್ಯ ಪದ್ಧತಿಯ ಅವಹೇಳನ ಮಾಡಿ, ಸರ್ವಾಧಿಕಾರಿತ್ವಕ್ಕೆ ಶರಣು ಹೋಗಿ, ಸಮ್ರಾಟ್‌ನ ಸಂಗಡ ಓಡಿ ಹೋಗುತ್ತಿರುವ ಚೇಟಕ ರಾಜಪುತ್ರಿ ಚೇಳಿನಿಗೇ ಇಷ್ಟು ಹೆಮ್ಮೆ ಎಂದ ಮೇಲೆ ಆ ಮೂಕ ಪಶುಗಳಿಗೇಕಿರಬೇಡ?

ಭಾವಜೀವಿ ನನ್ನಕ್ಕ! ನಿನ್ನ ಪಾಲಿನ ಪ್ರೇಮ ಸುಧೆಯನ್ನು ಸವಿಯುವುದಕ್ಕೆ ನಿನ್ನನ್ನು ವಂಚಿಸಿ ನಾನಿಲ್ಲಿ ಬಂದುದಕ್ಕೆ ನನ್ನ ಮೇಲೆ ನೀನು ತುಂಬ ಕೆರಳಿರಬೇಕು. ನಿನ್ನ ಮೋಸಗಾತಿ ತಂಗಿಯನ್ನು ಒಂದುಸಲ ಕ್ಷಮಿಸುವೆಯಾ? ನಿನ್ನದು ಬಹಳ ಸರಳ ಸ್ವಭಾವ ತಾಯೀ! ಅಂಥ ಸರಳತನಕ್ಕೆ ಈ ಸಾಮ್ರಾಜ್ಞೀಪದವು ಸಾರ್ಥಕ್ಯವನ್ನು ಪಡೆಯದು. ಕುಲಕ್ಕೆ ಕಲಂಕವನ್ನು ಹಚ್ಚಿ, ಧರ್ಮ ಬಾಂಧವರನ್ನೆಲ್ಲ ದೂರಮಾಡಿ, ಇಲ್ಲಿ ಬಂದುದಕ್ಕೆ ಏನಾದರೂ ಅಂಥ ಕೆಲಸವನ್ನು ಸಾಧಿಸಬೇಡವೆ? ಇಲ್ಲದಿದ್ದರೆ ಈ ಪ್ರಣಯಕ್ಕೇನು ಅರ್ಥ? ಕೇವಲ ಇಂದ್ರಿಯ ಸುಖಲಾಲಸೆಗಾಗಿ ಚೇಟಕ

ಪುತ್ರಿ ಚೇಳಿನಿಯು ಇಷ್ಟೆಲ್ಲ ಯತ್ನಿಸಿದಳು, ಅಡ್ಡದಾರಿಗೆ ಇಳಿದಳು – ಎಂದರೆ ಲೋಕದಲ್ಲಿ ನನಗಿಂತ ಹಿರಿಯ ಪಾಪಿಗಳು ಯಾರಿದ್ದಾರೆ ಹೇಳು ತಾಯೀ ! ಅಕ್ಕರೆಯ ಅಕ್ಕನ ಪ್ರಣಯ ಸಮಾಧಿಗೆ ಹೂವೆರಿಸುವ ಸೌಭಾಗ್ಯ ನನಗೆ ನಿಜವಾಗಿಯೂ ಬೇಕಿರಲಿಲ್ಲ. ಈ ಮಾತನ್ನು ನಂಬುವಿಯಷ್ಟೆ. ನಂಬು ! ಅಕ್ಕ ನಿನ್ನ ತಂಗಿಯ ಈ ಮಾತನ್ನು ನಂಬು ! ಅಷ್ಟು ಸಂಶಯವುಳ್ಳ ಹೃದಯಿಯಾಗದಿರು !

ಎಂಥ ಸರಳ ಜೀವಿ ಅಕ್ಕ ನೀನು ! ಅಂದು ಚತುರ್ದಶಿಯ ದಿನ ತಾಯಿ – ತ್ರಿಶಲೆಯೊಡನೆ ಜಿನಮಂದಿರಕ್ಕೆ ಇರುಳನ್ನು ಕಳೆಯುವುದಕ್ಕೆ ಹೋದೆನೆಂದು ನಂಬಿದೆಯಲ್ಲ ನೀನು. ಆದರೆ ನಾನು ಮಾತೆಯನ್ನು ಧ್ಯಾನಕ್ಕೆ ತೊಡಗಿಸಿ, ತಿರುಗಿ ಬಸ್ತಿಯಿಂದ ಹೊರಟು ಬಂದೆ. ನಿನ್ನ ಅಂದಿನ ಚಟುವಟಿಕೆಯ ಅರ್ಥವೆಲ್ಲ ನನಗೆ ಆಗಿದ್ದಿತು. ಆ ಹಿಂದಿನ ಹುಣ್ಣಿವೆಯ ರಾತ್ರಿಯ ಪ್ರಸಂಗ – ನೀನು ನಿನ್ನ ಪ್ರಿಯಕರನೊಡನೆ ಕಳೆದ ಆ ಹುಣ್ಣಿವೆಯ ಬೆಳದಿಂಗಳಿನ ಇರುಳು – ನಾನೂ ನಿಮ್ಮಗೂಡ ಸಹಭಾಗಿಯಾಗಿದ್ದೆ. ಆದರೆ ನಿನ್ನಂಥ ಪ್ರಕಟಸುಖವನ್ನು ಅಂದು ನಾನನುಭವಿಸಲಿಲ್ಲ. ಮಲ್ಲಿಗೆಯ ಮರೆಯಲ್ಲಿ, ಗುಲಾಬಿಯ ಆಸರಕ್ಕೆ, ಜಾಜಿಯ ಆಚೆಗೆ ಕುಳಿತು ಕುಳಿತು ನನ್ನ ಹೃದಯೇಶ್ವರನನ್ನು ಕಣ್ಣು ತುಂಬ ನೋಡಿದೆ. ಅಕ್ಕ, ನಿಮ್ಮ ಬೇಟವನ್ನು ಮರೆಗೆ ಕುಳಿತು ನೋಡಿದ ಕಳ್ಳಿಯೆಂದು ಹಳಿಯದಿರು ತಾಯೀ !

ಸಾಮ್ರಾಟ್‌ನ ದರ್ಶನ ನಿನಗಾಗ ಹೊಸದಾಗಿರಬಹುದು. ಆದರೆ ನಾನು ಅವರನ್ನು ಬಹುದಿನಗಳ ಹಿಂದೆಯೇ ಕಂಡು ಮೆಚ್ಚಿಕೊಂಡಿದ್ದೆ ಆ ಸುಂದರ ಮೂರುತಿಯನ್ನು ಸ್ಮೃತಿಯ ಸಂಪುಟದಲ್ಲಿಟ್ಟು ಸಲಹಿದ್ದೆ. ನಿನ್ನಷ್ಟು ಅಪರಿಚಿತರಾಗಿರಲಿಲ್ಲ ಶ್ರೇಣಿಕ ಮಹಾರಾಜರಂದು !

ಬಹುದಿನಗಳ ಹಿಂದಿನ, ಸಂಗತಿಯೊಂದು ನಿನಗೆ ನೆನಪಿರಬಹುದಲ್ಲ ಬಿಂಬಿಸಾರ ಮಹಾರಾಜರ ಹಸ್ತದಿಂದ ನಾಲಂದ ವಿಶ್ವವಿದ್ಯಾಲಯದ ಸ್ನಾತಕರಿಗೆ ಪ್ರಮಾಣ ಪತ್ರ ಹಂಚುವ ಉತ್ಸವ ನಡೆಯಿತು. ಆಗ ನಾನು ಸಿದ್ಧಾರ್ಥರೊಡನೆ ನಾಲಂದಕ್ಕೆ ಹೋಗಿದ್ದೆ. ನಮ್ಮ ವರ್ಧಮಾನರಿಗೆ ಆ ಸಮಾರಂಭದಲ್ಲಿ ಸನ್ಮಾನಿಸುವ ಯೋಜನೆಯನ್ನು ಕುಲಪತಿಗಳು ಇಟ್ಟು

ಕೊಂಡಿದ್ದರಲ್ಲ. ಆ ಸಮಯದಲ್ಲಿ ಶ್ರೇಣಿಕರನ್ನು ಕಂಡು ಮಾತನಾಡುವ ಪ್ರಸಂಗ ನನ್ನ ದೈವಯೋಗದಿಂದ ದೊರಕಿತ್ತು. ವಿಶಾಲವಾದ ಪೀಠದ ಮೇಲೆಯೇ ನಾವೆಲ್ಲ ಹತ್ತಹತ್ತಿರ ಕುಳಿತಿದ್ದೆವು. ಆಗ ಪರಿಚಯವಾಯಿತು. ಅಂದಿನಿಂದ ನನ್ನನ್ನೇ ಮನಸ್ಸಿನಲ್ಲಿ ನೆನೆಯುತ್ತಿದ್ದರಂತೆ! ನಾನು ಕೂಡ ಹಾಗೆಯೇ! ಆದರೆ ಯಾವುದೋ ಒಂದು ದೈವಯೋಗ ನಮ್ಮನ್ನು ದೂರ ಮಾಡುವುದರಲ್ಲಿತ್ತು.

ಅಕ್ಕ! ನಿನ್ನ ಕೂಡ ಅವರು ಗುಪ್ತಗುಹೆಯ ಮಾರ್ಗವಾಗಿ ನಮ್ಮ ಉಪವನದಲ್ಲಿ ಬಂದು ವಿಹರಿಸುತ್ತಿದ್ದುದು ನಾನೇ ಎಂದು ಭಾವಿಸಿಯೇ ಇಂಥ ಭಾವನೆಯು ಅವರಲ್ಲಿ ಬೆಳೆಯುವಂತೆ ಮಾಡಿದವರು ರಾಜಕುಮಾರ. ಅಭಯಕುಮಾರ. ಅಂದಿನ ಆ ಬ್ರಹ್ಮಚಾರಿಗಳು. ಈ ನಮ್ಮ ರೂಪಸಾದೃಶ್ಯವೇ ನನಗೆ ಸಾಮ್ರಾಟ್‌ನೊಡನೆ ಹೊರಟು ಬರಲು ಅನುಕೂಲತೆಯನ್ನು ಒದಗಿಸಿ ಕೊಟ್ಟಿತು. ಏನೇ ಆಗಲಿ. ಈ ಸಾಮ್ರಾಟ್‌ನ ಸುವರ್ಣ ಪಂಜರದಲ್ಲಿ ಬಂದು ಸಿಕ್ಕ ಪಕ್ಷಿ ನಾನು. ಅವರು ಎಷ್ಟು ಪ್ರೀತಿಯಿಂದ ಸಲಹಿದರೂ ತಮ್ಮ ಸುಖಕ್ಕಾಗಿಯೇ ಹೊರತು, ಪಕ್ಷಿಯ ಸಂತಸಕಲ್ಲವಲ್ಲ! ತನ್ನೊಡೆಯನ ಸುಖದಲ್ಲಿಯೇ ತನ್ನ ಸುಖವನ್ನೂ ಕಾಣಲು ಕಲಿಯಬೇಕಲ್ಲ ನಾವು. ಇರಲಿ. ಕೊನೆಗೆ ಮಹಾಪರಾಧವನ್ನು ಮಾಡಿದ ಈ ನಿನ್ನ ತಂಗಿಯನ್ನೊಮ್ಮೆ ಪೂರ್ಣ ಕ್ಷಮಿಸುವಿಯೆಂದು ನಂಬಿರುವೆ. ನಿನ್ನ ಪತ್ರದ ದಾರಿಯನ್ನೇ ಕಾಯುತ್ತಿರುವ

ಯಾವಾಗಲೂ ನಿನ್ನವಳಾದ,
ಚೇಳನಾದೇವಿ.

೨

ಕರುಳಿನ ಅಕ್ಕ ಸುಜೇಷ್ಠಾ,

ಹಿಂದಿನ ನನ್ನ ಪತ್ರಕ್ಕೆ ನಿನ್ನ ಉತ್ತರವೇ ಇಲ್ಲ. ನನ್ನ ಮೇಲೆ ಎಷ್ಟು ಮುನಿದಿರುವಿಯೋ ತಾಯೀ! ಈ ಪತ್ರಕ್ಕಾದರೂ ಉತ್ತರ ಕಳಿಸುವಿಯೆಂದು ಆಶಿಸಿದ್ದೇನೆ. ಬರೆಯುವಿಯಲ್ಲ ಅಕ್ಕ?

ಮನೆಯಲ್ಲಿ ಅಪ್ಪ ಅಕ್ಕಂದಿರು ಎಲ್ಲರೂ ನನ್ನ ಮೇಲೆ ತುಂಬ ಸಿಟ್ಟಾಗಿರಬೇಕಲ್ಲ. ತಂದೆಯವರಂತೂ ನನ್ನ ಮುಖವನ್ನೇ ನೋಡಲು ಸಿದ್ಧರಿರ

ಲಿಕ್ಕಿಲ್ಲ! ನನ್ನ ನಡತೆಗಾಗಿ ಅವರೆಷ್ಟು ನೊಂದುಕೊಂಡರೋ! ಎಲ್ಲ ಗಣರಾಜರನ್ನು ಸೇರಿಸಿ ರಾಜಗೃಹದ ಮೇಲೆ ದಂಡೆತ್ತಿಬರುವ ನಿರ್ಣಯ ವನ್ನೂ ಮಾಡಿದ್ದರಂತೆ. ಅದನ್ನು ಸನ್ಮತಿಯೊಬ್ಬನೇ ವಿರೋಧಿಸಿ ತಡೆದ ನಂತೆ! ಇದೆಲ್ಲ ರಾಜಗೃಹದ ಅರಮನೆಯಲ್ಲಿ ಕುಳಿತ ಇವಳಿಗೆ ಹೇಗೆ ತಿಳಿಯಿ ತೆಂದು ಆಶ್ಚರ್ಯ ಪಡಬೇಡ ಅಕ್ಕ! ಸಮ್ರಾಟ್ ಶ್ರೇಣಿಕನ ಗುಪ್ತಚಾರರ ತಂಡ ಎಲ್ಲೆಲ್ಲಿಯೂ ವ್ಯಾಪಿಸಿದೆ. ಈ ರಾಜರು ರಾಜಕಾರಣದಲ್ಲಿ, ಗೃಹ ಕಾರಣದಲ್ಲಿ ಎಷ್ಟು ನಿಪುಣರೆಂಬುದನ್ನು ನಿನಗೆ ಬೇರೆ ಹೇಳಬೇಕಿಲ್ಲ. ವರ್ಧಮಾನ ಆ ಸಮರ ಸನ್ನಾಹದಿಂದ ಗಣ ರಾಜರನ್ನೆಲ್ಲ ಪರಾವೃತ್ತ ಗೊಳಿಸಿದ್ದೇ ಚೆನ್ನಾಯಿತು. ಇಲ್ಲದಿದ್ದರೆ ರಕ್ತದ ಹೊಳೆ-ಹರಿಯುತ್ತಿದ್ದಿತು. ಸಾಮ್ರಾಜ್ಯದ ಸೈನ್ಯ ತುಂಬ ಬಲಿಷ್ಠವಾಗಿದೆ. ಅದನ್ನು ಎದುರಿಸುವುದು ಗಣರಾಜರಿಗೆ ಸುಲಭ ಸಾಧ್ಯವಲ್ಲ! ಅವರಲ್ಲೂ ರಾಜಗೃಹ ನಗರದ ಮೇಲೆ ದಂಡೆತ್ತಿ ವಿಜಯವನ್ನು ಸಂಪಾದಿಸುವುದು ದುಸ್ತರವಾದ ಸಂಗತಿಯೇ. ಅಷ್ಟು ಭದ್ರವಾದ ಸ್ವಾಭಾವಿಕ ದುರ್ಗದಿಂದ ನಿರ್ಮಾಣವಾಗಿದೆ ಈ ಗಿರಿವ್ರಜ ನಗರ!

ಈ ರಾಜಧಾನಿಯ ಸ್ಥೂಲ ಕಲ್ಪನೆಯನ್ನಾದರೂ ನಿನಗೆ ಮಾಡಿ ಕೊಡಲಿಕ್ಕೆ ಹೋದರೆ ನೀನೇನೆಂದು ಭಾವಿಸುವಿಯೋ ಅಕ್ಕ! ಅಲ್ಲಿ ಕುಳಿತು ತನ್ನ ವೈಭವನ್ನು ಮೆರೆಸುವಳೆಂದು ಮಾತ್ರ ದಯಮಾಡಿ ತಿಳಿಯಬೇಡ. ಈ ನಗರದಲ್ಲಿ ರಾಜಾಜ್ಞೆಗೆ ವಿರೋಧವಾಗಿ ಒಂದು ಇರುವೆಯೂ ಸಹ ಪ್ರವೇಶಿಸಲು ಸಾಧ್ಯವಿಲ್ಲ! ನಗರದ ಸುತ್ತಲೂ ವೈಭಾರ, ವಿಪುಲ, ರತ್ನ ಚೈತ್ಯ, ಉದಯ ಮತ್ತು ಸೋನಗಿರಿಗಳಿಂದ ಪ್ರಕೃತಿ ಸಿದ್ಧವಾದ ಕೋಟೆ ನಿರ್ಮಾಣವಾಗಿದೆ. ಈ ಪ್ರಕೃತಿಯನ್ನೇ ನೆಚ್ಚಿ ಕುಳಿತ ಜನವಲ್ಲವಿದು! ಆ ಗುಡ್ಡಗಳ ಮೇಲೆಯೂ ಹದಿನೆಂಟು ಅಡಿ ಅಗಲಳತೆಯುಳ್ಳ ಬಂಡೆ ಗಲ್ಲುಗಳ ಒಣ ಗೋಡೆಯನ್ನು ನಿರ್ಮಿಸಿದ್ದಾರೆ! ಅದೂ ಎತ್ತರವಾದುದು. ಇದು ಹೊರಗಿನ ಕೋಟೆಯಾಯಿತು. ಇವಲ್ಲದೆ ನಗರಕ್ಕೆ ಒಳಕೋಟೆಯೂ ಒಂದೂ ಅದಕ್ಕೂ ಭದ್ರವಾದುದಿದೆ. ಇಂಥ ಮಹಾನಗರಿಗೆ ಹೊರಗೆ ಹೋಗಲು ಮೂರೇ ಮೂರು ದ್ವಾರಗಳು. ಉತ್ತರ, ಪಶ್ಚಿಮ ಮತ್ತು ದಕ್ಷಿಣ ದಿಕ್ಕುಗಳಲ್ಲಿ, ಅವೂ ಪರ್ವತದ ಕಣಿವೆಗಳಿಂದಾದ ಸ್ವಾಭಾವಿಕ ಮಾರ್ಗ

ಗಳು. ಆದರೆ ಇವುಗಳ ಹತ್ತಿರವೂ ಯಾವಾಗಲೂ ಬಿಗಿಯಾದ ಕಾವಲು ಇರುತ್ತದೆ. ಅದರಲ್ಲೂ ಉತ್ತರದ ದ್ವಾರವೇ ರಾಜಧಾನಿಯ ಮುಖ್ಯ ಹೆಬ್ಬಾಗಿಲು. ಇಲ್ಲಿಂದ ದಕ್ಷಿಣದ ಮಹಾದ್ವಾರದ ವರೆಗೂ ಸುಂದರವಾದ ಅರಮನೆಯ ಬೀದಿ ಹಬ್ಬಿದೆ.

ಅಕ್ಕ ! ಸಾಮ್ರಾಜ್ಞಿ ಪದದ ಮೋಹಕ್ಕೆ ಬಲಿಬಿದ್ದು, ದೀಪಕ್ಕೆರಗುವ ಹುಳದಂತೆ ಇಲ್ಲಿ ಬಂದು ಬಿದ್ದಿರುವೆ. ನಾನಿರುವ ಮನೆಯ ಸುತ್ತಲೂ ಇನ್ನೂ ಅನೇಕ ಸಾಮಾಜ್ಞಿಯರ ಸುಂದರ ಗೃಹಗಳಿವೆ. ಈ ಸಾಮ್ರಾಟ್‌ನಿಗೆ ನಾನೊಬ್ಬಳೇ ಸಾಮ್ರಾಜ್ಞಿಯಲ್ಲ ! ನನ್ನಂತೆ ಅನೇಕ ಜನ ಮಹಿಷಿಯರಿದ್ದಾರೆ ! ಅವರೆಲ್ಲ ನನ್ನಂತೆ ಸಾಮ್ರಾಜ್ಞಿಪದದ ಮೋಹಕ್ಕೆ ವಶರಾಗಿಯೇ ಇಲ್ಲಿ ಬಂದು ಸಿಕ್ಕಿ ಬಿದ್ದದು. ಒಬ್ಬರೋ ಇಬ್ಬರೋ ! ನೂರಾರು ಸ್ತ್ರೀರತ್ನಗಳು ವಿದರ್ಭ, ಗುರ್ಜರ, ಗಾಂಧಾರ, ತಾರ್ತರ ಮತ್ತು ಕಾಮರೂಪ ದೇಶಗಳಿಂದ ಬಂದು ಇಲ್ಲಿ ಸೆರೆಯಲ್ಲಿ ಸಿಕ್ಕಿವೆ. ಇಂದು ಅವರ ಸ್ಥಿತಿಯನ್ನು ಏನೆಂದು ಹೇಳಲಿ ತಾಯೀ ! ಇವು ರಾಣಿಯರ ಮಹಲುಗಳಲ್ಲ ಅಕ್ಕ ! ಸಮ್ರಾಟ್‌ನ ಕಾಮಲಾಲಸೆಯನ್ನು ಪೂರ್ಣಗೊಳಿಸುವದಕ್ಕಾಗಿ ಹಿಡಿದು ತಂದಿಟ್ಟ ರಾಜ ಕುಮಾರಿಗಳ ಕಾರಾಗೃಹಗಳು. ಇಂಥ ಒಂದು ಸುಂದರ ಸೆರೆಮನೆಯಲ್ಲಿ ನಾನಿರುವೆ. ಇನ್ನೂ ಹೊಸಬಳೆಂದು ನನ್ನ ಮೇಲೆ ಸಮ್ರಾಟ್‌ನ ಪ್ರೇಮ ಗಾಢವಾಗಿರುವುದು. ಯಾವ ಕ್ಷಣದಲ್ಲಿ ನವೀನ ಪಕ್ಷಿಯ ಮೇಲೆ ಇವರ ದೃಷ್ಟಿ ಹೊರಳೀತೋ ಹೇಳಲಿಕ್ಕೆ ಬರುವಂತಿಲ್ಲ !

ಹೂಂ ! ಏನನ್ನು ಹೇಳಲಿಕ್ಕೆ ಹೋಗಿ, ಎತ್ತ ಸಾಗಿದೆನೋ ಹುಚ್ಚಿ ನಾನು. ಇರಲಿ ನಾನಿರುವ ಮಹಲು ಬಹು ಸುಂದರವಾದ ಆವರಣದಲ್ಲಿ ನಿರ್ಮಿಸಲಾಗಿದೆ. ಹಿಂದೆ ವಿಸ್ತಾರವಾದ ಬನಗಂಗಾ ಕಣಿವೆ. ಬಹು ರಮಣೀಯವಾದ ಸೃಷ್ಟಿ ಸೌಂದರ್ಯದ ಬೀಡದು. ಪೂರ್ವದ ಕಿಡಕಿಯಿಂದ ಹೊರಗೆ ನೋಡಿದರೆ ವಿಸ್ತಾರವಾದ 'ಬಿಂಬಿಸಾರ ಬೀದಿ' ಗಿರಿಧರ ಕೂಟದ ಮೇಲಿಂದ ಹಾಯ್ದು ಚೈತ್ಯಗಿರಿಯವರೆಗೂ ಹೋಗಿದೆ. ಆ ಬೀದಿಯ ಒಂದು ಮಗ್ಗಲಿಗೆ ಸುಂದರವಾದ ಹೂದೋಟವಿದೆ. ಇದಕ್ಕೆ 'ಜೀವಕವನ'ವೆಂದು ಹೆಸರು. ಜೀವಕನು ನಮ್ಮ ಆಸ್ಥಾನದ ಪ್ರಸಿದ್ಧ ವೈದ್ಯನು. ಅವನು ಈ ವನದಲ್ಲಿ ವಾಸವಾಗಿದ್ದುಕೊಂಡು ವೈದ್ಯಕೀಯ ಉಪಚಾರಗಳನ್ನು ಮಾಡು-

ತ್ತಾನೆ. ಇವನ ಮೇಲೆ ನಮ್ಮವರ ಶ್ರದ್ಧೆ ಬಹಳ. ಜೀವಕ ಒಳ್ಳೆಯ ಸಮಾಜ ಸೇವಕನು.

ಇನ್ನು ನಗರದ ಹೊರವಲಯುವು ಕೂಡ ಬಹು ಸುಂದರವಾದುದು. ವಿಪುಲಗಿರಿಯ ಕಡೆಗೆ ಒಂದು ಸಾಯಂಕಾಲ ಸಂಚರಿಸಲು ಹೋಗಿದ್ದೆ. ಎಂಥ ರಮ್ಯಸ್ಥಳವದು. ಅಲ್ಲಯೇ ಕೆಳಗೆ ತಪ್ತೋದಾ ನದಿಯು ಹರಿಯುತ್ತಿದೆ. ಅಲ್ಲಲ್ಲಿ ಅನೇಕ ಬುಗ್ಗೆಗಳು ! ಶತ ಧಾರಾ ಬುಗ್ಗೆಯಂತೂ ಯಾವಾಗಲೂ ತಿಳಿ ಜಲವನ್ನು ಚಿಮ್ಮುತ್ತಿರುತ್ತದೆ. ಇತ್ತ ಹೊರಳಿದರೆ ವೇಣುವನ ಅತ್ತ ಹೊರಳಿದರೆ 'ತಪ್ತೋಧರ್ಮ' ಬನ. ಎಲ್ಲೆಡೆಗೂ ಸೃಷ್ಟಿ ದೇವಿಯು ತನ್ನ ಸೌಂದರ್ಯದ ವರದನ್ನು ಈ ರಾಜಧಾನಿಗೆ ಇತ್ತಿದ್ದಾಳೆ! ಈ ವಿಪುಲಾಚಲದ ಮೇಲೆ ಸುಂದರ ಜಿನ ಮಂದಿರಗಳಿರುತ್ತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ! ಎಂದೆನಿಸುವುದು. ಮಹಾರಾಜರ ಮನಸ್ಸನ್ನು ಇತ್ತ ಸೆಳೆಯಬೇಕು. ಇಲ್ಲದಿದ್ದರೆ ನಾನವರನ್ನು ಲಗ್ನವಾಗಿ ಫಲವೇನು ? ಉಳಿದ ರಾಣಿಯರಂತೆ ಸೆರೆ ಮನೆಯಲ್ಲಿ ಸಿಕ್ಕು ಒದ್ದಾಡಲೇ ? ಕುಲಗೆಡಿಸಿಕೊಂಡು ಆತ್ಮ ಘಾತವನ್ನು ಮಾಡಿಕೊಳ್ಳಲೇ ? ಅದೆಂದಿಗೂ ಆಗದು ಅಕ್ಕ ನನ್ನಿಂದ ಏನಾದರೊಂದು ಅಹಿಂಸಾಮಯ ಕ್ರಾಂತಿ ನನ್ನಿಂದ ಈ ಸಮ್ರಾಟ್‌ರಲ್ಲಿ — ಸಾಮ್ರಾಜ್ಯ ಶಾಹಿಯಲ್ಲಿ — ಆಗಿಯೇ ತೀರಬೇಕು. ಅದಕ್ಕಾಗಿ ಸರ್ವ ಸಿದ್ಧತೆಯನ್ನೂ ಮಾಡಿಕೊಳ್ಳುತ್ತಿರುವೆ. ನನ್ನ ಜೀವನವನ್ನೇ ಮೀಸಲಾಗಿಟ್ಟಿರುವೆ. ಒಂದು ಕ್ಷಣ, ನಿನ್ನನ್ನು ವಂಚಿಸಿ ಸಮ್ರಾಟ್‌ನ ಬೆನ್ನು ಹತ್ತಿ ಓಡಿ ಬರಲಿಕ್ಕೆ ಇದೇ ಕಾರಣವೆಂದು ಭಾವಿಸು. ಅಕ್ಕ ! ನನ್ನ ಈ ಮಾತುಗಳನ್ನೆಲ್ಲ ನಂಬುವಿಯಷ್ಟೆ ?

ನಂಬುಗೆ ಇದ್ದರೆ ಒಂದು ಸಾಲು ಉತ್ತರ ಬರೆದು ಕಳಿಸು. ನಿನ್ನ ತಂಗಿಯ ಹೃದಯವನ್ನು ಅರಳಿಸು. ಉತ್ತರ ಬರೆಯಲಾರಿಯಾ ಅಕ್ಕ ? ಆಂ ! ಅಕ್ಕ ?

ನಿನ್ನ ಉತ್ತರ ನಿರೀಕ್ಷಿಸುತ್ತಿರುವ
ಚೇಳನಾ.

೩

ಮಮತೆಯ ಅಕ್ಕ !

ನಿನ್ನಿಂದ ಉತ್ತರ ಬಂದು ನನಗೆ ತಂದೆತಾಯಂದಿರ ಕ್ಷೇಮ ತಿಳಿದೀತೆಂದು ತುಂಬ ನಿರೀಕ್ಷಿಸಿದ್ದೆ. ನನ್ನ ಆಶೆ ಸಫಲವಾಗುವಂತೆ ಕಾಣಲಿಲ್ಲ. ಹೆಂಗುಸಿಗೆ ತವರು ಮನೆಯ ಹಂಬಲ ಎಷ್ಟೆಂಬುದನ್ನೂ ತವರು ಮನೆಯಲ್ಲಿಯೇ ಹುಟ್ಟಿದಂದಿನಿಂದ ಇರುವ ನೀನು ಕಲ್ಪಿಸಿ ತಿಳಿಯಲಾರೆ. ಇಲ್ಲಿ ಎಂಥ ಸುಖದಲ್ಲಿದ್ದರೂ ನಾನು ಹಗಲಿರುಳೂ ವೈಶಾಲಿಯನ್ನೇ ನೆನೆಯುತ್ತ ಇರುವೆ. ನೆನೆನೆನೆದು ಕೊರಗುತ್ತಿರುವೆ.

ಹಿರಿಯಕ್ಕ ತ್ರಿಶಲಾದೇವಿಯ ಒಬ್ಬನೇ ಒಬ್ಬ ಮಗನಾದ ಮಹಾವೀರ ಮೊನ್ನೆ ಸನ್ಯಸನವನ್ನು ಸ್ವೀಕರಿಸಿದನೆಂದು, ಇಲ್ಲಿ ಬಂದ ಸುದ್ದಿಯು ನಿಜವಿರಬಹುದಷ್ಟೆ? ಇಂಥ ಪ್ರಸಂಗ ಏಕೆ ಒದಗಿ ಬಂತು? ಯಾತಕ್ಕಾಗಿ ಅವರಿಗೆ ಸಂಸಾರದಲ್ಲಿ ವಿರಾಜ ಹುಟ್ಟಿತು ? ಈ ದೀಕ್ಷೆಗೆ ತ್ರಿಶಲೆಯು ಸಮ್ಮತಿಸಿದಳೆ ? ಸಿದ್ಧಾರ್ಥರು ಏನೆಂದರು ? ಮುಪ್ಪಿನ ನಮ್ಮ ತಂದೆಯವರಿಗೆ ಎಷ್ಟು ನೋವಾಗಿರಬೇಡ. ಮೊಮ್ಮಗನ ಈ ದೀಕ್ಷೆಯಿಂದ ಗಣರಾಜ್ಯದ ಒಂದು ಬಲಗೈಯೇ ಕಳಚಿ ಹೋದಂತಾಯಿತಲ್ಲ. ಎಂಥ ಸಂಕಟಕಾಲದಲ್ಲಿಯೂ ರಾಜ್ಯವನ್ನು ನೈತಿಕ ಪಾತಳಿಯಲ್ಲಿ ನಡೆಯಿಸಿಕೊಂಡು ಹೋಗುವ ಸಮರ್ಥರು ಅಲ್ಲಿ ಯಾರುಳಿದರು ?

ಈ ಚಿಂತೆಗೆ ಕಾರಣವೇನೆಂದು ನೀನಲ್ಲಿ ಕುಳಿತು ಊಹಿಸಲಾರಿಯಕ್ಕ ಭಗವಂತ ಎಲ್ಲ ಗಣರಾಜರ ಮನಸ್ಸನ್ನು ತಿರುಗಿಸಿ ರಾಜಗೃಹದ ಮೇಲಿನ ಲಿಚ್ಛವಿ ಹಾಗೂ ಮಲ್ಲರಾಜನ ದಾಳಿಯನ್ನು ತಡೆದ. ಅಂಥ ಭಗವಂತನ ಶಕ್ತಿ ಲೋಕದಲ್ಲಿ ಇನ್ನಾರಿಗಿದೆ ಹೇಳು ನೋಡುವ ? ಇಲ್ಲಿಂದ ಸಮ್ರಾಟ್‌ರು ವೈಶಾಲಿಯ ಮೇಲೆ ದಂಡೆತ್ತಿ ಹೋಗುವ ಸಿದ್ಧತೆಯನ್ನು ಮಾಡತೊಡಗಿದ್ದಾರೆ? ಅಕ್ಕ, ಅದೇಕೆಂದು ಕಾರಣ ಕೇಳಬೇಡ....

ಲೋಕದಲ್ಲಿ ನಮಗೆಲ್ಲ ಗೊತ್ತಿದೆ—ಎಂದು ನಾವು ಬಾಳುತ್ತಿರುವೆವಾದರೂ ನಮ್ಮ ಸುತ್ತ ಮುತ್ತಲು ಏನು ನಡೆದಿದೆ ಎಂಬುದರ ಅರಿವು ನಮಗಿರುವದಿಲ್ಲ. ನಮ್ಮ ಮನೆಯಲ್ಲಿಯೇ ನಮಗೆ ಗೊತ್ತಿಲ್ಲದೆಯೇ ಅನೇಕ ಸಂಗತಿ-

ಗಳು ನಡೆಯುತ್ತಿರುತ್ತವೆ. ನಾನೂ ನೀನೂ ಸಮ್ರಾಟ್‌ನೊಡನೆ ನಡೆಯಿಸಿದ ಗುಪ್ತ ಸಂಧಾನ ನಮ್ಮ ಮನೆಯಲ್ಲಿ ಎಷ್ಟು ಜನರಿಗೆ ಗೊತ್ತಿದ್ದಿತು ಹೇಳು. ನೋಡುವ? ಅಂದ ಮೇಲೆ ಊರ ಜನರಿಗೆ ಏನು ಗೊತ್ತಾಗುವುದು? ಇಂಥವೇ ಒಂದು ಆಪ್ತಾಲೋಚನೆ ವೈಶಾಲಿಯಲ್ಲಿ ನಡೆದಿದೆ. ಅದರ ಕಲ್ಪನೆಯೂ ಸಹ ನಿಮಗಾರಿಗೂ ಇರಲಿಕ್ಕಿಲ್ಲ. ಇಲ್ಲಿ ಮಾತ್ರ ನಮಗೆಲ್ಲ ಗೊತ್ತಾಗಿದೆ. ಇಂಥ ರಾಜಕಾರ್ಯದ ಮಾತುಗಳನ್ನೆಲ್ಲ ನಾ ನಿಮಗೆ ಬರೆದು ತಿಳಿಸಿ, ಪತಿದ್ರೋಹವನ್ನು ಎಸಗಬಾರದಾದರೂ ಮನಸ್ಸು ಕೇಳಲಾರದುದಕ್ಕೆ ಇದನ್ನೂ ಬರೆಯುತ್ತಿದುವೆ.

ಹಿಂದಕ್ಕೆ ನಮ್ಮ ರಾಜಗೃಹದ ರಚನೆಯ ವಿಷಯಕ್ಕೆ ನಿನಗೆ ಕಾಗದ ಬರೆದಾಗಲೇ ಒಂದು ಸಂಶಯ ನನಗೆ ಬಂದಿತ್ತು. ಇದೇ ಕಾಗದವು ರಾಜಧಾನಿಯ ಲಗ್ಗೆಗಾಳಕ್ಕೆ: ಸಾಧನವಾಗಿ ಏಕೆ ನಿಲ್ಲಲಾರದು? — ಎಂದು. ಆದರೆ ಗಣತಂತ್ರ ರಾಜ್ಯ ಪದ್ಧತಿಯಲ್ಲಿಯ ಒಳ್ಳೆಯ ಗುಣಗಳು ಹೀಗೆ ಮಾಡಲಿಕ್ಕೆ ಆಸ್ಪದ ಕೊಡಲಾರವೆಂದು ನನ್ನ ಪೂರ್ಣನಂಬುಗೆ ಇತ್ತು. ಅಂಥ ನಂಬುಗೆ ಮಾತ್ರ ಈ ಹಿಂಸಕ ಸಮ್ರಾಜ್ಯಶಾಹಿಯಲ್ಲಿ ಎಳ್ಳಷ್ಟು ಕಾಣಬರುವದಿಲ್ಲ! ಆದರೆ ತಿಪ್ಪೆಯನ್ನೇ ಉಪ್ಪರಿಗೆಯನ್ನಾಗಿ ಮಾಡಬೇಕಾಗಿದೆಯಷ್ಟೆ!

ಪುರುಷರನ್ನು ಎಂದೂ ನಂಬಲಿಕ್ಕಾಗದು ನೋಡಕ್ಕ! ನಿನ್ನ ಪ್ರಿಯಕರ ಯಾರನ್ನು ನೀನು ದೇವರೆಂದು ನಂಬಿ ಬೆನ್ನು ಹತ್ತಿ ಬರಲು ಸಿದ್ಧವಾಗಿದ್ದೆಯೋ ಅವರು — ಇಂದು ಇನ್ನೊಬ್ಬ ಸ್ತ್ರೀಯ ಮೋಹಕ್ಕೆ ಒಳಗಾಗಿ ಒದ್ದಾಡುತ್ತಿರುವರು. ಅವಳು ನಾನಲ್ಲ ಮತ್ತೆ! ನಾನೀಗ ಅವರಿಗೆ ಬಾಡಿದ ಹೂ! ಮುಡಿದು ಬೀಸಾಡಿದ ಮಲ್ಲಿಗೆ! ನನ್ನ ಮೇಲೆ ಇನ್ನೊಬ್ಬ ಸಾಮ್ರಾಜ್ಞಿ ಬರಲಿದ್ದಾಳೆ. ಅವಳು ನನ್ನ ನಿನ್ನಂತೆ ಕುಮಾರಿಕೆಯಲ್ಲ. ಶುದ್ಧ ವೇಶ್ಯೆ! ವೈಶಾಲಿಯ ವೇಶ್ಯೆಯನ್ನು ತಂದು ರಾಜಗೃಹದ ರಾಣಿಯನ್ನಾಗಿ ಮಾಡುವುದರಲ್ಲಿದ್ದಾರೆ. ಇಂದ್ರಿಯ ಸುಖದ ಬೆನ್ನು ಹತ್ತಿದವರಿಗೆ ಕೊನೆ ಮೊದಲಿದೆಯೇನೇ ಅಕ್ಕ?

ನನ್ನಂತೆ ಅಂಬಾಪಾಲಿಕೆಯನ್ನು ಕರೆದು ತಂದು ಮದುವೆಯಾಗಿದ್ದರೆ ಇನ್ನೂ ಚೆನ್ನಾಗಿತ್ತೇನೋ! ಆದರೆ ಸಮ್ರಾಟ್ ಹಾಗೆ ಮಾಡುವಂತೆ

ತೋರುವುದಿಲ್ಲ. ಅವರಿಗೆ ಗಣತಂತ್ರದ ಅಭೇದ್ಯ ಸಂಘಟನೆಯನ್ನು ಒಡೆಯ ಬೇಕಾಗಿದೆ. ಪ್ರಜಾ ಪ್ರಭುತ್ವದ ಪೊಳ್ಳುತನವನ್ನು ಜಗತ್ತಿಗೆ ತೋರಿಸಬೇಕಾ ಗಿದೆ. ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಬೇಕಾಗಿದೆ. ಅದಕ್ಕಾಗಿ ಈ ಯುದ್ಧ ಹೂಡಿದ್ದಾರೆ ! ಇದು ಸಾಮ್ರಾಜ್ಯಶಾಹಿ ಸಮತಾಭಾವಗಳ ಸಮರವಾಗಿದೆ.

ಒಮ್ಮೆ ವರ್ಧಮಾನ ಹೇಳಿದ ಮಾತು ಈಗ ನೆನಪಾಗುತ್ತಿದೆ. "ನಮ್ಮ ಗಣರಾಜ್ಯ ಪದ್ಧತಿಯಲ್ಲಿ ಇನ್ನೂ ರಾಜ್ಯದ ಸುಖ-ದುಃಖಗಳ ಕಲ್ಪನೆಯು ಜನತೆಯವರೆಗೂ ಬಂದು ಮುಟ್ಟಿಲ್ಲ. ಎಲ್ಲರೂ ಸಾಮ್ಯಭಾವ-ಸಾಮಾಯಿಕ- ವನ್ನು ಆಚರಿಸುತ್ತಿಲ್ಲ. ಹಾಗೆ ಆಚರಿಸುತ್ತಿದ್ದರೆ ವೈಶಾಲಿಯಲ್ಲಿ ಇಂದು ಬಂಗಾರ, ಬೆಳ್ಳಿ, ತಾಮ್ರದ ಕಲಶಗಳ ಬೇರೆ ಬೇರೆ ಮಹಲುಗಳನ್ನೇ ನಾವು ಕಾಣುತ್ತಿರಲಿಲ್ಲ. ಈ ವಿಷಮತೆಯಿಂದ ರಾಷ್ಟ್ರಕ್ಕೆ ಇಂದಿಲ್ಲ ನಾಳೆ ಸಂಕಟ ಒದಗ ತಕ್ಕುದೇ" ಇದೇ ಮಾತು ಇಂದು ಸತ್ಯವೆನಿಸಹತ್ತಿದೆ.

ಅಂಬಾಪಾಲಿ ಈಗ ಹಲವು ಜನರನ್ನು ಸೇರಿಕೊಂಡು ಸಮ್ರಾಟ ರೊಡನೆ ಒಳಸಂಚು ನಡೆಯಿಸಿದ್ದಾಳೆ. ಅವಳಿಗ ಒಬ್ಬ ಒಳ್ಳೆಯ ವರವನ್ನು ಮದುವೆಯಾಗಿ ಸಂಸಾರ ಮಾಡುವುದು ಬೇಕಿತ್ತು. ಅದಕ್ಕೆ ಅವಳ ಚಲು ವಿಕೆ ಅಡ್ಡ ಬಂತು. ಲೋಕ ಸುಂದರಿಯಾದ ಅವಳಿಗೆ ಎಲ್ಲರಂತೆ ಗೃಹಿಣಿ ಯಾಗಿರುವ ಅವಕಾಶವನ್ನು ಗಣರಾಜ್ಯ ಒದಗಿಸಿಕೊಡಲಿಲ್ಲ. ಅದರಿಂದ ಅವಳ ಆಶೆ ಸಾಮ್ರಾಜ್ಞಿಪದಕ್ಕೇರಿತು; ಸಮ್ರಾಟರೊಡನೆ ಸಂಧಾನ ನಡೆಯಿಸಿತು.

ಇನ್ನು ನಾಳೆ ಬೆಳಗಾದರೆ ಯುದ್ಧಕ್ಕೆ ಆರಂಭ ! ವೈಶಾಲಿಯಲ್ಲಿಯೂ ಎಲ್ಲ ಸಿದ್ಧತೆ ನಡೆದಿರಬೇಕು. ಗಣರಾಜರ ಸೈನ್ಯವೆಲ್ಲ ಸೇರಿರಬೇಕು. ಎಂಥ ಸುಂದರ ನಗರ ನಮ್ಮ ವೈಶಾಲಿ ! ದೇವಪುರದಂತೆ ಶೋಭಿಸುತ್ತಿದೆ. "ಅತಿ ಸಮೃದ್ಧ, ಸುರಕ್ಷಿತ, ಸುಭಿಕ್ಷ, ರಮಣೀಯ, ಜನಪೂರ್ಣ, ಸಂಪನ್ನ ಮತ್ತು ಮನೆ–ಮಂದಿರಗಳಿಂದ ಅಲಂಕೃತ, ಉದ್ಯಾನಗಳಿಂದ ವಿಭೂಷಿಸು ವದರಿಂದ ಸ್ವರ್ಗಕ್ಕೆ ಸಮಾನವಾಗಿದೆ." ಇಂಥ ಸುಂದರ ನಗರವು ಯುದ್ಧ ಭೂಮಿಯಾಗಿ ಹೇಗೆ ತನ್ನ ಸೌಂದರ್ಯವನ್ನು ಉಳಿಸಿಕೊಂಡೀತು .... ಒಬ್ಬ ಸ್ತ್ರೀಯ ಆಶೆಯನ್ನು ತುಳಿದುದರ ಪರಿಣಾಮವಿದು. ನಾರಿ ಎಷ್ಟು ಅಬಲೆಯೋ ಅಷ್ಟೇ ಸಬಲೆ ಎಂಬುದನ್ನು ಲೋಕ ಅರಿಯದೆ ಹೋಯಿ ತಲ್ಲ ! ಅವಳ ಹೃದಯ ಹೂವಿನಷ್ಟು ಮೃದುವು ವಜ್ರದಷ್ಟು ಕಠೋರ.

ಅಂಬಾಪಾಲಿ ಇಂದು ಕಠೋರ ಮನಸ್ಕಳಾಗಿದ್ದಾಳೆ. ಅವಳ ಕುಂತಳದ ಕುಟಿಲತೆ ಎಲ್ಲ ಕರುಳಿಗೆ ಸೇರಿದೆ !

ಅತೃಪ್ತ ಸ್ತ್ರೀ ಏನನ್ನು ಸಾಧಿಸಲಾರಳು ಹೇಳು ನೋಡುವ. 'ಪ್ರವೇಣೀ ಪುಸ್ತಕ'ಗಲ್ಲಿ ಬರೆದರೇನಾಯಿತು ? ಅಂಬಾಪಾಲಿಗೆ ವಿವಾಹ ವಾಗಲು ಸಮ್ಮತಿ ಇತ್ತಿದ್ದರೆ ಇಂಥ ಅನರ್ಥಕ್ಕೆ ಎಡೆ ಎಲ್ಲಿರುತ್ತಿತ್ತು ? ಪ್ರವೇಣೀ ಪುಸ್ತಕವನ್ನು ರಚಿಸುವುದು ಗಣತಂತ್ರ ಸರಿಯಾಗಿ ನಡೆಯ ಲೆಂದೇ ಅಲ್ಲವೇ ? ಅದೇ ನಿಯಮಾವಲಿಯ ಗ್ರಂಥ ರಾಜ್ಯವನ್ನೇ ಹಾಳು ಮಾಡಲಿಕ್ಕೆ ಸಾಧನವಾದರೆ ಹೇಗೆ ? ಅಂಬಾಪಾಲಿ ತ್ರಿಲೋಕ ಸುಂದರಿ ಯಾದರೇನಾಯಿತು ? ಅವಳು ವೈಶಾಲಿಯ ನಗರವಧುವಾಗಿ ಬದುಕಬೇಕೆ ? ಗಣರಾಜ್ಯದಲ್ಲಿ ಸೌಂದರ್ಯವು ಎಲ್ಲರ ಭೋಗವಸ್ತುವಾಯಿತಲ್ಲ ! ಅವಳಿ ಗೇನು ಜೀವನ ಪಾವಿತ್ರ್ಯದ ಕಲ್ಪನೆ ಇರಲಾರದೆ ? ಪಾತಿವ್ರತ್ಯದ ಮೋಹ ಉಂಟಾಗದೆ ? ಸ್ತ್ರೀಯೊಂದು ಕೇವಲ ಭೋಗಸಾಮಗ್ರಿಯೇ ? ಅಂಬಾ ಪಾಲಿ ಎಲ್ಲರಿಂದ ಸಾಕಷ್ಟು ಧನವನ್ನು ಹೊಂದಿ ಭೋಗಸ್ತ್ರೀಯಾಗಿರಬೇ ಕೆಂದು ವಿಧಿಸಿದ ರಾಜ್ಯಘಟನೆ ಎಷ್ಟು ಒಳ್ಳೆಯದಿದ್ದರೂ ದೋಷಯು ಕ್ತವೇ ಸರಿ ! ವಿನಾಶಕಾಲಕ್ಕೆ ಎಂಥ ಚಿಕ್ಕ ದೋಷವಿದ್ದರೂ ಸಹ ಗುಡ್ಡ ದಷ್ಟು ದೊಡ್ಡದಾಗಿ ನಿಲ್ಲುವುದು. ನೋಡು.... ಅದೇ ಅಂಬಾಪಾಲಿ ಈಗ ನಮ್ಮ ಸಮ್ರಾಟರೊಡನೆ ಗುಪ್ತ ಸಂಧಾನ ನಡೆಯಿಸಿ, ರಾಜ್ಯವನ್ನೇ ಉರುಳಿ ಸಲಿಕ್ಕೆ ಸಿದ್ಧವಾಗಿದ್ದಾಳೆ ! ಸಮ್ರಾಜ್ಞಿಪದದ ಮೋಹ ಯಾವ ಸ್ತ್ರೀಯನ್ನು ಬಿಡುವುದು ಹೇಳು ನೋಡೋಣ ಅಕ್ಕ ? ಅದರಲ್ಲೂ ಸಾಮ್ರಾಜ್ಯ ವಿಸ್ತರಿ ಸುವ ದಾಹ, ಹೊಸ ಹೊಸ ಸ್ತ್ರೀಯರ ಸಹವಾಸದ ಆಕಾಂಕ್ಷೆ ಇರುವ ಸಮ್ರಾಟ್‌ರು ದೊರೆತ ಮೇಲೆ ಅಗ್ನಿಗೆ ವಾಯು ತೈಲಗಳ ಸಹವಾಸ ಸಿಕ್ಕಂ ತಾಗಿದೆ. ಕೇಳುವುದೇನು ? ವೈಶಾಲಿಯು ತುಸು ದಿನಗಳಲ್ಲಿಯೇ ಭೀಕರ ಯುದ್ಧ ಜ್ವಾಲೆಗಳಲ್ಲಿ ಸಿಕ್ಕು ಉರಿಯುವುದು.

ಇದನ್ನು ನೆನೆದರೆಯೇ ನನ್ನ ಎದೆಯು ನಡಗುವುದು ಅಕ್ಕ ! ಇಂಥ ಸಂಕಟದಲ್ಲಿ ರಾಜ್ಯವನ್ನು ಉಳಿಸುವ ಸಮರ್ಥರು ಭಗವಾನ್ ಮಹಾವೀ ರರ ಹೊರತು ಇನ್ನಾರೂ ನನ್ನ ಕಣ್ಣೆದುರಿಗೆ ಕಾಣರು. ಅವರಂತೂ ತ್ಯಾಗಿಗಳು... ಇತ್ತ ಲಕ್ಷ ಹಾಕುವರೋ ಇಲ್ಲವೋ ? ಇದೇ ಅಂಬಾಪಾಲಿಯ

ವಿವಾಹ ಘಟನೆಯಲ್ಲಿಯೇ ಗಣರಾಜ ಸಭೆಯಲ್ಲಿ ವಾದಿಸಿದ್ದರಂತೆ ವರ್ಧಮಾನರು. ಅವಳ ಮದುವೆಗೆ ಸಮ್ಮತಿಸಬೇಕೆಂದು ಪ್ರತಿಪಾದಿಸಿದ್ದರಂತೆ. ತಮ್ಮ ಸೂಚನೆ ಬಿದ್ದು ಹೋಗಲು ಬಹಳ ನೊಂದುಕೊಂಡರಂತೆ. ಇಂಥ ನೊಂದ ಜೀವಿ ಇಂದು ಅಂಬಾಪಾಲಿ ಸಮ್ರಾಟನನ್ನು ಮದುವೆಯಾಗಲು ಸಂಧಾನ ಹೂಡಿ, ಈ ಯುದ್ಧಕ್ಕೆ ಕಾರಣವಾದ ಸಂದರ್ಭದಲ್ಲಿ ಹೇಗೆ ವರ್ತಿಸುವರೋ! ನಾನು ಅದನ್ನೂ ಊಹಿಸಲಾರೆ....ಆದರೆ ಏನೇ ಇರಲಿ. ಅಕ್ಕ ಅವರ ಕಿವಿಯ ಮೇಲೆ ಈ ಸಂಗತಿಯನ್ನಾದರೂ ಹಾಕು....ಆ ಮಹಾತ್ಮ ಏನು ಮಾಡಿದ್ದೂ ಮಾಡಲಿ! ಆ ಪುಣ್ಯಾತ್ಮರಿಗೆ ನನ್ನ ವಂದನೆಗಳನ್ನು ತಿಳಿಸು.

ಚೇಟಕ ರಾಜಕುಮಾರಿ,
—ಚೇಳನಾ.

೬

ಪ್ರಿಯ ಸುಜೇಷ್ಠಾ,

ವೈಶಾಲಿಗಲ್ಲದೆ ಇನ್ನೆಲ್ಲಿ ಪತ್ರ ಬರೆಯಲಿ ಹೇಳು ನೋಡುವ ಅಕ್ಕ? ಅಕ್ಕ ಪ್ರಭಾವತಿಗೆ ಬರೆಯಬೇಕೆಂದರೆ ಅವಳ ಪತಿ ಉದ್ರಾಯಣ ವೀತಿಭಯದರಸು ನಮ್ಮ ಸಾಮ್ರಾಜ್ಯದ ಪ್ರತಿಸ್ಪರ್ಧಿ. ಇನ್ನು ಕೌಶಾಂಬಿಯ ಪದ್ಮಾವತಿಗೆ ಬರೆಯಬೇಕೆಂದರೆ ಶತಾನೀಕ ನಮ್ಮ ಸಮ್ರಾಟರಿಗೆ ಆಗದಂಥವರು. ಶಿವಾದೇವಿಯ ಪತಿ—ಉಜ್ಜಯಿನಿಯ ಪ್ರದ್ಯೋತನ ಸಂಗತಿಯಾದರೂ ಉಳಿದವರಂತೆಯೇ. ಸಾಮ್ರಾಜ್ಯ ಲಾಲಸೆಯು ಯಾರೊಡನೆ ನೆಟ್ಟಗಿರಗೊಡುವುದು ಹೇಳು? ಹೀಗೆ ಎಲ್ಲ ಕಡೆಗೂ ನನ್ನ ಬಾಂಧವರನ್ನು ಕಳೆದುಕೊಂಡು ಕುಳಿತಿರುವೆ. ಅಕ್ಕ!

ಇನ್ನು ವೈಶಾಲಿಯ ಕಡೆಗಾದರೂ ಏನು? ತಂದೆ ತಾಯಂದಿರಿಗೆ ಬರೆಯುವಂತಿಲ್ಲ. ಅವರು ನನ್ನ ಬರಹವನ್ನು ನೋಡಿ ಕಿಡಿಕಿಡಿಯಾದಾರು. ಹಿರಿಯಕ್ಕ ತ್ರಿಶಲೆಯೊಡನೆ ನನ್ನ ಸಲಿಗೆ ಮೊದಲಿನಿಂದಲೇ ಇಲ್ಲ. ಇದನ್ನು ನಿನ್ನ ಮುಂದೆ ಬೇರೆಯಾಗಿ ಹೇಳಬೇಕಿಲ್ಲ. ಉಳಿದವಳು ನೀನೊಬ್ಬಳು! ನಿನ್ನ ಪ್ರಣಯ ಸಮಾಧಿಗೆ ಮಣ್ಣೇರಿಸಿ ನಾನಿತ್ತ ಬಂದೆ. ಅದಕ್ಕೇ ನನ್ನ ವಿಷಯಕ್ಕೆ ನಿನ್ನ ಮನಸ್ಸೂ ಕಲ್ಲಾಗಿರುವುದೇನೋ. ಆದರೆ ಹಾಗೆ ಈ

ಬಡ ಜೀವಿಯ ಮೇಲೆ ಕೋಪಗೊಳ್ಳಬೇಡ ಅಕ್ಕ! ಪತ್ರಕ್ಕೆ ಉತ್ತರವನ್ನಾದರೂ ಬರೆಯುತ್ತಿರು. ಅಷ್ಟೂ ಬೇಡವಾದೆನೇ ನಾ ನಿಮ್ಮೆಲ್ಲರಿಗೆ?

ವೈಶಾಲಿಯ ಮೇಲಿನ ದಂಡಯಾತ್ರೆಯ ಕೊನೆಯು ಹೇಗೆ ವಿಚಿತ್ರ ರೀತಿಯಲ್ಲಿ ಆಯಿತೆಂಬುದು ವೈಶಾಲಿಯ ಜನಕ್ಕೆ ಗೊತ್ತಿರಲಿಕ್ಕಿಲ್ಲ! ಅದೊಂದು ಅಘಟಿತ ಘಟನೆ. ಅದನ್ನು ಕೇಳಿದರೆ ಎಷ್ಟು ಆಶ್ಚರಿಪಡುವಿಯೋ? ಈ ಯುದ್ಧದ ನೇತೃತ್ವ ರಾಜಪುತ್ರ ಸೋಮದತ್ತನ ಕಡೆಗೆ ಇತ್ತು. ಅವನೇ ಮುಖ್ಯ ಸೈನ್ಯಾಧಿಪತಿ. ಬಹಳ ಶೂರ. ಸಾಮ್ರಾಜ್ಯಕ್ಕೊಂದು ಭದ್ರ ದುರ್ಗವಿದ್ದಂತೆ. ಗಣತಂತ್ರವನ್ನು ಭೇದಿಸಬೇಕಾದರೆ ಇಂಥ ಶೂರರನ್ನೇ ನಿಯಮಿಸಬೇಕೆಂದು ಸಮ್ರಾಟರು ಮೊದಲೇ ಯೋಚಿಸಿಯೇ ಈ ಕೆಲಸ ಅವನಿಗೆ ವಹಿಸಿದ್ದರು! ನೂರಾರು ಯುದ್ಧಗಳ ಅನುಭವ ಅವರಿಗೆ!

ಸಮರ ಸನ್ನಾಹ ಭರದಿಂದ ನಡೆದಾಗ ಒಂದು ದಿನ ಸಮ್ರಾಟರು ನನ್ನ ಮಹಲಿಗೆ ಬಂದರು! ಇತ್ತಿತ್ತಲಾಗಿ ಅವರು ಇತ್ತ ಬರುವುದು ಅಪರೂಪ. ನಾನು ಗರ್ಭವತಿಯಾದಾಗಿನಿಂದಂತೂ ಅವರು ಅಂಬಾಪಾಲಿಯ ಕನಸನ್ನೇ ಕಾಣುತ್ತಿರುವರು. ಅದರಲ್ಲಿ ನನ್ನಲ್ಲಿ ಬಂದರೂ ಅನ್ಯ ಮನಸ್ಕರೇ ಆಗಿರುವರು. ಆದರೆ ಅಂದೇಕೋ ಮನಃಪೂರ್ವಕವಾಗಿ ಮಾತನಾಡಲು ಆರಂಭಿಸಿದರು. ನನ್ನ ಸುಕೃತವೆಂದುಕೊಂಡು ಹಿರಿ ಹಿರಿ ಹಿಗ್ಗಿದೆ. ಆ ಮಾತು ಈ ಮಾತು ಆಡುತ್ತ ಮೆಲ್ಲನೆ ವೈಶಾಲಿನಗರ ವಿಷಯಕ್ಕೆ ಮಾತನ್ನು ಹೊರಳಿಸಿದರು. ಅವರಿಗೆ ಸೈನ್ಯವನ್ನು ಯಾವ ಮಗ್ಗಲಿನಿಂದ ಲಗ್ಗೆ ಹತ್ತಿಸುವುದು ಸುಲಭವೆಂಬುದನ್ನು ನನ್ನಿಂದ ತಿಳಿದುಕೊಳ್ಳಬೇಕಾಗಿತ್ತು. ಹಿಂದೆ ಅವರು ಹತ್ತೆಂಟು ಸಲ ವೈಶಾಲಿಗೆ ಬಂದು ಹೋಗಿದ್ದರೂ ಗುಪ್ತದ್ವಾರದ ಪರಿಚಯವೊಂದೇ ಅವರಿಗಿತ್ತು. ನಗರದ ಸಂಪೂರ್ಣ ರಚನೆಯ ಕಲ್ಪನೆ ಅವರಿಗಿರಲಿಲ್ಲ. ಅಕ್ಕ, ಅಂಥ ಸವಿಮಾತಿನ ಸಂದರ್ಭದಲ್ಲಿ ನಿನ್ನಂಥ ಭಾವಜೀವಿ ಸಿಕ್ಕಿದ್ದರೆ ಎಲ್ಲವನ್ನು ಹೇಳಿ ಬಿಡುತ್ತಿದ್ದಿಯೋ ಏನೋ! ನಾನು ಎಲ್ಲವನ್ನು ಹೇಳಿದಂತೆ ಮಾಡಿ, ಒಂದನ್ನು ಹೇಳದೆ ಮಾತು ಮುಗಿಸಿದೆ. ಸಮ್ರಾಟನ ವಿಶ್ವಾಸ ಉಳಿಸಿಕೊಂಡೆ........

ಯುದ್ಧದಿಂದ ಮರಳಿದ ಮೇಲೆ ಅವರು ಬಹುದಿನಗಳ ವರೆಗೆ ಉತ್ಸಾಹದಲ್ಲಿರಲಿಲ್ಲ. ಮುಂದೆ ಮುಂದೆ ಸೋಮದತ್ತನನ್ನು ಎದುರಿಗೆ ಕಂಡರೆ ಅವರಿಗೆ ಸಹನವಾಗದಾಯಿತು. ಹತ್ತು ದಿನಗಳಲ್ಲಿ ತೊಂಭತ್ತಾರು ಲಕ್ಷ ಜನರ ಕೊಲೆಯಾಯಿತಂತೆ ! ಒಂಭತ್ತು ಮಲ್ಲರಾಜರು, ಒಂಭತ್ತು ಲಿಚ್ಛವಿರಾಜರು, ಕಾಶಿ ಕೋಸಲಗಳ ಹದಿನೆಂಟು ಜನ ಗಣರಾಜರು ಹೀಗೆ ಒಟ್ಟು ಮೂವತ್ತಾರು ಗಣರಾಜರೆಲ್ಲ ಚೂರು ಚೂರಾಗಿ ಹೋದರಂತಲ್ಲ ! ಆದರೂ ಸಮ್ರಾಟರ ಇಚ್ಛೆ ಕೈಗೂಡಲಿಲ್ಲ; ವಿಜಯ ಲಭಿಸಲಿಲ್ಲ. ಗೆದ್ದೂ ಸೋಲನ್ನು ಸ್ವೀಕರಿಸಬೇಕಾಯಿತು. ಸಮ್ರಾಟರ ಆಜ್ಞೆ ಇಲ್ಲದೆ ಅಕಸ್ಮಾತ ಯುದ್ಧ ನಿಂತಿತಂತೆ ! ಅದಕ್ಕೆ ಕಾರಣ ಸೋಮದತ್ತ. ಆ ಪ್ರಸಂಗದಲ್ಲಿ ತಂದೆ ಮಕ್ಕಳಲ್ಲಿ ನಡೆದ ಸಂವಾದ ಬಹು ಸ್ವಾದಸ್ಯವಾಗಿದೆ ಅಕ್ಕ. ಹೀಗೆ ಹ ಡೆ ದ ವ ರಿ ಗೂ ಉತ್ತರ ಕೊಡುವ ಮಕ್ಕಳು ಇರಬೇಕು ನೋಡುತಾಯಿ !

"ನೀನೇ ಯುದ್ಧವನ್ನು ನಿಲ್ಲಿಸಿದೆಯಾ ?" ಸಮ್ರಾಟರು ಕ್ರುದ್ಧರಾಗಿ ಕೇಳಿದರು.

"ಹೌದು" ಗಂಭೀರವಾಗಿಯೇ ಉತ್ತರಿಸಿದ ಸೋಮ.

"ಯಾರ ಆಜ್ಞೆಯಿಂದ ?"

"ನನ್ನದೇ...."

"ಅಂದರೆ ?"

"ಅಂದರೇನು ?"

"ಯುದ್ಧ ನಿಲ್ಲಿಸಲಿಕ್ಕೆ ಕಾರಣ ?"

"ಯುದ್ಧದ ಉದ್ದೇಶ ಒಳ್ಳೆಯದಿಲ್ಲ !"

"ಯಾವ ಉದ್ದೇಶ ?"

"ಅಂಬಪಾಲಿಯಂಥ ವೇಶ್ಯೆಯನ್ನು ಪಟ್ಟದರಾಣಿಯನ್ನಾಗಿ ಸ್ವೀಕರಿಸುವುದು. ಅವಳ ಹೊಟ್ಟೆಯಿಂದ ಹುಟ್ಟಿದ ಮಕ್ಕಳಿಗೆ ರಾಜ್ಯಾಭಿಷೇಕ ಮಾಡುವುದು ?"

ರಾಜ ಪುತ್ರನ ಈ ಧೈರ್ಯದ ಮಾತುಗಳನ್ನು ಕೇಳಿ ಇವರು ಸುಮ್ಮನಾದರಂತೆ. ಮರುದಿನ ವೈಶಾಲಿಯಿಂದ ಸೈನ್ಯ ರಾಜಗೃಹಕ್ಕೆ ಮರಳಿತು. ತಂದೆಯನ್ನು ತಿದ್ದುವ ಕುಮಾರ ಸೋಮದತ್ತ. ಇನ್ನು ನನ್ನ ಹೊಟ್ಟೆಯಿಂದ

ಎಂಥ ಪುತ್ರ ಹುಟ್ಟುವನೋ ಯಾರಿಗೆ ಗೊತ್ತು? ಈಗಾಗಲೇ ಬಸಿರ ಬಯಕೆಗಳಲ್ಲಿ ಸಮ್ರಾಟ್‌ರ ಸೇಡು ತಕ್ಕೊಳ್ಳುವ ಭಾವನೆ ಬಲಿಯುತ್ತಲಿದೆ,! ಇದರ ಪರಿಣಾಮವನ್ನು ನೆನೆವರೆ ನನ್ನ ಹೃದಯು ಈಗಲೇ ನಡಗುತ್ತಲಿದೆ.

ಸುಜೇಷ್ಠೆ! ಈಗಾಗಲೇ ಇರುಳಿನ ಹದಿನಾರು ಘಳಿಗೆಗಳು ಉರುಳಿದುವು. ಇನ್ನೂ ನಿನಗೆ ಪತ್ರವನ್ನು ಬರೆಯುತ್ತಲೇ ಕುಳಿತಿರುವೆ. ಎದುರಿಗೆ ರತ್ನದ ಸಮಯಗಳಲ್ಲಿ ದೀಪಗಳು ಶಾಂತವಾಗಿ ಉರಿಯುತ್ತಿವೆ. ಕಣ್ಣಿಗೆ ನಿದ್ರೆಯಿಲ್ಲ. ಮನಸ್ಸಿಗೆ ನೆಮ್ಮದಿಯಿಲ್ಲ. ಬರುವ ವರ್ಷಾಯೋಗವನ್ನು ಕಳೆಯಲು ಭಗವಾನ್ ಬುದ್ಧರು ರಾಜಗೃಹಕ್ಕೆ ಬರುವರು. ಅದಕ್ಕಾಗಿ ಗಿರಿಧರ ಕೂಟದಲ್ಲಿ ಎರಡು ಗುಹೆಗಳನ್ನು ಗುಡ್ಡದಲ್ಲಿ ಕೊರೆಯಿಸುವ ಕೆಲಸ ಭರದಿಂದ ಸಾಗಿದೆ. ಮುಂದೆ ಭಗವಂತರ ಉಪದೇಶಕ್ಕಾಗಿ ಪೀಠವೊಂದನ್ನು ನಿರ್ಮಿಸಲಾಗುತ್ತಿದೆ. ಅದರಲ್ಲಿಯೇ ಸಮ್ರಾಟರು ಮನಸ್ಸನ್ನು ತೊಡಗಿಸಿದ್ದಾರೆ. ಈಗ.... ಇರಲಿ. ರಾತ್ರಿ ಬಹಳವಾಯಿತು. ಹೆಚ್ಚಿನ ವಿವರವನ್ನು ಇನ್ನು ಎಂದಾದರೊಮ್ಮೆ ಬರೆಯುವೆ.

ನಿನ್ನ ನಚ್ಚಿನ ತಂಗಿ,
ಚೇಳನಾ.

ಸುಜೇಷ್ಠಾ,

ಭಗವಾನ್ ಬುದ್ಧ ದೇವನ ಕೃಪೆಯಿಲ್ಲದಿದ್ದರೆ ನಿನಗೆ ಈ ಪತ್ರವನ್ನು ಬರೆಯಲಿಕ್ಕೆ ನಾನೀ ಲೋಕದಲ್ಲಿರುತ್ತಿರಲಿಲ್ಲ. ಮುಂದಿನ ದುಃಖವನ್ನು ತಪ್ಪಿಸಲಿಕ್ಕೆಂದು ಇಂದು ಆತ್ಮ ಹತ್ಯೆಯನ್ನು ಮಾಡಿಕೊಳ್ಳುವುದು ಸರಿಯಲ್ಲವಲ್ಲ! ಆದರೆ ಮಾಡುವುದೇನು? ಆ ಕಾಲದಲ್ಲಿ ಬುದ್ಧಿಯೇ ಹಾಗೆ ಪ್ರವರ್ತಿಸಿತು! ಅದರೊಳಗಿಂದಲೂ ಉಳಿದೆ. ಸುಖರೂಪವಾಗಿ ಗಂಡು ಮಗುವನ್ನು ಹೆತ್ತೆ.... ಎಲ್ಲ ಪೂರ್ವ ಸಂಚಿತ ಕರ್ಮದ ಫಲ... ಈ ನನ್ನ ಮಗು ಆ ಸೋಮದತ್ತನನ್ನೂ ಮೀರಿಸುವ ವ್ಯಕ್ತಿಯಾಗುತ್ತಾನೆ!

'ಇದೇನು ಭವಿಷ್ಯ ನುಡಿಯುವೆ!'—ಎಂದು ಕೇಳಲಿಕ್ಕೆ ಹೋಗಬೇಡ. ನಿಜಕ್ಕೂ ಅದು ಹಾಗೆಯೇ ಆಗಿ ತೀರುವದೆಂದು ನನಗೆ

ತುಂಬ ನಂಬುಗೆಯಿದೆ. ಈ ನಂಬುಗೆಯಿಂದಲೇ ನಾನಂದು ಜೀವಕ ವನದಲ್ಲಿ ಜೀವ ಕೊಡಲಿಕ್ಕೆ ಹೋದುದು.

ನನ್ನ ಬಸಿರಿನಲ್ಲಿರುವ ಮಗುವು ಸಮ್ರಾಟ್‌ರ ಆತ್ಮಹತ್ಯೆಗೆ ಕಾರಣವಾಗುವದಂತೆ !— ಇದು ನನ್ನ ಕಲ್ಪನೆಯಲ್ಲ; ರಾಜಸ್ಥಾನದೊಳಗಿನ ಪ್ರಸಿದ್ಧ ಭವಿಷ್ಯವಾದಿ ನುಡಿದ ಭವಿಷ್ಯ, ಅಂದವೇಲೆ ನಾನು ಚೆನ್ನಾಗಿ ಹೆತ್ತು ಏನು ಸಾರ್ಥಕವಾಯಿತು ಹೇಳು ನೋಡುವ. ಎಂಥ ಕಲಂಕಿಣಿಯೇ ತಾಯೀ ನಾನು ! ಅತ್ತ ಹೆತ್ತ ಮನೆಗೆ ವೈರಿಯಾಗಿ ಹುಟ್ಟಿದೆ. ಇತ್ತ ಪತಿಯ ಘಾತಕ ಪುತ್ರನನ್ನು ಪ್ರಸವಿಸಿದೆ. ಏನು ನನ್ನ ಕರ್ಮವಿದ್ದೀತು ಎನ್ನುವೆ ! ಇಂಥ ಹೆಸರನ್ನಿಟ್ಟುಕೊಂಡು ಲೋಕದಲ್ಲಿ ಇನ್ನು ಬಾಳುವುದಾದರೂ ಏತಕ್ಕವ್ವ ?

ಆ ಸ್ಥಾನದೊಳಗಿನ ಭವಿಷ್ಯವಾದಿಯ ಮಾತು ನನ್ನ ಕಿವಿಗೆ ಮುಟ್ಟದ ದಿನ ಮಧ್ಯಾಹ್ನ ನನ್ನ ಮನಸ್ಸಿಗೆ ಸಮಾಧಾನವಿರಲಿಲ್ಲ. ಅದು ವರ್ಷಾಯೋಗದೊಳಗಿನ ಒಂದು ದಿನವಿತ್ತು ಭಗವಂತನ ಧ್ಯಾನ ಮಾಡಿದೆ. ಸಾವಿರದೆಂಟು ಜಪಮಾಡಿಕೊಂಡೆ. ಆಪ್ತವಚನಗಳನ್ನು ಓದಿಕೊಂಡೆ. ಏನೂ ಮಾಡಿದರೂ ಮನಸ್ಸಿಗೆ ನೆಮ್ಮದಿಯಾಗಲಿಲ್ಲ. ತಿರುತಿರುಗಿ ಅದೇ ವಿಚಾರ ತಲೆಯಲ್ಲಿ ಸುಳಿಯುವುದು. ಪಿತೃಘಾತಕಿಯನ್ನು ಗರ್ಭದಲ್ಲಿ ಹೊತ್ತುಕೊಂಡು ಬಾಳುವುದೇ? ಬೆಳೆಯಿಸುವುದೆ ? ಇದಕ್ಕಿಂತ ಗರ್ಭಪಾತವನ್ನೇ ಮಾಡಿಕೊಂಡರೆ ಹೇಗೆ ? ಹೀಗೆ ಏನನ್ನೋ ವಿಚಾರಿಸುತ್ತ ನನ್ನ ಮಹಲಿನ ಪೂರ್ವದ ಕಡೆಯ ಕಿಡಕಿಯಲ್ಲಿ ನೋಡುತ್ತ ನಿಂತಿದ್ದೆ.

ಆಗ ದೂರದಲ್ಲಿ ಜೀವಕ ವನದಲ್ಲಿ ಒಂದು ದೊಡ್ಡ ಬಂಡೆಗಲ್ಲು ಕಾಣಿಸಿತು. ಅದು ನನ್ನ ಕಾರ್ಯಕ್ಕೆ ತುಂಬ ಅನುಕೂಲವಾಗುವಂತೆ ತೋರಿತು. ಇನ್ನಾರಾದರೂ ತಪಸ್ವಿಗಳು ಅದನ್ನು ಕಂಡಿದ್ದರೆ ಇದು ತಪಸ್ಸಿಗೆ, ಒಳ್ಳೆಯ ಸ್ಥಾನವೆಂದು ನಿರ್ಧರಿಸಬಹುದಿತ್ತು. ನಾನು ಮಾತ್ರ ಜೀವ ಕೊಡಲಿಕ್ಕೆ ಉತ್ತಮ ಸ್ಥಳವೆಂದು ಅದನ್ನು ಆರಿಸಿದೆ. ಬಿಸಿಲು ಹೊತ್ತಿನಲ್ಲಿ ಅತ್ತ ಕಡೆಗೆ ಜನರು ಯಾರೂ ಸುಳಿಯುತ್ತಿರಲಿಲ್ಲ. ದಟ್ಟ ಮರಗಳ ಗುಂಪಿನ ಮರೆಗೆ ಆ ಬಂಡೆ ಇದ್ದಿತು. ಅದರ ಮೇಲೆ ಏರಿ ಹೊಟ್ಟೆಯನ್ನು ಅದರ ಅಂಚಿಗೆ ಅಪ್ಪಳಿಸಿ ಬಿಟ್ಟರೆ ತೀರಿತು...... ತುಸು ಹೊತ್ತಿನಲ್ಲಿ ನನ್ನ ಇಚ್ಛೆ ಪೂರ್ತಿ

ಯಾಗುವುದು ! ಇದನ್ನು ಕಲ್ಪಿಸಿದಾಗ ನಿಂತಲ್ಲಿಯೇ ನನ್ನ ಮೈ ಬೆವೆತಿತು. ಕಷ್ಟವನ್ನು ಕಾಣದ ಕಾಯವಿದು. ಸುಕುಮಾರ ಶರೀರ ನನ್ನದು....

ಸಾವಿಲ್ಲ; ಹೊಟ್ಟೆಯಾದರೂ ಇಳಿದು ಹೋಗುವದು! ಬದುಕಿನ ಮೇಲೆ ಆಶೆ ಹೆಚ್ಚಾಗಿ ಸಮಾಧಾನ ಹೇಳಿಕೊಂಡೆ ಮನಸ್ಸಿಗೆ... ಮೆಲ್ಲನೆ ರಾಜಮಹಾಲಿನಿಂದ ಹೊರಬಿದ್ದೆ. ಹೊರಡುವ ಮೊದಲು ಭಗವಾನ್ ಪಾರ್ಶ್ವ ನಾಥ ಮೂರ್ತಿಗೆ ವಂದಿಸಿದೆ. ಹಾಗೆಯೇ ಪ್ರಿಯಕರನ ಭಾವ ಚಿತ್ರವನ್ನೊಮ್ಮೆ ನಿಂತು ನಿಟ್ಟಿಸಿದೆ. ಇನ್ನೇನು ತಾಯಿ ತಂದೆಯಂದಿರ ನೆನಪೊಮ್ಮೆ ಸುಳಿಯಿತು. ಕಣ್ಣೀರು ಕೋಡಿಗಟ್ಟಿ ಹರಿಯತೊಡಗಿತು. ದಾಸಿಯರು ಕಂಡರೆ ಏನಂದಾರು ಎಂದುಕೊಂಡು ಕಣ್ಣುಗಳನ್ನು ಒರಿಸಿಕೊಂಡೆ. ಭಾರವಾದ ಮೈಯನ್ನು ಹೊತ್ತುಕೊಂಡು ಜಡವಾದ ಹೆಜ್ಜೆಗಳನ್ನು ಇಡುತ್ತ ವನದ ಆ ಕಲ್ಲಿನ ಬಳಿಗೆ ಹೋದೆ. ಕಣ್ಣುಗಳು ಗರಗರ ತಿರುಗ ತೊಡಗಿದವು. ಅಖಂಡ ರಾಜಗೃಹ ನಗರವೇ ತಲೆಕೆಳಗೆ ಆಗುವಂತೆ ಭಾಸವಾಯಿತು. ಸೂರ್ಯ ಆಗಸದಿಂದ ಕೆಳಗಿಳಿದು ಬಂದಂತೆ ತೋರಿತು. ಗಿಡ ಮರಗಳೆಲ್ಲ ಮೌನವಾಗಿದ್ದವು. ಎಲ್ಲೆಡೆಗೂ ಗಂಭೀರವಾದ ಮೌನ. ಬಂಡೆಗಲ್ಲಿನ ಮೇಲೆ ಹತ್ತಿದೆ. ಒಂದು ಕ್ಷಣ ಸುತ್ತಲೂ ನೋಡಿದೆ. ಯಾರ ಸುಳಿವೂ ಕಾಣಲಿಲ್ಲ. ವಿಚಾರಗಳ ಮಾಲಿಕೆ ತಲೆಯಲ್ಲಿ ಆರಂಭವಾಯಿತು... ನನ್ನ ಬಾಲ್ಯ ಜೀವನವೆಲ್ಲ ಕಣ್ಣೆದುರಿಗೆ ಸುಳಿದು ಹೋಯಿತು. ಯೌವನದಲ್ಲಿ ಕಾಲಿಕ್ಕಿದಾಗ ಉತ್ಪನ್ನವಾದ ಲಾಲಸೆ, ಅದನ್ನು ಬಳೆಯಿಸಿದ ಅಭಯಕುಮಾರ ಬ್ರಹ್ಮಚಾರಿ, ನನ್ನ ನಿನ್ನಲ್ಲಿ ನಡೆದ ಸ್ಪರ್ಧೆ, ಸಮ್ರಾಟನೊಡನೆ ಹೊರಟು ಬಂದ ಆ ಕ್ಷಣ... ಎಲ್ಲವೂ ಬರೆಕಣ್ಣೆದುರಿಗೆ ಬಂದು ನಿಂತವು. ಮನಸ್ಸು ಸಂಸಾರದ ದುಃಖ ಪರಂಪರೆಯನ್ನು ಸ್ಮರಿಸಿ ನಿರಾಶೆ ಗೊಂಡಿತು... ಕಣ್ಣು ಮುಚ್ಚಿದೆ. ಣಮೋಕಾರ ಮಂತ್ರವನ್ನು ಜಪಿಸಿದೆ. ಮರುಕ್ಷಣದಲ್ಲಿ ಬಂಡೆಯಿಂದ ಕೆಳಗೆ........... ?

ಯಾವನೋ ಒಬ್ಬ ವಿದ್ಯಾಧರನಾಗಲಿ, ವೈಮಾನಿಕ ದೇವನಾಗಲಿ ಬಂದು ನನ್ನನ್ನು ಕೆಳಗೆ ಬೀಳಗೊಡದೆ ನಡುವೆಯೇ ಎತ್ತಿಕೊಂಡಂತಾಯಿತು ! ಆದರೂ ನಾನು ಪೂರ್ಣ ಎಚ್ಚರಗೊಂಡಿರಲಿಲ್ಲ. ಕಣ್ಣುಗಳನ್ನು ತೆರೆದಿರಲಿಲ್ಲ. ಎಂಥದೋ ಒಂದು ಕೆಟ್ಟ ಕನಸನ್ನು ಕಾಣುತ್ತಿರುವಂಥ ಅವಸ್ಥೆಯಲ್ಲಿದ್ದೆ. ಹೊಟ್ಟೆಯೊಗಿನ ಪಿಂಡಬಂದು ಎದೆಗೆ ಹಾಯುತ್ತಿದ್ದಿತು.

ಉಸುರು ಕಟ್ಟಾಗುತ್ತಲಿದ್ದಿತು.... ಎಲ್ಲಿರುವೆನೋ ? ಹೊರಗೆ ಏನು ನಡೆದಿದೆಯೋ... ? ಎಂಬುದರ ಕಲ್ಪನೆಯೂ ಕೂಡವಿರಲಿಲ್ಲ. ಮರಣದ ತರುವಾಯದ ಅವಸ್ಥೆಯೆಂದೇ ಆರಂಭದಲ್ಲಿ ನನ್ನ ಕಲ್ಪನೆಯಾಗಿದ್ದಿತು.

ಮೈಮೇಲೆ ಎಚ್ಚರ ಬಂದು, ಕಣ್ಣುಗಳನ್ನು ತೆರೆದು, ಹೊರಗಿನ ಲೋಕವನ್ನು ಮತ್ತೆ ಕಂಡಾಗ ಮೊತ್ತ ಮೊದಲು ನಾನು ಗುರಿತಿಸಿದುದು, ಸಮ್ರಾಟರು ನನ್ನನ್ನು ಎಷ್ಟು ಪ್ರೀತಿಸುತ್ತಾರೆಂಬುದನ್ನು. ಅವರಿಗಾಗಿಯಾದರೂ ನಾನು ಈಗ ಸಧ್ಯಕ್ಕೆ ಬದುಕಿದುದು ಚೆನ್ನಾಯಿತೆಂದು ತೋರಿತು. ಆಮೇಲೆ ಒಂದೊಂದೇ ಸಂಗತಿಗಳ ಪರಿಚಯ ನನಗೆ ಆಗುತ್ತ ಬಂತು. ಮಧ್ಯಾನ್ಹದ ತಪಸ್ಸಿಗೆಂದು ಆ ಶಿಲೆಯ ಕಡೆಗೆ ಬಂದ ಭಗವಾನ್ ಬುದ್ಧದೇವರು ನನ್ನನ್ನು ಈ ಪ್ರಸಂಗದಿಂದ ಪಾರುಮಾಡಿದರು. ಜೀವಕನ ವೈದ್ಯಕೀಯ ಉಪಚಾರ ಗೃಹದಲ್ಲಿ ನನ್ನ ಆರೈಕೆ ನಡೆದಿದ್ದಿತು. ಅಲ್ಲಿಯ ವರೆಗೆ ಸ್ವತಃ ಭಗವಂತರೇ ಹೊತ್ತು ತಂದರಂತೆ... ಆ ಮೇಲೆ ಉಳಿದವರೆಲ್ಲ ಅಲ್ಲಿ ಸೇರಿದರು. !

ಈ ಪ್ರಸಂಗವೇನೋ ಭೂತಕಾಲದ ಗರ್ಭವಲ್ಲಿ ಅಡಗಿ ಹೋಯಿತು. ಆದರೆ ಆ ಬಂಡೆ ಮಾತ್ರ 'ಮರ್ದಕುಷಿ' ಎಂಬ ಹೆಸರಿನಿಂದ ಪ್ರಸಿದ್ಧವಾಗಿ ಬಿಟ್ಟಿತು. ಈ ಹೆಸರು, ಆ ಶಿಲೆಗಳು ಇನ್ನೂ ನನ್ನನ್ನು ಮೇಲಿಂದ ಮೇಲೆ ಅಣಕಿಸುವಂತೆ ತೋರುತ್ತದೆ. ಲೋಕದ ಅಣಕಕ್ಕೇನೇ ಅಳುಕದ ನಾನು ಈ ನಿರ್ಜೀವ ಶಿಲೆಯ ಅಣಕಕ್ಕೆ ಕ್ಷಣ ಕ್ಷಣಕ್ಕೂ ಕೊರಗ ಬೇಕಾಗಿದೆ ಅಕ್ಕ! ಸ್ತ್ರೀಯರ ಚಾರಿತ್ರ್ಯವೇ ಅಷ್ಟು ವಿಚಿತ್ರವಲ್ಲವೇನೇ ತಾಯಿ? ಎಲ್ಲ ಕರ್ಮದ ಕೈವಾಡ !

ನಿನ್ನಿಂದ ನನ್ನ ಒಂದು ಪತ್ರಕ್ಕೂ ಉತ್ತರವೇ ಇಲ್ಲವಲ್ಲ ! ಹೀಗಾದರೆ ಇನ್ನು ಮೇಲೆ ನಾನೂ ನಿನಗೆ ಬರೆಯುವದನ್ನು ನಿಲ್ಲಿಸಿ ಬಿಡುವೆ. ಏನು ಮಾಡನ್ನುವಿ ಹೇಳು ನೋಡುವ...?

ನಿನ್ನ ಪತ್ರದ ದಾರಿಯನ್ನೇ ಕಾಯುವ,
— ಚೇಳನಾ.

೩

ಆರ್ಯೆ ಸುಜ್ಯೇಷ್ಠಾ,

ನಾನು ನಿನಗೆ ಪತ್ರಬರೆಯಲು ಒತ್ತಾಯ ಪಡಿಸಿದುದೇ ತಪ್ಪು! ನನಗೆ ನಿಜವಾದ ಸಂಗತಿ ಗೊತ್ತಿರಲಿಲ್ಲ. ನೀನು ಆಗಲೇ ಸನ್ಯಸನ ಸ್ವೀಕರಿಸಿ ಭಗವಾನ್ ಮಹಾವೀರರ ಸಂಘದಲ್ಲಿ ಸಮಾವೇಶವಾಗಿರುವಿ—ಎಂಬ ಸಂಗತಿ ಇಂದು ನನಗೆ ಗೊತ್ತಾಯಿತು. ಹುಣ್ಣಿನ ಮೇಲೆ ಎಂಥ ಬರೆಯನ್ನು ಎಳೆದೆಯೇ ಅಕ್ಕ! ಈ ನೋವನ್ನು ಶರೀರದಲ್ಲಿ ಪ್ರಾಣವಿರುವರೆಗೆ ಹೇಗೆ ಮರೆಯುವುದು ಸಾಧ್ಯ ಹೇಳು. ಇದಕ್ಕೆ ಪ್ರಾಯಶ್ಚಿತ್ತವಾದರೂ ಏನಿದೆ ನೋಡು! ಈ ನಿನ್ನ ನಿರ್ಧಾರದಿಂದ ಪರಾವೃತ್ತಗೊಳಿಸುವವರು ಯಾರು ಇರಲಿಲ್ಲವೆ? ಅದಕ್ಕೆ ಭಗವಂತರೂ ಸಮ್ಮತಿಸಿದರೆ? ತಾಯಿ-ತಂದೆ ಅಕ್ಕಂದಿರೆಲ್ಲರಕಿಂತ ಈ ನಿನ್ನ ಸನ್ಯಸನ ವೃತ್ತಿಯಿಂದ ನನಗೇ ಹೆಚ್ಚು ನೋವಾಗಿದೆ. ಇದು ನನ್ನ ಕೃತಿಗೆ ನೀನಿತ್ತ ಉತ್ತರವಾಗಿದೆ. ಆಗಲಿ; ಜೀವನದಲ್ಲಿ ಒಂದು ಹೆಜ್ಜೆ ತಪ್ಪಿದರೂ ಇನ್ನೊಂದು ಹೆಜ್ಜೆಯಲ್ಲಿ ಅದನ್ನು ತಿದ್ದಿಕೊಳ್ಳಬೇಕಂತೆ. ಇನ್ನು ಭಗವಾನ್ ಮಹಾವೀರರ ಸಂಘವನ್ನಾದರೂ ರಾಜಗೃಹಕ್ಕೆ ಕರೆದು ತರುವ ಶುಭಕಾರ್ಯವನ್ನಾದರೂ ಮಾಡುವೆಯಾ? ಅದರಿಂದ ಲೋಕದಲ್ಲಿ ಒಂದು ಮಹತ್ ಕಾರ್ಯ ಸಾಧಿಸುವಂತಿದೆ.

ಹಿಂಸಕ ಸಮ್ರಾಟನ ರಾಜಧಾನಿಗೆ ಅಹಿಂಸಾ ಸಮ್ರಾಟರನ್ನು ಹೇಗೆ ಕರೆದು ತರುವುದೆಂದು ಶಂಕೆ ಪಡಬೇಡ. ಈಗ ಮೊದಲಿನ ಸಮ್ರಾಟರಲ್ಲ. ನನ್ನ ಶ್ರೇಣಿಕರು! ಭಗವಾನ್ ಬುದ್ಧ ದೇವನ ಶಿಷ್ಯರಾಗಿ ಅಹಿಂಸಾವ್ರತವನ್ನು ಸ್ವೀಕರಿಸಿದ್ದಾರೆ! ದಿನಾಲು ಅವರು ಉಪದೇಶ ಕೇಳಲಿಕ್ಕೆ ಗಿರಿಧರ ಕೂಟಕ್ಕೆ ಹೋಗುತ್ತಾರೆ. ಇದೊಂದು ಶುಭ ಲಕ್ಷಣವೆಂದೇ ತೋರುತ್ತಿದೆ. ಒಮ್ಮೆ ಹಿಂಸಕ ವೃತ್ತಿಯನ್ನು ತೊರೆದ ಸಿಂಹವನ್ನು ಬೇಕಾದ ಒಳ್ಳೆಯ ಕಾರ್ಯಕ್ಕೂ ನಾವು ಉಪಯೋಗಿಸಿಕೊಳ್ಳಬಹುದು. ಭಗವಾನ್ ಬುದ್ಧರೇನು ಮಹಾವೀರರೇನು? ಇಬ್ಬರೂ ಭಗವಾನ್ ಪಾರ್ಶ್ವನ ಶಿಷ್ಯಕೋಟಿಯೊಳಗಿನವರೇ ಅಲ್ಲವೆ? ಅವರಿಬ್ಬರೂ ಉಪದೇಶಿಸುವುದು ಶ್ರಮಣಧರ್ಮವನ್ನೇ ಅಲ್ಲವೆ? ಅಂದಮೇಲೆ ಇಂದು ಬುದ್ಧ ದೇವನ ಶಿಷ್ಯತ್ವವನ್ನು ಸ್ವೀಕರಿಸಿದವರಿಗೆ ನಾಳೆ ಭಗವಾನ್ ಮಹಾವೀರರ ಶಿಷ್ಯರಾಗುವುದರಲ್ಲಿ ಹಿಂದುಳಿಯುವುದಾದೀತೆ? ಒಮ್ಮೆ ಧರ್ಮದ ಕಡೆಗೆ ಮನಸ್ಸು ಹೊರಳಿದೆ; ಆಯಿತು.

ಅಕ್ಕ !—ಅಲ್ಲ—ಆರ್ಯೆ ಸುಜ್ಯೇಷ್ಠಾ ! ಒಮ್ಮೆ ಭಗವಾನ್ ಮಹಾವೀರರನ್ನು ರಾಜಗೃಹದ ಸೀಮೆಯಲ್ಲಾದರೂ ಕರೆದುಕೊಂಡು ಬಾ. ಬೇಕಾದಷ್ಟು ದೊಡ್ಡಸಂಘವಿರಲಿ. ಎಲ್ಲರನ್ನೂ ಸತ್ಕರಿಸಿ ಕರೆದುಕೊಂಡು ಹೋಗುವ ಹೊಣೆ ನನಗೆ ಸೇರಿರಲಿ. ನಿನ್ನ ಚೇಳಿನಿಯೆಂದು ಭಗವಂತರ ಸಂದರ್ಶನಕ್ಕೆ ಬರುವದಿಲ್ಲ; ಸಾಮ್ರಾಜ್ಞಿಯೆಂದು ಬರುವೆ; ಬರೇ ಸಾಮ್ರಾಜ್ಞಿಯಲ್ಲ; ಸಮ್ರಾಟರೊಡನೆ ಬರುವೆ. ಶ್ರಮಣ ಸಂಘದ ಸೇವೆಗೆ ಸಾಮ್ರಾಜ್ಯದ ಶಕ್ತಿಯೆಲ್ಲ ಸಿದ್ಧವಾಗಿ ನಿಲ್ಲುವುದು. ಅಂದ ಮೇಲೆ ನಮ್ಮ ಭಗವಾನ್ ಮಹಾವೀರರ ಧರ್ಮಕ್ಕೆ ಪ್ರಭಾವನೆ ಎಂಥದು ? ಅದಕ್ಕೆ ಎಷ್ಟು ವಿಶಾಲ ಕ್ಷೇತ್ರ ದೊರೆಯುವುದು ? ನೀನೇ ಯೋಚಿಸು ತಾಯೀ !

ಇನ್ನು ನನ್ನ ಬಹುದಿನದ ಕನಸು ನನಸಾಗುವ ಕಾಲ ಇದೀಗ ಒದಗಿ ಬರುವಂತೆ ತೋರುವುದು. ನನ್ನ ಜೀವನದ ಧ್ಯೇಯ ಸಿದ್ಧಿಸುವ ಲಕ್ಷಣ ಕಂಡು ಬರುತ್ತಿವೆ. ಸಮ್ರಾಟರು ದಿನ ದಿನಕ್ಕೆ ಒಳ್ಳೆಯವರಾಗುತ್ತಿದ್ದಾರೆ. ನನ್ನ ಮಾತಿನ ಮೇಲೆ ಶ್ರದ್ಧೆ ವಿಶ್ವಾಸಗಳನ್ನು ಇಡುತ್ತಿದ್ದಾರೆ. ನಮ್ಮಲ್ಲಿಯ ಕೇವಲ ಇಂದ್ರಿಯ ಭೋಗಲಾಲಸೆಯ ಸಂಬಂಧ ದೂರವಾಗಿ ನಿಜವಾದ ಪ್ರೇಮಸಾಗರದಲ್ಲಿ ಮೀಯುತ್ತಿದ್ದೇವೆ. ಅಧ್ಯಾತ್ಮರಾಗರಸಿಕರಾಗಿದ್ದೇವೆ. ದಾಂಪತ್ಯ ಜೀವನದ ನಿಜವಾದ ರಸವನ್ನು ಸವಿಯುತ್ತಿದ್ದೇವೆ.

ಬರುವ ವರ್ಷಾಯೋಗವನ್ನೆಲ್ಲ ರಾಜಗೃಹದಲ್ಲಿಯೇ ಭಗವಾನ್ ಮಹಾವೀರರು ಕಳೆಯುವಂತೆ ಮಾಡುವಿಯಾ ? ಅದಕ್ಕೂ ಮುಂಚೆ ಒಮ್ಮೆ ಇತ್ತ ಬಂದು ಹೋಗಲಿ ಭಗವಂತರು !

ತಮ್ಮ ವಿಧೇಯ,

—ಚೇಲನಾ.

—×—

೨

ಸುಜೇಷ್ಠಾ ಹೇಳಿದ ಕತೆ.

ಯುವರಾಜ ಅಜಾತಶತ್ರುವು ವಿಪುಲಾಚಲವನ್ನು ಆರ್ಯಿಕಾ ಸಂಘದ ದರ್ಶನಕ್ಕೆಂದು ಹತ್ತಿದಾಗ ಹೊತ್ತು ಹೊರಳಿದ್ದಿತು. ವರ್ಷಾಕಾಲವು ಮುಗಿಯುತ್ತ ಬಂದುದರಿಂದ ಬಿಸಿಲೂ ಬೆಳೆಯುವುದರಲ್ಲಿತ್ತು. ಆದರೂ ಯಾವ ತಾಪವನ್ನು ಗಮನಿಸದೆ ಈಗಾಗಲೇ ವಿಪುಲಾಚಲದ ಮೇಲೆ ಶ್ರಾವಕರ ಸಮೂಹವು ಸೇರಿದ್ದಿತು. ವರ್ಷಾಯೋಗದ ನಾಲ್ಕು ತಿಂಗಳುಗಳೆಲ್ಲ ಭಗವಾನ್ ಮಹಾವೀರ ತೀರ್ಥಂಕರರ ಪ್ರವಚನಗಳನ್ನು ಕೇಳಿದ್ದರೂ ಜನತೆಯ ಮನವು ಇನ್ನೂ ತಣಿದಿರಲಿಲ್ಲವೇನೊ! ಎಂದಿನಂತೆಯೇ ಜನ ತಂಡ ತಂಡವಾಗಿ ಬೆಟ್ಟವನ್ನು ಹತ್ತಿ ಬರುತ್ತಿದ್ದಿತು. ಆರ್ಯಿಕಾ ಸಂಘವೆಂದರೆ ಅಷ್ಟು ಪ್ರೇಮ ಭಕ್ತಿಗಳು ಜನರಲ್ಲಿ. ಅದರಲ್ಲೂ ಈ ಸಂಘದ ನಾಯಿಕೆಯ ವಿಷಯದಲ್ಲಿ ಸ್ವತ: ಭಗವಂತನೂ ಸಹ ಆಗಾಗ ಆದರ ಅಭಿಮಾನಗಳನ್ನು ವ್ಯಕ್ತ ಪಡಿಸುತ್ತಿದ್ದನು. ತೀರ್ಥಂಕರರೂ ಗೌರವದಿಂದ ಕಾಣುತ್ತಿದ್ದ ಆರ್ಯಿಕಾ ಸಂಘವದು! ಅಂದ ಮೇಲೆ ಯುವರಾಜ ಅಜಾತಶತ್ರುವು ಬರಿಗಾಲಿನಿಂದ ಬೆಟ್ಟವನ್ನೇರಿ ಬರುತ್ತಿರುವುದರಲ್ಲೇನಾಶ್ಚರ್ಯ?

ಯುವರಾಜನ ಜೊತೆಯುಲ್ಲಿ ರಾಜಮನೆತನದ ಪರಿವಾರ ಹಾಗೂ ಆಪ್ತರೆಲ್ಲ ನಡೆದುಕೊಂಡೇ ಬರುತ್ತಿದ್ದರು! ಭಗವಾನ್ ಮಹಾವೀರರು ರಾಜಗೃಹದಲ್ಲಿ ವರ್ಷಾಯೋಗವನ್ನು ಕಳೆದು ಇಂದು ಪಾವಾಪುರಿಯತ್ತ ಪ್ರಯಾಣ ಬೆಳೆಯಿಸುವವರಿದ್ದರು. ಅವರನ್ನು ಬೀಳ್ಕೊಡುವದಕ್ಕಾಗಿ ದೂರ ದೂರಿನ ಬಂಧುಗಳೆಲ್ಲ ಶ್ರೇಣಿಕರಾಜನಲ್ಲಿ ಬಂದು ಸೇರಿದ್ದರು. ಎಲ್ಲರಿಗೂ ಸಂಭ್ರಮ. ತಮ್ಮ ವಯಸ್ಸು, ದೂರಿನ ಪ್ರವಾಸ ಇವಾವುಗಳನ್ನೂ ಗಮನಿಸದೆ ವೀತಿಭಯದಿಂದ ಪ್ರಭಾವತಿ, ಕೌಶಾಂಬಿಯಿಂದ ಪದ್ಮಾವತಿ, ಉಜ್ಜಯಿನಿಯಿಂದ ಶಿವಾದೇವಿ ಮೊದಲಾದವರೆಲ್ಲರೂ ತಮ್ಮ ತಮ್ಮ ಮಕ್ಕಳು ಮರಿಗಳೊಡನೆ ಭಗವಂತನ ದರ್ಶನಕ್ಕೆ ಬಂದಿದ್ದರು. ಅಕ್ಕಂದಿರೆಲ್ಲರ ಆಗಮನ, ಭಗವಂತನ ವರ್ಷಾಯೋಗ, ಸಂಘದ ಪ್ರಯಾಣದ ಸಿದ್ಧತೆಗಳಿಂದಾಗಿ

ಮಹಾರಾಣಿಯಾದ ಚೇಳನಾದೇವಿಗೆ ವಿಶ್ರಾಂತಿಯೇ ಇರುತ್ತಿರಲಿಲ್ಲ. ಸಮವಸರಣ ಸಭೆಯಲ್ಲಿ ಸಹೋದರಿಯರ ಹತ್ತಿರ ಕುಳಿತು ಭಗವಂತನ ಉಪದೇಶಗಳನ್ನು ಕೇಳುವದೆಂದರೆ ಆವಳಿಗೆ ಹಿಡಿಸಲಾರದಷ್ಟು ಹರ್ಷ. ಅದರಲ್ಲೂ ಶ್ರಾವಕ ಶ್ರೇಷ್ಠನಾಗಿ ಮುಂದೆ ಕುಳಿತ ತನ್ನ ಪತಿ ಶ್ರೇಣಿಕನನ್ನು ಕಂಡಾಗಲಂತೂ ಅವಳ ಮುಖದಲ್ಲಿ ಒಂದು ತರದ ವಿಜಯಯೋತ್ಸಾಹ ತುಂಬಿತುಳುಕುವದು. ಆದರೆ ಇಂದು ಈ ಸಹೋದರಿಯರ ಬಳಗದಲ್ಲಿ ಚೇಳನಾ ಇರಲಿಲ್ಲ. ಅವರೆಲ್ಲರಿಗೆ ಮಾರ್ಗದರ್ಶಕನಾಗಿ ಈಗ ಯುವರಾಜ ಅಜಾತಶತ್ರುವೇ ಆರ್ಯಿಕಾ ಸಂಘದ ದರ್ಶನಕ್ಕೆಂದು ವಿಪುಲಾಚಲವನ್ನು ಏರುತ್ತಿದ್ದಾನೆ. ಉತ್ಸಾಹದಿಂದ ಒಬ್ಬರಿಗಿಂತ ಒಬ್ಬರು ಮುಂದೆ ಮುಂದೆ ಬರುತ್ತಿದ್ದಾರೆ. ಭರ್ರೆಂದು ಬೀಸುವ ಗಾಳಿಗೆ ಹಾರಾಡುವ ಆ ಹೆಣ್ಣುಮಕ್ಕಳ ಸೀರೆಯ ಸೆರಗುಗಳು ಧರ್ಮಧ್ವಜಗಳಂತೆ ವಿಪುಲಾಚಲದ ಮೇಲೆಲ್ಲ ಸಾಲಾಗಿ ಕಂಗೊಳಿಸುತ್ತಿದ್ದವು.

ಇಂದು ಆರ್ಯಿಕಾ ಸಂಘವು ವಿಪುಲಾಚಲದ ಉತ್ತರ ಭಾಗದಲ್ಲಿ ನೆಲೆಸಿದ್ದಿತು. ಅದು ಬಹು ರಮಣೀಯವಾದ ಸ್ಥಳವು. ಒಂದು ವಿಸ್ತೀರ್ಣವಾದ ಶಿಲೆಯ ಮೇಲೆ ಸಂಘ ನಾಯಿಕೆಯು ಪೂರ್ವಾಭಿಮುಖವಾಗಿ ಕುಳಿತಿದ್ದಾಳೆ. ನಡು ಹಗಲಿನ ತಪಸ್ಸಿಗೆಂದು ಅಲ್ಲಿ ಬಂದು ಕುಳಿತವಳು ಇಂದು ಎದ್ದಂತಿಲ್ಲ. ಸಮೀಪದಲ್ಲಿಯೇ 'ದೇವದತ್ತ'ಗುಹೆಯಲ್ಲಿ ಸಾಮಾಯಿಕಕ್ಕೆ ಕುಳಿತ ಉಳಿದ ಆರ್ಯಿಕೆಯರೂ ಕೂಡ ಪ್ರವಚನದ ಸಮಯ ಸಮೀಪಿಸಲು ಒಬ್ಬೊಬ್ಬರೇ ಎದ್ದು ಬಂದು ಅವಳ ಸುತ್ತ ನೆರೆದರು. 'ನಮೋಸ್ತು' ಮಾಡಿ ಕುಳಿತುಕೊಂಡರು. ಹಾಗೆಯೇ ರಾಜಗೃಹ ನಿವಾಸಿಗಳೂ ಸೇರಹತ್ತಿದರು. ಎಲ್ಲರ ಮನಸ್ಸೂ ಉಪದೇಶ ಶ್ರವಣಕ್ಕಾಗಿ ತವಕಗೊಂಡಿತ್ತು. ಆದರೆ ಆರ್ಯಿಕೆಯು ಸುತ್ತಲಿರುವ ಸೃಷ್ಟಿಸೌಂದರ್ಯದ ಮೇಲೆ ದೃಷ್ಟಿಯನ್ನು ಆಡಿಸುತ್ತ ಯಾವುದೋ ವಿಚಾರದಲ್ಲಿ ಮಗ್ನಳಾದಂತೆ ಇದ್ದಳು.

ಹಿಮ್ಮಗ್ಗಲಿಗೆ ಸ್ವಲ್ಪ ಅಂತರದಲ್ಲಿಯೇ ರಾಜಗೃಹದ ಭವ್ಯವಾದ ಹೊರ ಕೋಟೆಯು ಸಾಮ್ರಾಜ್ಯದ ಭದ್ರತೆಯನ್ನು ಪ್ರದರ್ಶಿಸುತ್ತ ವಿಪುಲ, ರತ್ನ ಮತ್ತು ಚೈತ್ಯಗಿರಿಗಳ ಮೇಲಿಂದ ಹಾಯ್ದು ವೈಭಾರಗಿರಿಯವರೆಗೂ ವ್ಯಾಪಿಸಿದ್ದಿತು. ಆ ಗಿರಿವ್ರಜದ ನಡುವಿರುವ ರಾಜಗೃಹ ನಗರಿಯೊಳಗಿನ ಜಿನಮಂದಿರಗಳ ಉತ್ತುಂಗ ಶಿಖರಗಳು ಸುವರ್ಣ ಕಲಶಗಳಿಂದ ಥಳ ಥಳ

ಹೊಳೆಯುತ್ತಿದ್ದುವು; ರಾಜಧಾನಿಯ ವೈಭವವನ್ನು ಲೋಕಕ್ಕೆ ಪ್ರದರ್ಶಿಸುತ್ತಿದ್ದುವು. ಇಂಥ ಲೌಕಿಕ ಸುಖಕ್ಕೆ ವಿಮುಖವಾಗಿ ಕುಳಿತಂತಿತ್ತು, ಆರ್ಯಿಕೆಯರ ಸಂಘ. ಅವರ ಎದುರಿಗೆ ಸಮೀಪದಲ್ಲಿಯೇ ‘ತಪೋದಾ’ ನದಿಯು ವಿಪುಲಾಚಲದ ಪಾದವನ್ನು ತೊಳೆಯುತ್ತ ಹರಿಯುತ್ತಿದೆ. ಅದರ ಆಚೆಗೆ ವಿಸ್ತಾರವಾದ ‘ವೇಣುವನ’ ವ್ಯಾಪಿಸಿದೆ. ಅದರಲ್ಲಿ ಯುವರಾಜ ಅಜಾತ ಶತ್ರುವು ನಿರ್ಮಿಸಿದ ಎತ್ತರವಾದ ಸ್ತೂಪವು ಧರ್ಮದ ಮಹಿಮೆಯನ್ನು ಪ್ರದರ್ಶಿಸುತ್ತ ನಿಂತಿದೆ. ಅದರ ಮೇಲೆ ಕೆತ್ತಿದ ಭಗವಾನ್ ಪಾರ್ಶ್ವನಾಥನ ದಿವ್ಯ ವಾಕ್ಯಗಳು! ಅಲ್ಲಿಯೇ ನೆರೆಯಲ್ಲಿ ‘ಕಾರಂಡಕ ನಿವಾಸ’ ಎಂಬ ಸರೋವರವು ಧರ್ಮ ದೇವತೆಯ ಆಡುಂಬೊಲದಂತೆ ಕಂಗೊಳಿಸುತ್ತಿದೆ. ಅದರ ಹತ್ತಿರದಲ್ಲಿರುವ ‘ತಪೋಧರ್ಮ’ವೆಂಬ ಹೂದೋಟವು ತಪಸ್ವಿಗಳ ಬೀಡಾಗಿದ್ದಿತು. ‘ಶತಧಾರಾ’ಬುಗ್ಗೆಯಂತೂ ತೀರ್ಥಂಕರರ ವಾಣೀ ವಿಲಾಸದಂತೆ ಸತತ ಚಿಮ್ಮುತ್ತಿದ್ದಿತು.

ಬೆನ್ನ ಹಿಂದೆ ಇರುವ ಸಂಪತ್ತಿನ ಸಾಗರ, ಮುಂದೆ ಇರುವ ತ್ಯಾಗದ ಮಹಿಮೆಯನ್ನು ಸಾರುವ ವಿಶಾಲವಾದ ವಿಶ್ವ. ಎರಡೂ ಸೇರಿ, ಆ ಮುಪ್ಪಿನ ಆರ್ಯಿಕೆಗೆ ಕಳೆದು ಹೋದ ದಿನಗಳನ್ನು ನೆನಪಿಗೆ ತಂದು ಕೊಟ್ಟವು! ಹಲ್ಲುದುರಿದುವು, ತಲೆ ಬೆಳ್ಳಗಾಯಿತು, ಮುಖ ಮುದುಡಿತು, ಕೈಕಾಲುಗಳು ಒಣಗಿದುವು. ದೃಷ್ಟಿ ಮಂದವಾಯಿತು.... ಇನ್ನೇನು ಸಲ್ಲೇಖನದ ಸಮಯವೂ ಕೂಡ ಸಮೀಪಿಸಿತು. ಆದರೆ ಆ ಹಿಂದಿನ ದಿನಗಳನ್ನು ಮರೆಯುವದೆಂತು.... ? ಎಂತು ... ?

ಆ ತೊಂಭತ್ತಾರು ವರ್ಷ ಪ್ರಾಯದ ಆರ್ಯಿಕೆಯ ಬಾಯಿಂದ ಅನುಭವದ — ಅನುಭಾವದ — ನುಡಿಗಳನ್ನು ಕೇಳಲು ಜನ ಸಮೂಹವು ಕುತೂಹಲ ತಳೆದು ಎದುರಿಗೆ ಕುಳಿತಿದೆ. ಕ್ಷಣವೊಂದು ಯುಗವಂತೆ ಕಳೆಯುತ್ತಿದೆ.

ಆ ದಿನಗಳನ್ನುಳಿದು ಧಾರ್ಮಿಕ ಜೀವನ ರಂಗದಲ್ಲಿ ಆರ್ಯಿಕೆಯ ಮನಸ್ಸು ಪ್ರವೇಶಿಸಿತು. ಸುತ್ತಲಿರುವ ಗಿರಿವನಗಳಲ್ಲಿ ಮಹಾವೀರನ ಜೊತೆಯಾಗಿ ಕಳೆದ ಹದಿನಾಲ್ಕು ಚಾತುರ್ಮಾಸಗಳೆಲ್ಲ ಅವಳ ಸ್ಮೃತಿಪಥದಲ್ಲಿ ಸುಳಿದು ಹೋದುವು! ಆ ಧರ್ಮ ಸಭೆಗಳು! ಆ ಸಮವಸರಣ! ಅಂಥ

ದಿವ್ಯ ಉಪದೇಶಗಳು ! —ಇನ್ನೂ ಅವಳ ಕಣ್ಣೆದುರಿಗೆ ಕಟ್ಟಿದಂತಿದ್ದುವು, ಕಿವಿಯಲ್ಲಿ ಗುಣು ಗುಣಿಸುತ್ತಿದ್ದುವು !

ಸಮವಸರಣ ಸಭೆಯಲ್ಲಿ ಮೊದಲ ಸಲ ಚೇಳನಾದೇವಿಯನ್ನು ಕಂಡಾಗ ನನ್ನ ಹೃದಯದಲ್ಲೆದ್ದ ಭಾವನಾ ತರಂಗಗಳೆಂಥವು ? ಮನದ ಶಾಂತಿ ಕದಡಿದ ಬಗೆ... ಎಂಥದು ? ಶ್ರೇಣಿಕ ರಾಜನು ಬಂದು ವಂದಿಸಿ ದಾಗ ಮನಸ್ಸು ಏನನ್ನು ನೆನೆಯಿತು ? ನನ್ನ ಮುಖ ಲಕ್ಷಣ ಹೇಗೆ ಒಮ್ಮೆಲೇ ಬದಲಾಯಿತು ?

ಸಂಸಾರದ ಸ್ವರೂಪವನ್ನರಿತ ಭಗವಂತ ಇದನ್ನೆಲ್ಲ ಕಂಡು ಹಿಡಿದ ! ಸೂಕ್ಷ್ಮದರ್ಶಿಯಾತ... !

'ಆತ್ಮ ಪ್ರದೇಶದಲ್ಲಿ ಉಂಟಾಗುವ ರಾಗಾದಿ ಭಾವಗಳು ಕರ್ಮದ ಆಸ್ರವಕ್ಕೆ ಕಾರಣವಾಗುವವು.'

ಎಂದಿಷ್ಟೇ ನುಡಿದು, ನನ್ನ ಕಡೆಗೆ ದಿವ್ಯದೃಷ್ಟಿಯೊಂದನ್ನು ಬೀರಿ, ಶ್ರೇಣಿಕ ಮಹಾರಾಜನಿಗೆ ಸ್ವಾಗತ ಬಯಸಿದರು, ಭಗವಂತರು.

ಹಣೆಯ ಮೇಲೆ ಹೊಸ ಮುತ್ತಿನ ಬಾಸಿಗದಂತೆ ಮೂಡಿ ಬಂದ ಬೆವರು ಹನಿಗಳನ್ನು ತೊಡೆದುಕೊಳ್ಳುತ್ತ ನತ ಮಸ್ತಕನಾಗಿ ಸಮ್ರಾಟ ಶ್ರೇಣಿಕ ಕುಳಿತುಕೊಂಡ. ಹಾರುತ್ತಿರುವ ಹೃದಯ ಇನ್ನೂ ಶಾಂತವಾಗಿರ ಲಿಲ್ಲವೇನೋ !

ಅಂದಿನಿಂದ ಈ ಹದಿನಾಲ್ಕು ವರ್ಷಗಳಲ್ಲಿ ಶ್ರೇಣಿಕನಲ್ಲಿ ಆದ ಪರಿವ ರ್ತನೆ ಎಂಥದು ? ನಾನು ಆರ್ಯಿಕೆಯಾಗಿ ಸಾಧಿಸಲಾಗದ ಕಾರ್ಯವನ್ನು ಶ್ರಾವಿಕೆಯಾಗಿ ಚೇಳನಾ ಸಾಧಿಸಿದಳಲ್ಲ ! ಅವಳ ತಪಸ್ಸೇನೂ ಕಡಿಮೆ ತರ ಗತಿಯದಲ್ಲವಲ್ಲ ! ಧರ್ಮ ಪ್ರಭಾವನೆಗೆ ಸಮ್ರಾಟನ ಸಹಕಾರವನ್ನೊದಗಿಸು ದುದೇನೂ ಚಿಕ್ಕ ಕೆಲಸವಲ್ಲ.. ಚೇಳನಾ ಕೇವಲ ಸಾಮ್ರಾಜ್ಞಿಯಲ್ಲ; ಧರ್ಮಸಾಮ್ರಾಜ್ಞಿ !

"ನಮೋಸ್ತು ತಾಯೀ ನಮೋಸ್ತು ! ನಮೋಸ್ತು !!"

ಅಜಾತಶತ್ರುವು ಆರ್ಯಿಕೆಗೆ ಆದರದಿಂದ ವಂದಿಸಿದ. ಉಳಿದವರೂ ವಂದಿಸಿದರು.

"ಸದ್ಧರ್ಮ ವೃದ್ಧಿರಸ್ತು !" ಎಂದು ಹರಿಸಿದಳು ಆರ್ಯಿಕೆ. ತುಸು ತಡೆದು "ತಾಯಿ, ತಂದೆ, ಅಕ್ಕ: ತಮ್ಮ ಎನ್ನುವ ಸಂಬಂಧ ನಮ್ಮ ಸುತ್ತ ಇನ್ನೂ ಏಕಪ್ಪ ..? ಅದೆಲ್ಲ ಸಾಕೆಂದೇ ಬಿಟ್ಟು, ಈ ಪಿಂಛಿ ಕಮಂಡಲು ಗಳನ್ನು ಹಿಡಿದುದಲ್ಲವೆ? ಇನ್ನೂ ಅದೇ ಬಂಧನದಲ್ಲಿ ಬಿಗಿಯ ಬೇಕೆಂರಿದಿರು ವಿಯಾ ?" ಎಂದಳು, ನಸುನಗುತ.

ಇನ್ನೇನು, ಯುವರಾಜನ ಆಗಮನವಾಯಿತು. ರಾಜನ ಬಳಗ ಬಂದಿತು. ಆರ್ಯಿಕೆಯ ಪ್ರವಚನ ಆರಂಭವಾಗುವುದು—ಎಂದು ಶ್ರಾವಕರು ಆತುರರಾಗಿ ಕಿವಿದೆರೆದು ಕುಳಿತರು. ಮನಸ್ಸಿಗೊಟ್ಟು ಮುಂದಿನ ಮಾತುಗ ಳನ್ನು ಕೇಳಲು ಸಿದ್ಧರಾದರು. ಸಾವಧಾನ ಚಿತ್ತರಾದರು.

ಸ್ವಲ್ಪ ಸಮಯ ಸರಿಯಿತು.

" ಭಗವಂತರನ್ನು ಎಲ್ಲಿಯ ವರೆಗೆ ಕಳಿಸಿ ಬಂದೆ ? ಸಂಘ ಯಾವ ಮಾರ್ಗವಾಗಿ ಸಾಗಿತು? ಇಂದು ಸಾಯಂಕಾಲ ಎಲ್ಲಿ ತಂಗುವರು?" ಆರ್ಯಿ ಕೆಯು ಒಂದೇ ಉಸುರಿನಲ್ಲಿ ನೂರು ಪ್ರಶ್ನೆಗಳನ್ನು ಯುವರಾಜನಿಗೆ ಕೇಳಿ ದಳು. ಜನರು ತನ್ನ ಉಪದೇಶವನ್ನು ಕೇಳಲಿಕ್ಕೆ ಅವಸರ ಪಡುತ್ತಿದ್ದಾ ರೆಂಬುದು ಅವಳಿಗೆ ಗೊತ್ತು.

" ಗಿರಿಧರ ಕೂಟದಲ್ಲಿ ಇಂದು ಭಗವಂತರ ಬೆಳಗಿನ ಪ್ರವಚನವಾ ಯಿತು; ಆ ಮೇಲೆ ಜೀವಕ ವನದಲ್ಲಿ ಧ್ಯಾನ ತೀರಿಸಿಕೊಂಡು ಪ್ರಯಾಣ ಬೆಳೆಯಿಸಿದರು.... "

ಯುವರಾಜ ಅಜಾತಶತ್ರುವು ವಿವರಿಸ ತೊಡಗಿದ.

" ಅದೆಲ್ಲ ಗೊತ್ತಾಗಿದೆ; ಮುಂದೆ ? "

ಆರ್ಯಿಕೆ ಅವಸರ ವ್ಯಕ್ತ ಪಡಿಸಿದರು.

ಅದನ್ನರಿತು ಅಜಾತಶತ್ರುವು ನುಡಿದ :

"ತಪೋದಾ ನದಿಯ ಸ್ನಾನ ಘಟ್ಟದ ಮಾರ್ಗವಾಗಿ ಸಾಗಿದರು ಭಗ ವಂತರು. ಹಾಗೆಯೇ 'ಸೀತಾವನ'ದಲ್ಲಿ ಹಾಯ್ದು, ಮುನಿಸುವ್ರತರು ಬಾಲ್ಯ ದಲ್ಲಿ ವಿಹರಿಸಿದ ಸ್ಥಳಗಳಲ್ಲೆಲ್ಲ ಸಂಚರಿಸಿ, ಹೊಸ ರಾಜಗೃಹದ ಮೇಲಿಂದ ನಾಲಂದಮುಖವಾಗಿ ಮುನ್ನಡೆದರು... ಇಂದು ನಾಲಂದ ವಿದ್ಯಾಲಯದ ಹೊರವಲಯದಲ್ಲಿ ತಂಗುವ ಲಕ್ಷಣ ತೋರುವುದು. 'ತಪೋಧರ್ಮ'ವನವನ್ನು

ದಾಟಿದೊಡನೆಯೇ 'ಕಾರಂವಕಕೆರೆ'ಯ ತಟದಲ್ಲಿಯೇ ಭಗವಂತರಿಗೆ ವಂದಿಸಿ ಮರಳಿದೆವು.

"ಅದಕ್ಕೆ ಎಷ್ಟು ಹೊತ್ತಾಯಿತು?"

"ಅಲ್ಲಿಂದ ಇದೀಗ ಇಲ್ಲಿಯೇ ಬಂದೆವು."

"ಹೇಗೋ?" ಬೆರಗಿನ ಉದ್ಗಾರ ಆರ್ಯಿಕೆಯದು.

"ತಮ್ಮ ದರ್ಶನ ಮಾಡಿಕೊಂಡು ಮನೆಗೆ ಹೋಗುವ—ಎಂದು ಕೊಂಡು ಎಲ್ಲರೂ ಇತ್ತ ಕಡೆಗೇ ಬಂದೆವು..."

"ಅದಕ್ಕೇ ಜೊತೆಯಲ್ಲಿ ಯುವರಾಜ್ಞಿ ಇಲ್ಲವೆನೋ..?"

"ಅವಳೂ ಸಂಘದ ಜೊತೆಯಲ್ಲಿ ಹೋಗಿ ಬಿಟ್ಟಳಲ್ಲ..!"

"ಅಂತಲೇ ತಮ್ಮ ಹೆಜ್ಜೆ ಇತ್ತ ತಿರುಗಿದುವೋ..?

ಬಚ್ಚು ಬಾಯಿ ತೆರೆದು ಆರ್ಯಿಕೆ ನಗೆಯಾಡಿದಳು.

"ಹಾಗೇನಿಲ್ಲಮ್ಮ! ಮಹಾರಾಜರು ನಗರದಲ್ಲಿ ಇಲ್ಲದಾಗ ತಮ್ಮ ಸಂಘದ ಯೋಗ ಕ್ಷೇಮ ವಿಚಾರಿಸಬೇಡವೇ ?"

"ಇದೇ ಬುದ್ಧಿ ಕೊನೆಯ ವರೆಗೂ ಇರಲಪ್ಪ!" ಎಂದು ಮನದಲ್ಲಿಯೇ ಆರ್ಯಿಕೆ ಎಂದುಕೊಂಡಳು." ಶ್ರೇಣಿಕ ಮಹಾರಾಜರು ಎಂದು ತಿರುಗುವರು?"

"ಭಗವಂತರನ್ನು ಪಾವಾನಗರದ ವರೆಗೆ ಕಳುಹಿಸಿ, ಹಿಂದಿರುಗ ಬಹುದು...."

"ಅತ್ತೆ ಮಾವಂದಿರ ಸೇವೆಗೆ ನಿನ್ನ ಹೆಂಡತಿಯೂ ಅಲ್ಲಿಯ ವರೆಗೆ ಸಂಗಡ ಇರುವಳೆನ್ನು...."

"ಇರಬೇಕಲ್ಲ....!"

ಎಷ್ಟು ಒತ್ತಿ ಹಿಡಿದರೂ ಅಜಾತಶತ್ರುವಿನ ದನಿಯಲ್ಲಿ ನಸುವೆ ಅಸಮಾಧಾನ ಹೊರ ಹೊಮ್ಮಿ ಬಂದಿತು. ಇದು ಆರ್ಯಿಕೆಯ ಲಕ್ಷಕ್ಕೆ ಬಾರದೆ ಹೋಗಲಿಲ್ಲ. ಅದಕ್ಕೆ ಅಜಾತಶತ್ರುವಿಗೆ ಪ್ರತಿಯಾಗಿ,

"ನೀವಿನ್ನೂ ಯುವಕರು; ನಿಮಗೆಲ್ಲ ಇಂಥ ಧರ್ಮ ಬುದ್ಧಿಯಲ್ಲಿ ಗಮನ ಕಡಿಮೆ. ಇದೆಲ್ಲ ಈಗ ನಿಮಗೆ ಅರ್ಥವಾಗದು. ಭೋಗಾಸಕ್ತಿಯ ಕಡೆಗೇ ಸ್ತ್ರೀ ಪುರುಷರ ಮನಸ್ಸು ಓಡುವುದು. ನಿಮ್ಮಂತೆಯೇ ಎಲ್ಲರ

ಮನಸ್ಸೂ ತಾರುಣ್ಯದಲ್ಲಿ ಇರುವುದು. ನಾನು ಚಿಕ್ಕವಳಿರುವಾಗ ನಡೆದ ಒಂದು ಸಂಗತಿಯನ್ನು ಹೇಳುವೆ ಕೇಳಿರಿ. ಅಂವರೆ ನಿಮ್ಮ ಮನಸ್ಸಿನ ಅರ್ಥ ನಿಮಗೆ ಆಗುವುದು.'' ಆರ್ಯಿಕೆ ಎಂದಳು.

ಶ್ರಾವಕರೆಲ್ಲರೂ ಕತೆ ಕೇಳಲು, ಕಿವಿಗೊಟ್ಟು ಕುಳಿತರು; ಆಸೆಯಿಂದ ಕುಳಿತಲ್ಲಿಯೇ ಅಕ್ಕ ಪಕ್ಕದವರನ್ನು ನೂಕಿ ತುಸು ಮುಂದೆ ಸರಿದರು. ಆರ್ಯೆ ಕತೆ ಹೇಳಿದಳು.

೨

ಆ ಇಬ್ಬರು ಅಕ್ಕ-ತಂಗಿಯಂದಿರು ಒಬ್ಬ ಸುಪ್ರಸಿದ್ಧ ರಾಜನ ಮಕ್ಕಳು; ಮತ್ತು ಇಬ್ಬರೂ ಒಬ್ಬ ವಿಖ್ಯಾತರಾಜನನ್ನು ಪ್ರೀತಿಸುತ್ತಿದ್ದರು ! ತಮ್ಮಿಬ್ಬರಿಗೂ ಪ್ರಿಯಕರ ಒಬ್ಬನೇ ಸಮ್ರಾಟ್ ಇರಬಹುದು ಎಂಬುದರ ಕಲ್ಪನೆಯು ಸಹ ಆ ಸಹೋದರಿಯರಿಗೆ ಇರಲಿಲ್ಲ. ತಮ್ಮ ತಮ್ಮ ಮನದಲ್ಲಿಯೇ ತಮ್ಮ ನಲ್ಲನನ್ನು ನೆನೆಯುತ್ತಿದ್ದರು. ಅವನ ಸೌಂದರ್ಯವನ್ನು ಸ್ಮರಿಸುತ್ತಿದ್ದರು, ವೈಭವವನ್ನು ಕಲ್ಪಿಸುತ್ತಿದ್ದರು, ಸಮಾಗಮದ ಸುಖವನ್ನು ಬಯಸುತ್ತಿದ್ದರು. ಅದಕ್ಕಾಗಿ ಹಗಲಿರುಳು ಕೊರಗುತ್ತಿದ್ದರು ಕೊರಗಿ ಕೊರಗಿ ಕಡ್ಡಿಯಂತಾಗಿದ್ದರು.

ಹೆಣ್ಣಿನ ಹೃದಯ ಬಹು ಮೃದು. ಮನಸ್ಸು ಇನ್ನೂ ಮುಗ್ಧ. ಮುಗಿದ ಮೊಗ್ಗೆಯಂತಹದು. ಒಳಗಿನ ಸುಗಂಧದ ಸುಳುವನ್ನು ಸಹ ಸುತ್ತಲಿನ ಸುಳಿಗಾಳಿಗೂ ಬಿಟ್ಟು ಕೊಡದಂಥ ಮುಗ್ಧತೆ. ಅದರಲ್ಲೂ ತಾವು ಪ್ರೀತಿಸುವ ವ್ಯಕ್ತಿ ತಮ್ಮ ಮನೆತನಕ್ಕೇ ವೈರಿಯೆನಿಸುವಂಥವ. ಅವನ ಹೆಸರನ್ನು ಉಚ್ಚರಿಸಿದರೂ ಸಾಕು ತಮ್ಮ ತಂದೆ ಕಿವಿ ಮುಚ್ಚಿಕೊಳ್ಳುವರೆಂಬ ಅರಿವು ಅವರಿಬ್ಬರಿಗೂ ಇತ್ತು. ಅಂದ ಮೇಲೆ ಅಕ್ಕ-ತಂಗಿಯಂದಿರು ಒಬ್ಬರಿಗೊಬ್ಬರು ಬಾಯಿಬಿಚ್ಚಿ ತಮ್ಮ ಹೃದಯದೊಲವನ್ನು ಹೇಳುವದಾದರೂ ಹೇಗೆ? ತಮ್ಮ ತಮ್ಮಲ್ಲಿಯೇ ಹೇಳಲಿಕ್ಕಾಗದ ಭಾವ - ಬಯಕೆಯನ್ನು - ಇನ್ನೊಬ್ಬರ ಮುಂದೆ ಉಸುರೊಡೆಯುವುದಕ್ಕೂ ಸಾಧ್ಯವಿರಲಿಲ್ಲ. ತಪ್ಪಿ ತಂದೆಯ ಕಿವಿಯ ಮೇಲೆ ಈ ಸುದ್ದಿ ಬಿದ್ದರಂತೂ ತೀರೇ ಹೋಯಿತು, ತಮಗೆ ಉಳಿಗಾಲವೇ ಇಲ್ಲೆಂಬುದು ಅವರಿಗೆ ಖಚಿತವಿತ್ತು. ಅಂತಲೇ ಅವರ ಆಶೆಯು ಅವರವರ ಮನಸ್ಸಿನ ತೀರ ಒಳಭಾಗದಲ್ಲಿ ಹುದುಗಿಕೊಂಡಿತ್ತು.

ಇಂಥ ಕೈಗೂಡವ ಆಶೆಗಳು ಚಿಂತೆಯನ್ನು ಇನ್ನೂ ಹೆಚ್ಚಿಸುವವು, ಚಿತೆಯಾಗಿ ಸಜೀವಾವಸ್ಥೆಯಲ್ಲಿಯೇ ಸುಡ ಹತ್ತುವವು. ಹೀಗೆ ದಗ್ಧ ಹೃದಯಿಗಳಾಗಿದ್ದರು, ಆ ಮೃದು ಮನಸ್ಸಿನ ಮುಗ್ಧ ಸಹೋದರಿಯರು. ಮುಂದು ಗಾಣದ ತರಳೆಯರು.

ಅವರ ಆಶೆಯು ಮನಸ್ಸಿನ ತೀರ ಆಳವಾದ ಭಾಗದಲ್ಲಿ ಹುದುಗಿಕೊಂಡಿದ್ದಿತು. ಅದರಂತೆ ಅವರ ಇರುವಿಕೆಯೂ ಕೂಡ ತಮ್ಮ ಆಕಾಂಕ್ಷೆಯನ್ನು ಪೂರ್ಣ ಮಾಡಿಕೊಳ್ಳಲಿಕ್ಕೆ ಅನುಕೂಲವಾಗಿರಲಿಲ್ಲ. ದೊಡ್ಡ ಅರಮನೆಯಲ್ಲಿ ವಾಸ. ಭಾರತದಲ್ಲಿಯೇ ಹಿರಿದಾದ ನಗರದಲ್ಲಿರುವುದು. ಸಂಗಡ ಯಾವಾಗಲೂ ದಾಸ - ದಾಸಿಯರು. ಅದರಲ್ಲೂ ತಮ್ಮ ಪ್ರಿಯಕರ ಎಂಭತ್ತು ತೊಂಭತ್ತು ಮೈಲುಗಳ ಆಚೆಗಿರುವ ದೂರಿನ ನಗರದಲ್ಲಿ. ಅದೂ ಒಬ್ಬ ಸಮ್ರಾಟ್ ! ಇವರು ಅವನನ್ನು ಪ್ರೀತಿಸುವುದು ಅವನಿಗೆ ಗೊತ್ತಿದೆಯೋ ಇಲ್ಲವೋ ! ಇವರಿಗಂತೂ ನಗರ, ಉದ್ಯಾನ, ಜಿನಮಂದಿರ ಮತ್ತು ಅರಮನೆಗಳನ್ನುಳಿದು ಬೇರೆ ಸ್ಥಳಗಳ ಪರಿಚಯುವೇ ಇಲ್ಲ. ಹೋಗಲಿಕ್ಕೆ ರಾಜ ಮನೆತನದ ಸಂಪ್ರದಾಯ ಅವಕಾಶವಿತ್ತಿರಲಿಲ್ಲ. ಇಷ್ಟೇ ಅಲ್ಲ, ಅವರ ಮದುವೆಗೂ ಕೂಡ ಗಣರಾಜರೆಲ್ಲರ ಸಮ್ಮತಿ ಬೇಕು. ರಾಜ್ಯನೀತಿಯಲ್ಲಿ ಧರ್ಮಾಚರಣೆಯಲ್ಲಿ ಮತ್ತು ಮನೆತನದ ಸ್ಥಿತಿ-ಗತಿಗಳಲ್ಲೆಲ್ಲ ತಮ್ಮ ಮನೆತನದ ಗೌರವಕ್ಕೆ ಹೊಂದಿಕೆಯಾಗುವಂತಿರಬೇಕು, ಆ ಮನೆತನ. ಈ ಎಲ್ಲ ನಿರೀಕ್ಷಣ ಪರೀಕ್ಷಣಗಳಾಗಿಯೇ ತಮ್ಮ ಅಕ್ಕಂದಿರ ಲಗ್ನಗಳೆಲ್ಲ ಆದುದು. ಅಂದ ಮೇಲೆ ಈ ಹೆಣ್ಣುಗಳ ಪ್ರಣಯ, ಪ್ರೀತಿಗಳಿಗೆ ಅಲ್ಲಿ ಅವಕಾಶವೆಲ್ಲಿ ? ಅವರು ಒಬ್ಬ ಸಾಮಾನ್ಯ ವ್ಯಕ್ತಿಯ ಹೊಟ್ಟೆಯಿಂದ ಹುಟ್ಟಿದ ಸಾಧಾರಣ ವಧುಗಳಾಗಿರಲಿಲ್ಲ. !

ಆ ಸಹೋದರಿಯರ ರೂಪು ಗುಣಗಳು ಅಸಾಮಾನ್ಯವಾಗಿದ್ದುವೆಂತಲೇ ಭಾರತದ ರಾಜ - ಮಹಾರಾಜರೆಲ್ಲ ಅವರನ್ನು ಲಗ್ನವಾಗಲು ಆತುರರಾಗಿದ್ದರು ! ಇಂಥ ಸ್ತ್ರೀ ರತ್ನಗಳ ಸಹವಾಸ ಯಾರ ದೈವದಲ್ಲಿ ಬರೆದಿದೆಯೋ ! — ಎಂಬು ತವಕ ಗೊಂಡಿದ್ದರು. ಅಂಥ ರಾಜರಲ್ಲಿ ಅವರ ಪ್ರಿಯಕರನೂ ಒಬ್ಬ. ಆದರೆ ಈ ಸಂಗತಿ ಪಾಪ ಈ ಮುಗುದೆಯರಿಗೆಲ್ಲಿ ಗೊತ್ತು ? ಗೊತ್ತಿದ್ದರೂ ಮಾಡುವದೇನಿತ್ತು? ಆತ ಇವರ ರಾಜ್ಯದ ವೈರಿ,

ಧರ್ಮದ ವೈರಿ! ಅವನ ಹೆಸರನ್ನು ಉಚ್ಚರಿಸುವುದೂ ಕೂಡ ಮಹಾಪರಾಧ, ಪಾಪ. ಅವರ ಪ್ರಣಯ ಪಕ್ಷಿ ವಜ್ರಪಂಜರದ ಬಂಧನದಲ್ಲಿ ಸಿಕ್ಕು ಹೀಗೆ ಸೊರಗುತ್ತಿದ್ದಿತು.

ಹೀಗಿರಲು ಒಂದು ದಿನ ವರ್ಷಾಯೋಗದ ಆರಂಭದಲ್ಲಿ ಆ ನಗರಿಗೆ ಒಂದು ಮುನಿ ಸಂಘ ಬಂದಿತು. ದೊಡ್ಡ ಸಂಘವದು. ನೂರಾರು ಜನ ಮುನಿಗಳು, ಐಲಕರು, ಕ್ಷುಲ್ಲಕರು ಬ್ರಹ್ಮಚಾರಿಗಳು ಅದರಲ್ಲಿ ಇದ್ದರು. ಅಲ್ಲದೆ ಅನೇಕ ಜನ ಆರ್ಯಿಕೆಯರೂ ಸಹ ಅದರಲ್ಲಿ ಸಮಾವೇಶವಾಗಿದ್ದರು. ಊರಿಗೊಂದು ಪುಣ್ಯನಿಧಿ ನಡೆದು ಬಂದಂತೆ ಸಂಘ ಬಂದಿತು. ಇಂಥ ದೊಡ್ಡ ಸಂಘವನ್ನು ಇಳಿಸಿಕೊಳ್ಳಲು ಆ ಪಟ್ಟಣದಲ್ಲಿ 'ದ್ಯುತಿಪಲಾಶ' ಎಂಬ ಉಪವನವೇ ಉಪಯುಕ್ತವಾಗಿದ್ದಿತು. ಅದು ಸಾಕಷ್ಟು ವಿಸ್ತೀರ್ಣವೂ ಸುಂದರವೂ ಆದ ಹೂದೋಟವು. ಅದರ ನಡುವೆ ಒಂದು ಸುಂದರ ಜಿನಾಲಯವೂ ಇತ್ತು. ಅದರ ಸುತ್ತಲೂ ಕೆಲವು ಶ್ರೇಷ್ಠ ವರ್ಗದ ಕ್ಷತ್ರಿಯರ ಮನೆಗಳೂ ಇದ್ದವು. ಆ ಮನೆಗಳಿಗೆಲ್ಲ ಸುವರ್ಣಕಲಶಗಳು! ಅವುಗಳ ಮೇಲಿಂದಲೇ ಸಮಾಜದೊಳಗಿನ ಅವರ ಅಂತಸ್ತವನ್ನು ಗುರುತಿಸಬಹುದು.

"ವಿಶಾಲಾ ನಗರಿಯೊಳಗಿನ 'ನಾಯ - ಸಂಡವಣ'ದ ವರ್ಣನೆ ಇದ್ದಂತೆ ಇದೆಯಲ್ಲ! ಇದು. ?"
ಶಿವಾದೇವಿ ಮೆಲ್ಲನೆ ಉದ್ಗಾರ ತೆಗೆದಳು.
"ಹೂಂ! ಅದೇ ವನ... ಅಂಥದೇ ವನ ...."
ಆರ್ಯಿಕೆ ಕಥೆ ಮುಂದರಿಸಲು ತೊಡಗಿದಳು....
"ಹಾಗಾದರೆ ಏಳು ಸಾವಿರ ಮಂದಿರಗಳಲ್ಲವೇ ಸುವರ್ಣ ಕಲಶಗಳುಳ್ಳವು ?"
ಆರ್ಯಿಕೆಗೆ ಮುಂದೆ ಕಥೆಯನ್ನು ಸಾಗಿಸಗೊಡದೆ ಪ್ರಭಾವತಿ ಕೇಳಿದಳು.
"ಹೌದು; ವಿಶಾಲಾನಗರಿಯಲ್ಲಿ ಅಷ್ಟಿದ್ದುವು...."

"ಅಷ್ಟೇ ಏಕೆ ? ಹದಿನಾಲ್ಕು ಸಾವಿರ ಚಾಂದಿಯ ಕಲಶಗಳುಳ್ಳ ಮನೆಗಳು ಇಪ್ಪತ್ತೊಂದು ಸಾವಿರ ತಾಮ್ರದ ಕಲಶಗಳುಳ್ಳ ಮನೆಗಳೂ ಇದ್ದುವು.... ಆ ಕಲಶಗಳಿಂದಲೇ ಗಣರಾಜ್ಯದೊಳಗಿನ ಅವರ ಸ್ಥಾನ-ಮಾನ

ಗಳನ್ನು ಕಲ್ಪಿಸ ಬಹುದಿತ್ತು....." ಪದ್ಮಾವತಿಯು ತನಗು ಮನೆಯ ಸುದ್ದಿ ಯೆಂದು ಸ್ವಲ್ಪ ತನ್ನ ಮಾತನ್ನು ನಡುವೆ ಚಾಚಿದಳು.

"ಇದ್ದೀತು; ಆ ಊರಿಗೆ ಮುನಿಸಂಘವೊಂದು ಬಂದ ಸಂದರ್ಭಕ್ಕೆ ಕಥೆ ಬಂದಿತ್ತಲ್ಲನೇ ? ಮುಪ್ಪಿನ ಮನಸ್ಸು, ಅರವು ಮರವು... ಒಮ್ಮೆ ಕಥೆಯ ಜಾಡು ತಪ್ಪಿತೆಂದರೆ ಹೋಗೇ ಬಿಡುವುದು.. ಅರಹಂತ. !" ಎಂಬ ಮುಗುಳುನಗೆಯೊಡನೆ ಕಥೆಯನ್ನು ಆರ್ಯಿಕೆ ಮುಂದರಿಸಿದಳು.

ಆ ಸಂಘದಲ್ಲಿ ಒಬ್ಬ ಬ್ರಹ್ಮಚಾರಿ.! ಇನ್ನೂ ಯುವಕ.. ನಮ್ಮ ಯುವ ರಾಜ ಅಜಿತಶತ್ರುವಿನದೇ ವಯಸ್ಸು ಆಗಿರಬಹುದು.. ಸುಂದರ ರೂಪು.. ಮುಖದಲ್ಲಿ ಯಾವಾಗಲೂ ಮಂದಹಾಸ. ಪಾಪ ! ಇಷ್ಟು ಬೇಗ ಸಂಸಾರ ದಲ್ಲಿ ಇವನಿಗೆ ಏಕೆ ವೈರಾಗ್ಯ ಹುಟ್ಟಿರಬೇಕೋ......! — ಎಂದು ಅವನನ್ನು ನೋಡಿದವರಿಗೆ ಎಲ್ಲರಿಗೂ ಎನಿಸುವುದು. ಆದರೂ ಅವನು ಸ್ವಾಧ್ಯಾಯ, ಸಂಯಮ, ತಪಗಳಲ್ಲೆಲ್ಲ ನಿರತನಾಗಿರುತ್ತಿದ್ದ! ಇವನಿಗೂ ಈ ನಮ್ಮ ಸಹೋದರಿಯರಿಗೂ ಸ್ವಲ್ಪ ದಿನಗಳಲ್ಲಿಯೇ ಹಚ್ಚಿನ ಸಲಿಗೆ ಬೆಳೆಯಿತು. ಮುನಿಸಂಘದ ಸೇವೆಯಲ್ಲಿ ಆ ರಾಜಕುವರಿಯರಿಬ್ಬರೂ ದಿನಾಲು ಮುಂದು ಮುಂದಾಗಿ ಭಾಗವಹಿಸುತ್ತಿದ್ದರು. ದಿನಗಳುರುಳಿದಂತೆ ಆಚಾರ್ಯರ ಅಪ್ಪಣೆ ಯನ್ನು ಪಡೆದು ಆ ಅಭಯಕುಮಾರ ಬ್ರಹ್ಮಚಾರಿಯ ಹತ್ತಿರ ಆಚಾರಾಂ ಗದ ಅಧ್ಯಯನವನ್ನು ಕೂಡ ಅವರು ಆರಂಭಿಸಿದರು.

"ಅಭಯಕುಮಾರನೇ ?" ಅಜಾತಶತ್ರುವು ನಡುವೆಯೇ ತಡೆದು ಕೇಳಿದ ಆರ್ಯಿಕೆಗೆ.

"ಹೂಂ ! ಮುಂದೆ ಹೇಳುವೆ ಕೇಳು..." ಎಂದು ಆರ್ಯಿಕೆಯು ಕಥೆ ಯನ್ನು ಮುಂದರಿಸಿದಳು.

ಆ ಹುಚ್ಚು ಹುಡಿಗೆಯರಿಗೆ ಅವನೊಬ್ಬ ಅವಧಿಜ್ಞಾನಿಯಂತೆ ಕಂಡಿ ರಬೇಕು.. ಇವರ ಮನದ ಇಂಗಿತವನ್ನು ಅರಿತಂತೆ ಅವನೊಮ್ಮೆ ನುಡಿದು ಬಿಟ್ಟ..! ಅವರ ಪ್ರಿಯಕರನ ಹೆಸರನ್ನು ಹೇಳಿದ.. ಇನ್ನೂ ಮುಂದೆ ಹೋಗಿ ಆ ಸಮ್ರಾಟ್‌ನೂ ಈ ಕನ್ನೆಯರಿಗಾಗಿ ಹಗಲಿರುಳೂ ಹಂಬಲಿಸುತ್ತಿದ್ದಾ ನೆಂಬ ಸಂದೇಶವನ್ನು ಸಾರಿದ.."

"ಬ್ರಹ್ಮಚಾರಿಯೋ ? ಏನು ಪ್ರಣಯದೂತನೋ ಅವ ?'

ಪ್ರಭಾವತಿ ಉದ್ಗಾರ ತೆಗೆದಳು. ಇದನ್ನು ಲೆಕ್ಕಿಸದೆ ಆರ್ಯಿಕೆ ಕಥೆಯನ್ನು ಮುಂದೆ ಸಾಗಿಸಿದಳು.

ತನ್ನ ಮಾತುಗಳಿಂದ, ಹೇಳುವ ಸಂಗತಿಗಳಿಂದ ಆ ತರುಣಿಯರಲ್ಲಿ ಇನ್ನಿಷ್ಟು ಪ್ರಣಯದ ಕಿಚ್ಚನ್ನು ಹೊತ್ತಿಸಿದ ಬ್ರಹ್ಮಚಾರಿ. ಅದಕ್ಕಾಗಿ ಆತನಿಂದ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಬೇಕೆಂಬ ಲವಲವಿಕೆಯು ಇಬ್ಬರಲ್ಲೂ ಹೆಚ್ಚಿತು. ಬರ ಬರುತ್ತ ಈ ವಿಷಯವಲ್ಲಿ ಅಕ್ಕ ತಂಗಿಯರಲ್ಲಿ ಸ್ಪರ್ಧೆಯೂ ಉತ್ಪನ್ನವಾಯಿತು.. ಒಬ್ಬಳಿಲ್ಲದಾಗ ಇನ್ನೊಬ್ಬಳು ಬ್ರಹ್ಮಚಾರಿಯ ಸಮೀಪಕ್ಕೆ ಹೋಗಿ ತನ್ನ ಪ್ರಿಯಕರನ ಕುರಿತು ಮಾತಿಗೆ ಆರಂಭಿಸುವಳು.

ಇಂಥ ಮಾತುಕತೆಗಳಿಂದ ತಂಗಿಗಿಂತ ಅಕ್ಕನಲ್ಲಿ ಪ್ರಣಯವು ಗಾಢತರವಾಗಿ ನೆಲೆಸಿದೆ ಎಂಬುದನ್ನು ಆತ ಅರಿತುಕೊಂಡ. ಆದರೆ ಯಾವಳು ಕಿರಿಯಳು ಯಾವಳು ಚಿಕ್ಕವಳು ಎಂಬುದು ಇಷ್ಟು ಪರಿಚಯದ ನಂತರವೂ ಅವನಿಗೆ ತಟ್ಟನೆ ಗುರುತಿಸುವುದು ಸಾಧ್ಯವಾಗಿರಲಿಲ್ಲ. ಒಮ್ಮೊಮ್ಮೆ ಹಿರಿಯಳು ಬಂದಳೆಂದು ಮಾತಿಗೆ ಆರಂಭಿಸಿದಾಗ ಅವಳು ಚಿಕ್ಕವಳಾಗಿರುತ್ತಿದ್ದಳು. ಇನ್ನೊಮ್ಮೆ ಚಿಕ್ಕವಳಿಗೇ ತಿಳಿಸಬೇಕಾದುದನ್ನು ಹಿರಿಯಳಿಗೆ ಹೇಳುತ್ತಿದ್ದನು. ಹೀಗಾಗಿ ಆ ಸಹೋದರಿಯರಿಬ್ಬರಿಗೂ ಬ್ರಹ್ಮಚಾರಿಯ ಬಗ್ಗೆ ಕುತೂಹಲ ಹೆಚ್ಚುತೊಡಗಿತು. ಆದರಿಂದ ಅವನ ವಿಷಯವನ್ನು ಹೆಚ್ಚಿಗೆ ತಿಳಿದುಕೊಳ್ಳಲು ಅವರು ಹವಣಿಸತೊಡಗಿದರು. ಅವನ ಚಟುವಟಿಕೆಗಳ ಮೇಲೂ ಕಣ್ಣಿಡಹತ್ತಿದರು. ಇಂಥವರಲ್ಲಿ ಸಣ್ಣವಳು ಸ್ವಲ್ಪ ಚದುರೆ ! ಅವಳು ಈ ಬ್ರಹ್ಮಚಾರಿಯ ಹತ್ತರ ದೂರ ದೂರ ದೇಶದಿಂದ ಕೆಲವು ಜನರು ಏಕಾಂತದಲ್ಲಿ ಬಂದು, ಕಂಡು ಮಾತನಾಡಿ ಹೋಗುತ್ತಿದ್ದುದನ್ನು ಅರಿತುಕೊಂಡಳು. ಸಮಾಯಿಕಕ್ಕೆಂದು ವನದ ಒಂದು ಬದಿಗೆ ಬ್ರಹ್ಮಚಾರಿಯು ಆಗಾಗ ಹೋಗಿ ಏನನ್ನೊ ನಿರೀಕ್ಷಿಸುತ್ತಿರುವಂತೆ ಅವಳಗೆ ಕಂಡು ಬಂದಿತು. ಆದರಿಂದ ಬರ ಬರುತ್ತ ಅವಳು ಬ್ರಹ್ಮಚಾರಿಯಿಂದ ದೂರವಾಗತೊಡಗಿದಳು. ಇದರಲ್ಲೇನೋ ಕಪಟನಾಟಕ ಇರಬೇಕೆಂದು ಅವಳು ಭಾವಿಸಿದಳು.

ಚಿಕ್ಕವಳಲ್ಲಿ ಆದ ಈ ಸೂಕ್ಷ್ಮ ಪರಿವರ್ತನೆಯ ಅರಿವು ಬ್ರಹ್ಮಚಾರಿಗೂ ಆಗದೆ ಹೋಗಲಿಲ್ಲ. ಇದರಿಂದ ಸ್ವಲ್ಪ ಅಸಮಾಧಾನವೇ ಅವನಲ್ಲೂ ಆಗಿರ ಬೇಕು. ಆದರೂ ಅದನ್ನು ಆತ ತೋರಗೊಡಲಿಲ್ಲ. ಇನ್ನು ಇವಳನ್ನು ಈ ವಿಷಯದಲ್ಲಿ ಮುನ್ನಡೆಯಿಸುವುದು ಸಧ್ಯಕ್ಕೆ ಒಳ್ಳೆಯದೆಂದು ಅವನಿಗೆ ಎನಿಸಲಿಲ್ಲ. ಹೆಸರಿನ ಅಂತರ ವಂದನ್ನು ಬಿಟ್ಟು ರೂಪ ಲಾವಣ್ಯಗಳಲ್ಲಿ ಆ ಅಕ್ಕ ತಂಗಿಯರಲ್ಲಿ ಇದ್ದ ಸಾಮ್ಯದಿಂದ ಅವನ ಸಮಸ್ಯೆ ಸ್ವಲ್ಪ ಸುಲಭವಾದಂತೆ ತೋರಿತು. ಅದರಿಂದ ತನ್ನ ಮುಂದಿನ ಚಟುವಟಿಕೆಯ ಕೇಂದ್ರವನ್ನಾಗಿ ಹಿರಿಯಳನ್ನೇ ಇಟ್ಟುಕೊಂಡು ಪ್ರಯತ್ನಿಸಹತ್ತಿದ. ಹೇಗಾದರೂ ಅವನಿಗೆ ತನ್ನ ಕಾರ್ಯ ಸಫಲವಾದರೆ ಸಾಕಾಗಿತ್ತು.

ವರ್ಷಾಯೋಗ ಮುಗಿಯುತ್ತ ಬಂದಂತೆ ಬ್ರಹ್ಮಚಾರಿಯು ತನ್ನ ಕಾರ್ಯದಲ್ಲಿ ಒಂದು ಹಂತವನ್ನು ಮುಟ್ಟಿದಂತಾಗಿದ್ದಿತು. ಗೆಲುವಿನ ಮುಖದಲ್ಲಿ ಆತ ಇರಹತ್ತಿದ. ಹಾಗೆಯೇ ಒಂದುದಿನ ಜೇಷ್ಠೆಯ ಕೈಯಲ್ಲಿ ಅವಳ ಪ್ರಿಯಕರನ ಭಾವಚಿತ್ರವನ್ನು ಅವಳು ಸ್ವಾಧ್ಯಾಯ ಮಾಡುವ ಶಾಸ್ತ್ರಪೊಂದರಲ್ಲಿ ಸೇರಿಸಿ ಕೊಟ್ಟು ಬಿಟ್ಟ. ತಾನೇನೂ ಅರಿಯದಂತೆ ಅದರ ಪರಿಣಾಮವನ್ನು ನಿರೀಕ್ಷಿಸ ತೊಡಗಿದ.

ತನ್ನ ಪ್ರಿಯಕರನ ರೂಪು, ಗುಣ, ವೈಭವಗಳನ್ನಷ್ಟೇ ಇಲ್ಲಿಯವರೆಗೆ ಕೇಳಿ ಮೋಹಗೊಂಡ ಆಕೆಯ ಮನಸ್ಸು ಈ ಭಾವಚಿತ್ರವನ್ನು ಪಡೆದು ಇನ್ನೂ ಸಂತಸಗೊಂಡಿತು. ತನ್ನ ನಲ್ಲನ ಲಾವಣ್ಯವನ್ನು ಕದ್ದು ನೋಡಿ ಸವಿಯುವಲ್ಲಿ ತನ್ಮಯವಾದಳಾಕೆ...! ಕೆಲವು ಕ್ಷಣ ಬ್ರಹ್ಮಚಾರಿಯನ್ನು ಕೂಡ ಮರೆತು ಬಿಟ್ಟಳು ! ತನ್ನ ತಂಗಿಯ ಬಯಕೆಯ ಕಲ್ಪನೆ ಈಗಾಗಲೇ ಅವಳಿಗೆ ಆಗಿದ್ದರೂ ಸಹ ಆ ಭಾವಚಿತ್ರವನ್ನು ಅವಳಿಗೆ ತೋರಿಸುವ ಗೊಡವೆಗೆ ಹೋಗಲಿಲ್ಲ. ತಾನೊಬ್ಬಳೇ ಮಲ್ಲಿಗೆಯ ಮಂಟಪದಲ್ಲಿ, ಮಾಮರದ ಮರೆಯಲ್ಲಿ, ಕೆರೆಯ ಕಟ್ಟೆಯ ಮೇಲೆಲ್ಲ ಏಕಾಂತದಲ್ಲಿ ಕುಳಿತು ನಲ್ಲನ ಚಲುವನ್ನು ನೋಡಿ, ನೋಡಿ ಸವಿಯ ಹತ್ತಿದಳು. ಭಾವಚಿತ್ರವನ್ನು ಹೃದಯಕ್ಕೆ ಒತ್ತಿ ಕೊಳ್ಳುವಳು, ಮುಖಕ್ಕೆ ಮುದ್ದಿಡುವಳು. ಮರುಕ್ಷಣದಲ್ಲಿ ಬೆದರು ನೋಟದಿಂದ ಚಿಗರೆಗಂಗಳನ್ನು ಸುತ್ತಲೂ ತಿರುಗಿಸಿ, ತನ್ನ ಚಟುವಟಿಕೆಯನ್ನು ಇನ್ನಾರಾದರೂ ಕಂಡರೋ! - ಎಂದು ನಿರುಕಿಸುವಳು. ಭಯ ಪಡುವಳು. ಮೆಲ್ಲನೆ ಸೀರೆಯ ಸೆರಗಿನಲ್ಲಿ ಭಾವಚಿತ್ರವನ್ನು ಮುಚ್ಚುವಳು.

ಭಾವಜೀವಿಯಾದ ಬಾಲೆಯ ಬಗೆಯಾಳವಲ್ಲಿ ಬಯಕೆಯ ಬಳ್ಳಿ ಬೆಳೆದು ನಿಂತಿತು. ಅದು ಈಗಾಗಲೇ ಕುಡಿಯೊಡೆದು ಚಿಗುರು ಬಿಟ್ಟು, ಮೊಗ್ಗೆಯಾಗಿ ಹೂವು ಹೊತ್ತು ನಿಂತಿತು. ಮನದಲ್ಲಿ ಸಾಮ್ರಾಜ್ಞಿಯ ಚಿತ್ರವನ್ನು ಬರೆದು ಬರೆದು ನಿರುಕಿಸತೊಡಗಿತು. ಕಲ್ಪನಾ ಲೋಕದಲ್ಲಿ ಬಹುದೂರ ಸಾಗಿದಳು ಬಾಲೆ. ನಾಳೆ ದೊಡ್ಡ ಸಮ್ರಾಟ್‌ನ ಪಟ್ಟ ಮಹಿಷಿ ! ಸಮ್ರಾಜ್ಞಿ !

ಈ ಕನಸು ಬಹುಕಾಲ ಅವಳ ಮನದಲ್ಲಿ ಸ್ಥಿರವಾಗಿ ಉಳಿಯದು. ಸಮ್ರಾಟ್‌ನ ಸತಿಯಾಗಲು ಇನ್ನೂ ಎಷ್ಟು ಆತಂಕಗಳೋ ! ಬ್ರಹ್ಮಚಾರಿಯಿಂದ ಭಾವ ಚಿತ್ರ ದೊರೆತರೇನಾಯಿತು ? ಮದುವೆಯಾಯಿತೆ ? ಪ್ರಿಯಕರನನ್ನು ಪಡೆದಂತಾಯಿತೆ ? ಇಬ್ಬರಲ್ಲೂ ಇನ್ನೂ ಎಷ್ಟು ಅಂತರ ! ಪೂರ್ವ–ಪಶ್ಚಿಮಗಳಷ್ಟು !— ಎಂದೇನೇನೋ ಯೋಚಿಸಿ ಒಂದು ಕ್ಷಣ ನಿರಾಶೆಯಲ್ಲಿ ಮುಳುಗಿ ಹೋಗುವಳು. ಬಿಸಿಯುಸಿರೊಂದು ಅವಳಿಗೆ ಗೊತ್ತಿಲ್ಲದೆ ಹವೆಯಲ್ಲಿ ಬೆರೆತು. ಹೋಗುವುದು. ವಿರಹ ವೇದನೆಯ ದಗ್ಧ ಹೃದಯ ತಿದಿಯಿಂದ ಹೊರ ಹೊಮ್ಮಿದ ಬಿಸಿಗಾಳಿಯದು ! ಅದರಿಂದ ಪ್ರಣಯ ಜ್ವಾಲೆಯು ಇನ್ನಿಷ್ಟು ಹೊತ್ತಿ ಉರಿಯುವುದು.

ಚಾತುರ್ಮಾಸದ ದಿನಗಳು ಮುಗಿಯುತ್ತ ಬಂದುವು. ಮಳೆಗಾಲ ಹಿಂದೆ ಸರಿಯಿತು ಚಳಿಯು ಮೈದೋರತೊಡಗಿತು. ಆಕಾಶನಿರಭ್ರವಾಗಹತ್ತಿತು. ಬೆಳುದಿಂಗಳು ಹಿಟ್ಟು ಚೆಲ್ಲಿದಂತೆ ಬಿದ್ದು, ವನಶ್ರೀಯನ್ನು ಇನ್ನಿಷ್ಟು ಹೆಚ್ಚಿಸಿತು. ವಿರಹಿಗಳ ತಾಪ ಹೆಚ್ಚಿತು. ವ್ರತೋಪವಾಸಗಳಲ್ಲಿ ದಿನಗಳೆದ ಜೈನ ಶ್ರಾವಕರೂ ಸಹ ತಮ್ಮ ತಮ್ಮ ಸತಿಯರ ಸಹವಾಸವನ್ನು ಬಯಸತೊಡಗಿದರು. ನೋಂಪಿಗಳನ್ನು ಮುಗಿಸಿ ಮಹಿಳೆಯರೂ ಮೆಲ್ಲನೆ ನಲ್ಲರ ಆಲಿಂಗನ ಸುಖದಲ್ಲಿ ತಲ್ಲೀನರಾದರು... ದೀವಳಿಗೆ ಕಳೆದು ಹೋಯಿತು. ಇನ್ನು ಇಲ್ಲಿ ತಮ್ಮ ಕರ್ತವ್ಯವೇನೆಂದು ಆ ನಿರ್ಗ್ರಂಥ ಮಹಾಮುನಿ ಸಂಘವು ಮುಂದಿನ ಪ್ರಯಾಣದ ಸಿದ್ಧತೆಗೆ ತೊಡಗಿತು. ಇನ್ನೆರಡು ದಿನಗಳಲ್ಲಿ 'ದ್ಯುತಿ ಪಲಾಶ'ವನವು ಮೊದಲಿನಂತೆ ಶಾಂತ, ಪ್ರಶಾಂತವಾಗಿ ಉಳಿಯುವಂತಾಗುವುದು.

ಸಂಘವು ಹೊರಡುವ ದಿನ—ಇಂದಿನಂತೆ ಅಂದೂ ಕೂಡ ವರ್ಷಾಯೋಗವನ್ನು ರಾಜಧಾನಿಯಲ್ಲಿ ಕಳೆದು ಮುನಿಸಂಘವು ಮುಂದಿನ ಊರಿಗೆ

ವೈಭವದಿಂದ ಸಾಗುವ ದಿನ — ರಾಜ, ಯುವರಾಜ ಮತ್ತು ರಾಣಿಯರೆಲ್ಲ ಸಂಭ್ರಮದಲ್ಲಿದ್ದಾರೆ. ನಗರಕ್ಕೆ ನಗರೇ ಉತ್ಸಾಹದಲ್ಲಿ ತೇಲುತ್ತಿದೆ..... ಎಲ್ಲ ಉಪನಗರಗಳಿಂದಲೂ ಶ್ರಾವಕರೆಲ್ಲ ಬಂದು ಸೇರಿದ್ದಾರೆ. ಸಂತಸದಲ್ಲಿದ್ದಾರೆ. ಆಚಾರ್ಯರ ಪಾದ ಪೂಜೆಯ ಸಿದ್ಧತೆಯಾಗಿದೆ. ಆದರೆ ಅಲ್ಲಿ ರಾಜಪುತ್ರಿಯೇ ಇಲ್ಲ.! ನಾಲ್ಕೂ ತಿಂಗಳು ಮುನಿಗಳ ಸೇವೆಯನ್ನು ನಿಷ್ಠೆಯಿಂದ ಮಾಡಿದ.... ರಾಜಕುವರಿ ಇಂದು ಈ ಹೊತ್ತಿನಲ್ಲಿ — ಅಲ್ಲಿ ಇಲ್ಲ.!

ಎಲ್ಲರ ಮುಖದಲ್ಲಿಯೂ ಬೆರಗು; ಕುತೂಹಲ... ಪ್ರಶ್ನಾರ್ಥಕ ದೃಷ್ಟಿಯಿಂದ ಒಬ್ಬರ ಮುಖವನ್ನೊಬ್ಬರು ನೋಡುವವರೇ...

"ಅಕ್ಕ ಆಗಲೇ ಮನೆಯಿಂದ ಬಂದಿದ್ದಾಳೆ...!"

ಚಿಕ್ಕ ರಾಜ ಕುಮಾರಿ ಮೆಲ್ಲನೆ ತಾಯಿಗೆ ಉಸುರುವಳು. ಆದರೂ ಮುನಿಸಂಘದ ಮೇಲೆಲ್ಲ ದೃಷ್ಟಿಯನ್ನು ಬೀರಿ, ಯಾರನ್ನೋ ಅರಸುವಳು. ಅಲ್ಲಿ ತನಗೆ ಬೇಕಾದ ಮುಖವು ಕಾಣದಾಗಲು ನಸುವೆ ಚಿಂತಿಸುವಳು.

"ಆಹುದು; ಬೆಳಗಿನಲ್ಲಿಯೇ ವನದ ಕಡೆಗೆ ಹೊರಡುವದಾಗಿ ಹೇಳಿ ಹೂವು ಹಣ್ಣುಗಳನ್ನು ತಕ್ಕೊಂಡು ಹೊರಬಿದ್ದಳಲ್ಲ...!"

ಮಹಾರಾಣಿಯ ಕಲ್ಪನೆಯಿದು.

ಸಮಯ ಸರಿಯುತ್ತಲಿತ್ತು. ರಾಜಕುವರಿಯ ಸುಳುವಿರಲಿಲ್ಲ !

೩

ಎಷ್ಟಾದರೂ ಚಿಕ್ಕವಳು ಚದುರೆ ! ಅಕ್ಕನ ಚಿತ್ತವನ್ನೂ ಚಟುವಟಿಕೆಯನ್ನೂ ಕಂಡು ಹಿಡಿಯಲಿಕ್ಕೆ ಅವಳಿಗೆ ಬಹಳ ದಿನ ಹಿಡಿಯಲಿಲ್ಲ. ಅಂದರೂ ದಿನಗಳೆದಂತೆ ಇದೊಂದು ತನ್ನಕ್ಕನ ಹುಚ್ಚು ಹಂಬಲವೆಂದು ಭಾವಿಸುವಂತಾಯಿತು. ಆದರೆ ತನ್ನ ಆಶೆಯೂ ಅದೇ ಎಂಬುದರ ಅರಿವು ಮಾತ್ರ ಅವಳಿಗಿರಲಿಲ್ಲ. ಅವಳಿಗೆ ಗೊತ್ತಿಲ್ಲದೆಯೇ ಅವಳ ಮನಸ್ಸು ಪ್ರಿಯಕರನತ್ತ ಧಾವಿಸುತ್ತಿದ್ದಿತು. ಅಕ್ಕನ ಪ್ರಯತ್ನದಿಂದ ತನಗೇನಾದರೂ ದಾರಿಯು ಹೊಳೆಯುವುದೋ ? - ಎಂದು ಆಲೋಚಿಸುತ್ತಿದ್ದಿತು. ತನ್ನದು ಮಾತ್ರ ಹುಚ್ಚು ಹಂಬಲವೆಂದು ತೋರಿರಲಿಲ್ಲ ಆಕೆಗೇನೋ ! ಸಂಸಾರವೇ

ಅಷ್ಟು ವಿಚಿತ್ರ. ಇನ್ನೊಬ್ಬರ ಹುಚ್ಚುತನ ನಮಗೆ ಬಹು ಬೇಗ ಕಂಡು ಬರುವುದು.... ನಮ್ಮನ್ನು ಜಗತ್ತೇ ಕಂಡು ನಗುತ್ತಿದ್ದರೂ ಅದರ ಕಲ್ಪನೆಯೂ ಸಹ ನಮಗಿರುವುದಿಲ್ಲ.

ನಮ್ಮ ತಂದೆ ಸಾಮ್ರಾಜ್ಯಶಾಹಿಯ ಕಡು ವೈರಿ. ಅಂದ ಮೇಲೆ ಸಮ್ರಾಟ್‌ನಿಗಂತೂ ಮಗಳನ್ನು ಕೊಡುವುದು ಸಾಧ್ಯವಿಲ್ಲ. ಇಷ್ಟೇ ಅಲ್ಲ, ಸಾಮ್ರಾಜ್ಯದ ಸೀಮೆಯಲ್ಲಿಯೂ ಸಹ ಮಕ್ಕಳನ್ನು ಮದುವೆ ಮಾಡಿಕೊಡಲಿಕ್ಕಿಲ್ಲ. ಅಂದ ಮೇಲೆ ನಾವು ವಿಶಾಲ ರಾಜ್ಯದ ಸಾಮ್ರಾಜ್ಞಿಯರಾಗುವುದು ಹೇಗೆ ಸಾಧ್ಯವಿದೆ ? ಸಮ್ರಾಟ್‌ನನ್ನು ವರಿಸುವದಂತೂ ಕನಸಿನಲ್ಲಿಯ ಕುಸುಮವೇ !

ಅಂದರೂ ವರ್ಷಾಯೋಗದ ತರುವಾಯ ಚೈತನ್ಯದ ಚಲುಮೆಯು ಚಿಮ್ಮ ತೊಡಗಿತು. ಚಿಕ್ಕವಳಲ್ಲಿ ಅಲ್ಲ; ಹಿರಿಯಕ್ಕನಲ್ಲಿ ಮಾತ್ರ. ಅವಳು ಇರುಳು ಬೆಳದಿಂಗಳಲ್ಲಿ ಹೂದೋಟದಲ್ಲಿ ವಿಹರಿಸಲು ಹೋಗ ತೊಡಗಿದಳು. ಹೊತ್ತಿಲ್ಲದ ಹೊತ್ತಿನಾಗ ಹೂಗಳನ್ನು ಮುಡಿಯುವಳು. ಮಾಲೆಗಳನ್ನು ಕಟ್ಟುವಳು. ಸುಗಂಧ ದ್ರವ್ಯ ಬಳಸುವಳು. ತೋಟದ ಜಿನಮಂದಿರಕ್ಕೆ ಹೋಗುವಳು, ರಮಣನ ಶಯ್ಯಾಗೃಹಕ್ಕೆ ಹೋಗುವ ರಮಣಿಯಂತೆ ! ಅವಳ ಬಾಳಿನಲ್ಲಿ ಒಂದು ಬೆಳಕು ಮೂಡಿದ್ದಿತು. ಉತ್ಸಾಹ ಉಕ್ಕಿ ಉಕ್ಕಿ ಬರುತ್ತಿದ್ದಿತು. ಆನಂದ ಸಾಗರ ಮೇರೆ ಮೀರಿತ್ತು.

ಇದರ ಮುಖವನ್ನು ಹುಡುಕುವ ಹುಮ್ಮಸ್ಸು ಆ ನಮ್ಮ ತಂಗಿಗೆ ! ಅದಕ್ಕಾಗಿ ಹಗಲಿರುಳೂ ಅವಳ ಮನಸ್ಸಿಗೆ ಶಾಂತಿಯಿಲ್ಲ, ಸಮಾಧಾನವಿಲ್ಲ. ನಗೆಯಿಲ್ಲ. ಆನಂದವಿಲ್ಲ.

ಒಬ್ಬರಿಗೆ ಬೆಲ್ಲ; ಇನ್ನೊಬ್ಬರಿಗೆ ಬೇವು. ಬಾಳಿನಲ್ಲಿಯ ಸುಖವೇ ಅಂತಹದು.

ಒಂದು ದಿನ ಇಳಿಹೊತ್ತು... ತಂದೆಯವರು ಯಾವುದೋ ರಾಜ ಕಾರಣದ ಕೆಲಸಕ್ಕಾಗಿ ಕುಂಡಗ್ರಾಮದ ಕಡೆಗೆ ತೆರಳಿದ್ದರು. ತಾಯಿ ಸ್ವಾಧ್ಯಾಯಕ್ಕೆಂದು ಅರಮನೆಯೊಳಗಿನ ಜಿನ ಮಂದಿರವನ್ನು ಸೇರಿದ್ದಳು. ನಾನು ಹಾಸಿಗೆಯಲ್ಲಿ ಸುಮ್ಮನೆ ಅಡ್ಡಾಗಿದ್ದೆ. ಏನಾದರೂ ಮನಸ್ಸಿಗೆ ನೆಮ್ಮದಿ ಇರಲಿಲ್ಲ. ನಿನ್ನೆಯೇ ಆ ಅಮೃತ ಘಳಿಗೆ ಮಿಂಚಿನಂತೆ ಬಂದು ಮಾಯ-

ವಾಗಿದ್ದಿತು. ಆ ಕ್ಷಣವನ್ನೆ ನೆನೆಯುತ್ತ ಇನ್ನೂ ಆರು ದಿನಗಳನ್ನು ಕಳೆಯು ಬೇಕಲ್ಲ ! ಎಂಥ ಬೇಸರದ ಸಂಗತಿಯಿದು. ಹೊತ್ತು ಹೋಗುವದೆಂತು? ಏನು ಮಾಡಿದರೂ ಜೀವಕ್ಕೆ ಶಾಂತಿಯಿಲ್ಲ. ಬದಿಗೆ ನೋಡಿದೆ. ಮಂಚದ ಮೇಲೆ ತಂಗಿಯು ನಿಶ್ಚಿಂತೆಯಿಂದ ಮಲಗಿದಂತೆ ಕಂಡಿತು ಮೆಲ್ಲಗೆ ಸಪ್ಪಳ ಮಾಡದೆ ಎದ್ದೆ. ಕಪಾಟದ ಬೀಗ ತೆಗೆದೆ ನನ್ನ ಪ್ರೀತಿಯ ವಸ್ತುವನ್ನು ತಕ್ಕೊಂಡು ಹೊರಬಿದ್ದೆ. ತಂಗಿಯು ಎಚ್ಚರಾಗುವಳೇನೋ ಎಂದು ಕೊಳ್ಳುತ್ತ ಹಿಂದೆ ಮುಂದೆ ನೋಡುತ್ತ ತೋಟವತ್ತ ಸಾಗಿದೆ... ?

ನಡುವೆಯೇ ಏನನ್ನೋ ಕೇಳಬೇಕೆಂದು ಅಜಾತಶತ್ರುವಿನ ಮನಸ್ಸಿಗೆ ತೋರಿತು. ಸುತ್ತಲೂ ನೋಡಿದ. ತುಸು ಸದ್ದು ಮಾಡಿದ. ಗಂಟಲು ಸರಿಪಡಿಸಿಕೊಂಡ. ಆದರೆ ಯಾರೂ ಮಿಸುಕಾಡಲಿಲ್ಲ. ಎಲ್ಲರೂ ಕಥೆ ಕೇಳುವವರಲ್ಲಿ ತನ್ಮಯರಾಗಿದ್ದಾರೆ. ಕಥನ ಪ್ರವಾಹದಲ್ಲಿ ನೈಮರೆತು ತೇಲುತ್ತ ಆರ್ಯೆ ಸಾಗಿದ್ದಾಳೆ .... ಸಾಗಲಿ ! — ಎಂದುಕೊಂಡು ಸುಮ್ಮನಾದ. ಕಥೆ ಮುಂದೆ ನಡೆಯಿತು.

" ತೋಟದೊಳಗಿನ ಮಲ್ಲಿಗೆಯ ಮಂಟಪ. ಅದರಲ್ಲಿ ಒಂದು ಸಿಂಹಾಸನವನ್ನು ಏರ್ಪಡಿಸಿದೆ. ಅದರ ಮೇಲೆ ಹೂವುಗಳನ್ನು ಹರವಿದೆ. ಅದರಲ್ಲಿ ಪ್ರಿಯಕರನನ್ನು ಪವಡಿಸಿದೆ. ಹತ್ತರ ನಾನೂ ಕ್ಷಣ ಹೊತ್ತು ಮಲಗಿದೆ. ನಲ್ಲನ ಮುಖವನ್ನು ನಿಟ್ಟಿಸಿದೆ. ಅದೂ ನನ್ನ ಕಡೆಗೇ ನೋಡುವಂತೆ ಭಾಸವಾಯಿತು. ಮುಗಳುನಗೆ ಬೀರಿತು. ಅಧರಗಳು ಅದುರಿದುವು. ಏನನ್ನೋ ಬಯಸುವಂತೆ ತೋರಿತು. ಒತ್ತಿ ಚುಂಬಿಸಿದೆ. ಅದದಲ್ಲೇನಿದೆ ತೈಲಚಿತ್ರ ! ಆದರೂ ಈ ಕಳ್ಳ ಪ್ರಣಯವನ್ನು ಯಾರಾದರೂ ಕಂಡರೋ ! – ಎಂದು ಗಾಬರಿಯಾದೆ. ತಟ್ಟನೆ ಎದ್ದು ಕುಳಿತೆ.... ಸುತ್ತಲೂ ದೃಷ್ಟಿ ಬೀರಿದೆ. ಮೆಲ್ಲನೆ ಯಾರೋ ಕಳ್ಳ ಹೆಜ್ಜೆಯಿಂದ ಹತ್ತಿರ ಹತ್ತಿರ ಬರುವಂತೆ ತೋರಿತು. ಕೂಡಲೆ ಆ ಚಿತ್ರವನ್ನು ಎಲ್ಲಿಯಾದರೂ ಮುಚ್ಚಿಡಲು ಹವಣಿಸಿದೆ, ಯತ್ನಿಸಿದೆ, ಅನುವು ದೊರೆಯಲಿಲ್ಲ. ಎದುರಿಗೆ ತಂಗಿ !

" ಇದಾರದೇ ಚಿತ್ರ .... ? "

ಕಣ್ಣು ಸನ್ನೆಯಿಂದಲೇ ಕೇಳಿ, ಅದನ್ನು ನನ್ನ ಕೈಯಿಂದ ಕಸಿದುಕೊಂಡಳು. ಅವಳ ಆ ಕಣ್ಣುಗಳಲ್ಲಿ ಕಾರುಣ್ಯ ತುಂಬಿ ತುಳುಕುತ್ತಿದ್ದಿತು.... ಕುತೂಹಲ ಕೆರಳಿದಂತಿತ್ತು ....

ತಂಗಿಯ ಎದುರಿಗೂ ತಲೆ ತಗ್ಗಿಸಿ ನಿಂತೆ. ಮುಖ ಬಿಳುಪ್ರೊಡೆಯಿತು. ನಾಚಿಕೆ ಸಾವಾಯಿತು ತಾಯಿ !

ನನ್ನ ಮುಖ ಕಳೆಗುಂದಿದಷ್ಟೂ ಅವಳ ಮುಖ ಅರಳಿತು ! ಬಹುದಿನಗಳಿಂದ ಬಯಸುತ್ತಿದ್ದ ಬಯಕೆ ಕೈಗೂಡಿದಷ್ಟು ಸಂತಸಗೊಂಡಳು. ಆ ಭಾವ ಚಿತ್ರವನ್ನೇ ನಿಟ್ಟಿಸತೊಡಗಿದಳು. ಹಾಗೇಯೇ ಅದರಲ್ಲಿ ತನ್ಮಯಳಾಗಿ ಬಿಟ್ಟಳು ! ಪ್ರಿಯಕರನ ಹೆಸರು, ಗುಣ, ಶೀಲ, ವೈಭವಗಳನ್ನೆಲ್ಲ ಈ ಮೊದಲೇ ಕೇಳಿ ತಿಳಿದು ಕೊಂಡಿದ್ದಳು.... ಈಗ ಈ ರೂಪರಾಶಿಯನ್ನು ಕಂಡು ಮುಗ್ಧಳಾಗಿ ಬಿಟ್ಟಳು ! ನನ್ನಂತೆ ಪ್ರತ್ಯಕ್ಷ ಕಂಡಿದ್ದರೆ ಏನು ಮಾಡುತ್ತಿದ್ದಳೊ ! ಹಾಗೇ ಬೆನ್ನು ಹತ್ತಿ ಹೋಗಿ ಬಿಡುತ್ತಿದ್ದಳೋ ? ಯಾರಿಗೆ ಗೊತ್ತು ?

ತುಸು ಹೊತ್ತಿನಲ್ಲಿ ಆ ಭಾವಸಮಾಧಿ ಇಳಿಯುತ್ತ ಬಂದಿತು. ಮೆಲ್ಲನೆ ಹೊರ ಜಗತ್ತಿನ ಕಡೆಗೆ ದೃಷ್ಟಿ ಹೊರಳಿಸಿದಳು. ನನ್ನಲ್ಲಿಯೂ ಸ್ವಲ್ಪ ಧೈರ್ಯ ಕುದುರ ತೊಡಗಿತ್ತು,

"ಇದೆಲ್ಲಿ ಸಿಕ್ಕಿತೇ ಅಕ್ಕ ?" ಎಂದು ಕೇಳಿದಳಾಕೆ.

"ಹೀಗೆ ! ಎಲ್ಲಿಂದಾದರೂ.!"

"ಇಷ್ಟು ದಿನ ನನಗೆ ಹೇಳಿಲ್ಲವಲ್ಲ...."

ವಂಚಕಳಂತೆ ಸುಮ್ಮನಾಗಿಬಿಟ್ಟೆ. ಅವಳ ಪ್ರಣಯದ ಸಂಗತಿಯೂ ನನಗೆ ಅದಾವಾಗಲೇ ಗೊತ್ತಾಗಿ ಬಿಟ್ಟಿತ್ತು ! ಆದರೆ ಪ್ರತಿಯೊಬ್ಬರಿಗೂ ಸ್ವಾರ್ಥ ಒಂದು ಇದ್ದೇ ಇದೆಯಲ್ಲ ! ಸ್ತ್ರೀಯು ಎಲ್ಲದರಲ್ಲೂ ಪಾಲುಕೊಡಲು ಸಿದ್ಧಳಾಗಬಹುದು. ತನ್ನ ಪ್ರೀತಿಯ ಪಾತ್ರನಲ್ಲಿ ಪಾಲು ಕೊಡಲು ಬಯಸುವದಿಲ್ಲವಷ್ಟೆ ? ಅದರಿಂದ ನನ್ನ ತಂಗಿಗಿಂತ ನಾನೆಷ್ಟು ಪ್ರಣಯ ಪ್ರಯಾಣದಲ್ಲಿ ಮುಂದೆ ಸಾಗಿರುವೆನೆಂಬುದರ ಕಲ್ಪನೆಯು ಮನವಲ್ಲಿ ಬಂದು ಗೆಲುವಿನ ನಗೆಯೊಂದನ್ನು ಬೀರಿದೆ. ಇನ್ನೂ ಪ್ರಪಂಚದ ಅನುಭವವಿಲ್ಲದ ಆ ಹುಡುಗಿಗೆ ಇದೆಲ್ಲದರ ಅರಿವು ಹೇಗಾಗಬೇಕು.? ಅಕ್ಕನ ಗುಟ್ಟೆಲ್ಲ ಗೊತ್ತಾಯಿತೆಂದೇ ಭಾವಿಸಿದಳು ...

"ಎಷ್ಟೊಂದು ಚಲುವಿಕೆಯೋ ಅಕ್ಕ...!"

ನಿಃಸಂಕೋಚ ಸ್ವರದಲ್ಲಿ ನುಡಿಯತೊಡಗಿದಳು. ಒಬ್ಬರ ಹೃದಯ ಒಬ್ಬರಿಗೆ ಗೊತ್ತಾದ ಮೇಲೆ ಅದರಲ್ಲಿ ಮುಚ್ಚು ಮರೆಗಳಿಗೆ ಎಡೆಯಲ್ಲಿ? ಎಂಬ ಭಾವನೆ ಅವಳಿಗೆ! ಅದರಲ್ಲೂ ಸಲಿಗೆಯಿಂದ ಕೂಡಿ ಬೆಳೆದ ಅಕ್ಕ ತಂಗಿಯಂದಿರು ನಾವು! ಈ ಪ್ರಣಯ ನಮ್ಮ ನಮ್ಮನ್ನೆಷ್ಟು ದೂರ ಮಾಡಿ ಇಡುತ್ತಿದೆಯಲ್ಲ, ಎಂದು ಒಂದು ಕ್ಷಣ ಮರುಗಿದೆ. ಮರುಕ್ಷಣದಲ್ಲಿ ಮನದಲ್ಲಿ ಏನು ಭಾವನೆಯು ಬಂದಿತೋ ಏನೋ.!

"ಅದು ಚಿತ್ರ ಬರೆಯುವವನ ಜಾಣ್ಮೆ...." ಎಂದೆ,

"ಅದು ಹೇಗೇ ಹುಚ್ಚಿ! ಮೂಲದಲ್ಲಿ ಆ ಸೌಂದರ್ಯವಿರದಿದ್ದರೆ ಈ ಚಿತ್ರದಲ್ಲಿ ಎಲ್ಲಿಂದ ಮೂಡೀತು?"

"ಏನೋ ತಾಯಿ! ನಿನ್ನ ಕಲ್ಪನೆಯೇ ವಿಚಿತ್ರ ..!"

"ಇಲ್ಲ ನೋಡು! ಈ ಕಣ್ಣುಗಳಲ್ಲಿ ಎಂಥ ಕಾಂತಿ! ಮೂಗಿನ ಮಾಟವೆಷ್ಟು ಮನೋಹರ! ತುಟಿಗಳೋ........ಮೆಲು ನಗೆಯಿಂದ ಮೋಹ ರಸವನ್ನು ಉಕ್ಕಿಸುವಂತಿವೆ........ಕುಡಿ ಮೀಸೆ...." ಮುಂದೆ ಅವಳಿಗೆ ಮಾತನಾಡಗೊಡದೆ ಅವಳ ಬಾಯಿ ಮುಚ್ಚಿದೆ. ತನ್ನ ಪ್ರಿಯಕರನ ಚೆಲುವಿಕೆಯನ್ನು ಇನ್ನೊಬ್ಬರು ಹೊಗಳಿದರೆ ಸ್ತ್ರೀಯರಿಗೆ ಕೇಳಲು ಬಹಳ ಹೆಮ್ಮೆಯಂತೆ. ಆದರೆ ನನಗೆ ಹಾಗೆನಿಸಲಿಲ್ಲ. ಇನ್ನಿಷ್ಟು ಭೀತಿಯೇ ಉತ್ಪನ್ನವಾಗತೊಡಗಿತು. ತಂಗಿಯ ಪ್ರಣಯವನ್ನು ಇನ್ನು ಮುಂದೆ ಬೆಳೆಯಗೊಡುವುದು ಉಚಿತವೆಂದು ಕಾಣಲಿಲ್ಲ.

"ಎಷ್ಟಾದರೂ ಪರಪುರುಷನಲ್ಲವೇನೇ...!" ಎಂದೆ. "ಯಾರಿಗೆ...?"

ನಮ್ಮಿಬ್ಬರಿಗೂ ಎಂದು ಹೇಳಲಾಗಲಿಲ್ಲ ನನ್ನಿಂದ. ಮಾತಿನ ಹೊಲಬನ್ನು ಬದಲಿಸಿ,

"ನಮ್ಮ ರಾಜ್ಯದ ಕಡುವಿರೋಧಿ ಬೇರೆ! ಹೋಗಲಿ, ಒಂದೇ ಧರ್ಮದವರೆನ್ನಬಹುದೇ? ಅದೂ ಇಲ್ಲ. ಮೇಲಾಗಿ ಅಪ್ಪ ಈ ವಿವಾಹಕ್ಕೆ ಒಪ್ಪರು.... ಎಲ್ಲಿಂದಲೋ ಹುಚ್ಚು ಸೇರಿದೆಯಾಯಿತು.... ಆ ಬ್ರಹ್ಮಚಾರಿ ಬಂದು.."

"ಈ ಭಾವಚಿತ್ರ ಕೊಟ್ಟನೆ?"

ಅಂತರಂಗವನ್ನು ಪ್ರಕಟಿಸುವಂತೆ ತಂಗಿಯು ನಡುವೆಯೇ ಮಾತನಾಡಿದಳು. ದನಿಯಲ್ಲಿ ನಸು ಕೊಂಕು ಇತ್ತು....

"ಮತ್ತೆ ಅದನ್ನೇ. ಅದನ್ನೇ ಹೇಳುವಿಯಲ್ಲ."

ಕಠೋರವಾಗಿ ನುಡಿದೆ.

" ನಾನು. ಹೇಳುವೆ; ನೀನು ಮಾಡುವೆ ..."

ಎಂದು ಹೇಳಿ, ಅಲ್ಲಿ ನಿಲ್ಲದೆ ಅವಳು ಹೋಗಿ ಬಿಟ್ಟಳು ! ನನ್ನ ಹೃದದಲ್ಲಿ ಇನ್ನೂ ಹೆದರಿಕೆ ಹೆಚ್ಚಿತು. ನನ್ನ ನಲ್ಲ ಇಲ್ಲಿ ಬರುವುದು. ನಾನೂ ಅವನೂ ಕೂಡಿ ಏಕಾಂತದಲ್ಲಿ ಕಾಲ ಕಳೆಯುತ್ತಿದ್ದುದು. ಪ್ರಣಯದ ಬೇಟ ಮಾಟಗಳೆಲ್ಲ ಇವಳಿಗೆ ಗೊತ್ತಾಗಿರುವುವೋ ! ಎಂಬ ಸಂಶಯ ಮನಸ್ಸನ್ನು ಬಾಧಿಸಹತ್ತಿತು. ನನ್ನ ಮೇಲೆ ಕಳ್ಳ ತನದಿಂದ ಕಾವಲಿರುವಳೋ ! ಎಂದಿನಿಂದ ಹೀಗೆ ಸಾಗಿದೆಯೋ ! ಇಂದೂ ಹಾಗೆಯೇ ನನ್ನ ಬೆನ್ನು ಹತ್ತಿ ಬಂದಿರಬೇಕೇ.... ಇದೆಲ್ಲದರ ಕೊನೆ ಎಂತೋ..!ಒಂದಲ್ಲ ಸಾವಿರ ವಿಚಾರಗಳು ತಲೆಯಲ್ಲಿ ಸುಂಟರ ಗಾಳಿಯಂತೆ ಸುತ್ತಹತ್ತಿದುವು. ನೂರಾರು ಚೇಳುಗಳು ಕಡಿದಷ್ಟು ನೋವಾಗತೊಡಗಿತು.. ಮನಸ್ಸಿಗೆ ಇನ್ನೆಲ್ಲಿ ಶಾಂತಿ.? ಇದೆಲ್ಲ ಮನೆಯಲ್ಲಿ ತಿಳಿದಿದ್ದರೆ... ಅದೆಂಥ ದುರ್ಘಟನೆ ಒದಗೀತು?

ಪಡುವಣ ದಿಸೆಯಲ್ಲಿ ನೇಸರ ಮೆಲ್ಲನೆ ತನ್ನ ತಾಯಿ ಮಡಿಲಲ್ಲಿ ಸೇರುತಲಿದ್ದ. ಆಗಸವೆಲ್ಲ ಕುಂಕುಮ ರಾಗ ರಂಜಿತವಾಗಿತ್ತು. ಪ್ರಣಯ ಕಲಹ ಕಲ್ಲೋಲ ಕಮಲಾಕರವದು. ಅದರ ತಟದಲ್ಲಿ ನಿಂತು ನೋಡುವವರಿಗೆ ಅದು ಬಹು ಸುಂದರ, ಆನಂದದಾಯಕ. ಅದರಲ್ಲಿ ಸಿಕ್ಕು ಮುಳುಗಿ ಏಳುತ್ತ ಬಾಯಿ ಮೂಗುಗಳಿಂದ ನೀರು ಕಾರುತ್ತ, ಉಸುರುಗಟ್ಟಿ ಸಾಯುತ್ತಿರುವವರಿಗೆ ಭಯಂಕರ. ಕಾಲಿಗೆ ತಾಕಿದ ಕಮಲದ ದೇಟುಗಳೂ ಸಹ ಸುತ್ತಿದ ಹಾವುಗಳು. ತೀರವೊಂದು ತೀರದ ಆಶೆ. ಒಂದು ಕ್ಷಣ ಆಶೆ ಮರುಕ್ಷಣ ನಿರಾಶೆ... ಈ ತರಂಗಗಳಲ್ಲಿಯೇ ಮುಳುಗೇಳುತಲಿದ್ದೆ.

ಸುತ್ತಲೂ ಸಂಜೆಗತ್ತಲು ಸಾವಕಾಶವಾಗಿ ಸರಿಯುತ್ತ ಬಂದು ನನ್ನನ್ನು ಆವರಿಸತೊಡಗಿತು.

ಗಣ ಸತ್ತೆಗೂ ಸಾಮ್ರಾಜ್ಯ ಸತ್ತೆಗೂ ರಣಕಹಳೆಯನ್ನೂದುವ ನನ್ನ ಮುಖವು ಕತ್ತಲೆಯಲ್ಲಿ ಮುಚ್ಚಿ ಹೋಗುವುದೇ ವಿಚಿತ್ರವೆನಿಸಿತು.

೭

ಅವು ಚಳಿಗಾಲದ ಕೊನೆ ಕೊನೆಯ ದಿನಗಳು. ಬೆಳಗಿನಲ್ಲಿ ಚಳಿ ಹೆಚ್ಚಿದಷ್ಟು ಮಧ್ಯಾಹ್ನ ಬಿಸಿಲೂ ಹೆಚ್ಚುತ್ತಿದ್ದು. ಅದರಿಂದ ಎಂಥವರಿಗೂ ಬಿಸಿಲು ಹೊತ್ತಿನಲ್ಲಿ ಆಲಸ್ಯ, ನಿದ್ರೆ ಬರುವುದು. ಆದರೂ ಆ ದಿನ ನಾನು ಮುಂಜಾನೆಯ ಊಟ ತೀರಿದೊಡನೆ ಮಂಚದ ಮೇಲೆ ಉರುಳಲಿಲ್ಲ. ಕಪಾಟಿನ ಬಾಗಿಲ ತೆರೆದು ಅಗದುಗಳನ್ನೆಲ್ಲ ವ್ಯವಸ್ಥಿತಗೊಳಿಸಿದೆ. ಅಲ್ಲಿಂದೀ ಮುನಿಗಳಿಗೆ ಕೊಡಲಿಕ್ಕೆಂದು ತರಿಸಿಟ್ಟ ಪಿಂಛವನ್ನು ಸರಿಸಿಟ್ಟೆ. ದಶಾಂಗ ಧೂಪದ ಪಾತ್ರೆಯನ್ನು ತೆರೆದು ಇನ್ನೂ ಕೆಲವು ದಿನ ಸಾಲುವಷ್ಟು ಇದೆಯೋ ಇಲ್ಲವೋ ನೋಡಿದೆ. ಅದೇಕೋ ಗೂಟದಿಂದ ಜಾರಿ ನೆಲಕ್ಕೆ ಬಿದ್ದ ಜಪಮಾಲೆಯನ್ನು ಎತ್ತಿ ಮೇಲಿಟ್ಟೆ. ರೇಶಿಮೆಯ ವಸ್ತ್ರಗಳನ್ನೆಲ್ಲ ಬಾಡಿಸಿ ಬಿಸಿಲಿಗೆ ಹಾಕಿ ತಿರುಗಿ ಶಾಸ್ತ್ರದ ಕಟ್ಟುಗಳಿಗೆ ಸುತ್ತಿ ಇಟ್ಟೆ. ಪೀಠದ ಮೇಲಿರುವ ಶಾಸ್ತ್ರದ ಎಲೆಗಳನ್ನು ತಿರುವಿಹಾಕಿದೆ. ಏನಾದರೂ ಸಮಯ ಸರಿಯದು. ಮೈಯಲ್ಲಿ ಅನ್ನದ ಮಬ್ಬು ಆವರಿಸಿತು. ಮೈಮುರಿದೆ, ಬೆರಳು ಮುರಿದುಕೊಂಡೆ. ಆಕಳಿಸಿದೆ. ಆದರೂ ಮಂಚದ ಮೇಲೆ ಅಡ್ಡಾಗಲಿಲ್ಲ. ಅದೇಕೆ ದಿಂಬಿಗೂ ಒರಗಿ ಕೂಡಲಿಲ್ಲ.

ಒಂದೇ ಕೋಣೆಯಲ್ಲಿರುವ ನಮ್ಮಲ್ಲಿ ಒಬ್ಬರು ಚಟುವಟಿಕೆಯಲ್ಲಿ ಹೀಗೆ ತೊಡಗಿದಾಗ ಇನ್ನೊಬ್ಬರು ಮಲಗಿಕೊಳ್ಳುವುದು ಹೇಗೆ? ಎಂದು ಕೊಂಡು ನನ್ನ ತಂಗಿಯೂ ಎದುರಿಗೆ ಮಂಚದ ಮೇಲೆ ಅರಿವೆಯನ್ನು ಬಿಡಿಸಿ, ಜಗತ್ತಿನ ನಕ್ಷೆಯನ್ನು ಬರೆಯತೊಡಗಿದಳು. ತನ್ನ ಕೆಲಸ ಅರ್ಧಕ್ಕೆ ಉಳಿದು ಹಾಗೇ ನಿಂತುಕೊಂಡಿತ್ತು ಈಗ ಮುಂದರಿಸಿ ಮುಗಿಸಿ ಬಿಡುವ ಹಂಬಲ ಅವಳಲ್ಲಿ. ಮೇರುಗಿರಿ, ವಿಜಯಾರ್ಧ ಪರ್ವತ, ಭರತ್, ಐರಾವತ ಕ್ಷೇತ್ರಗಳ ನಕ್ಷೆಗಳನ್ನು ಬಿಡಿಸುತ್ತ ಬಿಡಿಸುತ್ತ ಅದರಲ್ಲಿಯೇ ತನ್ಮಯಳಾಗಿ ಹೋದಳು.

ಇಬ್ಬರೂ ಮಾತು ಕತೆಗಳಿಲ್ಲದೆ ನಮ್ಮ ನಮ್ಮ ಕೆಲಸಗಳಲ್ಲಿ ಮಗ್ನರಾದಂತೆ ಇದ್ದೆವು. ಅವಳೇನೋ ತನ್ನ ಕೆಲಸದಲ್ಲಿ ಪೂರ್ಣ ನಿಮಗ್ನಳಾಗಿದ್ದಳು. ನನ್ನ ಮನಸ್ಸು ಮಾತ್ರ ಎಲ್ಲೆಲ್ಲಿಯೋ ಸುತ್ತಾಡುತಿದ್ದಿತು. ಇಂದಿನ ಇರುಳು ಪ್ರಿಯಕರ ಹೇಗೆ ಬರಬಹುದು ? ಬಂದು ಏನೆಂದು ಮಾತಾಡಿಸಬಹುದು. ನಸು ಮುನಿಸು ಹೇಗೆ ತೋರಿಸಬೇಕು.? ಎಂಥ ರವಕೆ ತೊಟ್ಟುಕೊಳ್ಳಲಿ? ಅದಾವ ಸೀರೆ ಉಟ್ಟುಕೊಳ್ಳಲಿ? — ಎಂದೇನೇನೋ ಧ್ಯಾನಿಸುತಲಿದ್ದೆ

ಅಷ್ಟರಲ್ಲಿ ಬಸ್ತಿಯೊಳಗಿನ ಸೂಚನೆಯ ಜಾಗಟೆ ಬಾರಿಸಿತು. ಹೊತ್ತ ಕಳೆಯದಾಗಿತ್ತು ಸ್ವಾಧ್ಯಾಯದ ಕರೆ ಕೇಳಿಸಿದಂತಾಯಿತು. ಇಂದು ಮಧ್ಯಾಹ್ನದ ಶಾಸ್ತ್ರವಾಚನಕ್ಕೆ ತಂಗಿಯನ್ನು ಕರೆದುಕೊಂಡು ಹೋಗಿ ಬಿಟ್ಟರಾಯಿತೆಂದುಕೊಂಡೆ. ಮಧ್ಯಾಹ್ನದ ನನ್ನ ನಿದ್ರೆ ತಪ್ಪಲಿ ಬಿಡಲಿ, ತಂಗಿಯ ನಿದ್ರೆಯನ್ನು ತಪ್ಪಿಸಬೇಕಾಗಿತ್ತನಗೆ. ಅದಕ್ಕಾಗಿ ಅವಳನ್ನು ಕಾಡಿ ಬೇಡಿ ಆ ಕೆಲಸದಿಂದ ಮಾತ್ರಬಿಡಿಸಿ ಜಿನ ಮಂದಿರದ ಕಡೆಗೆ ಎಳೆದುಕೊಂಡೇ ಹೋದೆ.

ಸಾಯಂಕಾಲದಲ್ಲಿ ಹೊತ್ತುಂಟಲೆ ಊಟವನ್ನು ತೀರಿಸಿ, ವನದ ಕಡೆಗೆ ಕೂಡಿಯೇ ಅಡ್ಡಾಡಲಿಕ್ಕೆ ಹೋದೆವು. ಇಬ್ಬರೂ ನಮ್ಮ ನಮ್ಮ ವಿಚಾರದಲ್ಲಿಯೇ ಮಗ್ನರಾದಂತಿದ್ದೆವು. ಇತ್ತಿತ್ತಲಾಗಿ ನಮ್ಮಿಬ್ಬರಲ್ಲಿ ಸಲಿಗೆಯ ಸಲ್ಲಾಪ ಕಡಿಮೆಯೇ ಆಗಿತ್ತು ಒತ್ತಟ್ಟಗೇ ಹಗಲಿರುಳೂ ಇರುತ್ತಿದ್ದರೂ ಮನಸ್ಸುಗಳು ಮಾತ್ರ ಮುಮ್ಮಾರು ದೂರವೇ ಸರಿದಿದ್ದುವು !

ಇರುಳು ದೇವದರ್ಶನ ಮಾಡಿಕೊಂಡು ಬಂದು, ಬೇಗನೇ ಮಲಗಿಕೊಂಡೆವು. ಕೂಡಲೆ ಅವಳಿಗೆ ನಿದ್ರೆ ಬಂದಿತು. ನನಗೆ ಮಾತ್ರ ಕಣ್ಣಿಗೆ ಕಣ್ಣೇ ಹತ್ತದು. ಮಲಗುವ ವಿಚಾರವೂ ನನಗಿರಲಿಲ್ಲ. ಸುಮ್ಮನೆ ಮಂಚದ ಮೇಲೆ ಉರುಳಿ ನಿದ್ರೆಯ ಸೋಗು ಹಾಕಿದೆ. ಸ್ವಲ್ಪ ಹೊತ್ತಿನಲ್ಲಿ ಮನೆಯಲ್ಲ ಶಾಂತವಾಯಿತು. ಮೆಲ್ಲನೆ ಎದ್ದೆ ಕಿರುಬಾಗಿಲಿನಿಂದ ಹೊರಬಿದ್ದೆ ಹೂದೋಟದೆಡೆಗೆ ಸಾಗಿದೆ.

ಅಂದು ಹುಣ್ಣಿಮೆಯ ರಾತ್ರಿ. ಹಾಲು ಹೊಳೆಯಂತೆ ಬೆಳದಿಂಗಳು ಎಲ್ಲೆಡೆಗೂ ಹರಡಿದ್ದಿತು. ಆದು ಪ್ರಿಯಕರನ ಸಮಾಗಮದ ಸಂದರ್ಭ ಹಿಂದೆಂದೂ ಇಂಥ ಸುಂದರ ರಾತ್ರಿಯಲ್ಲಿ ನಾವು ಭೆಟ್ಟಿಯಾಗಿರಲಿಲ್ಲ. ಅದರಿಂದ ತಕ್ಕ ಸಿದ್ಧತೆಯನ್ನೇ ಮಾಡಿಕೊಂಡಿದ್ದೆ. ಅವರಿಗೆ ಎಂಥ ಸೀರೆ ಸೇರಬಹುದು? ಯಾವ ಹೂವನ್ನು ಮುಡಿಯಬೇಕು.? ಅವರಿಗೆ ಯಾವ ಹೂವಿನ ಮಾಲೆಯನ್ನು ಕಟ್ಟಬೇಕು.? — ಎಲ್ಲ ನಿಯೋಜಿಸಿ ಇಟ್ಟಿದ್ದೆ. ಪೂರ್ವಸಿದ್ಧತೆ ಮಾಡಿಕೊಂಡಿದ್ದೆ.

ಆಗ ನನ್ನ ಎದೆ ಡವಡವ ಬಡಿದು ಕೊಳ್ಳುತ್ತಿದ್ದಿತು. ಇನ್ನೂ ವನದಲ್ಲಿ ಅವರು ಬಂದಿರುವರೋ ಇಲ್ಲವೋ ? ಒಂದು ವೇಳೆ ಬಂದು ದಾರೀ ಕಾಯುತ್ತ ಕುಳಿತಿದ್ದರೆ ಏನೆಂದುಕೊಂಡಾರು ? ಈ ನಮ್ಮ ಕಳ್ಳಕೂಟವನ್ನು

ಯಾರಾದರೂ ಕಂಡರೆ ನಮ್ಮ ಗತಿ ? ಇಂಥ ರಾಜಧಾನಿಯಲ್ಲಿಯೂ ಪ್ರವೇಶಿಸಲು ಕಳ್ಳ ದಾರಿಯನ್ನು ಕಲ್ಪಿಸಿದರಲ್ಲ ! ಏನು ಸಾಮ್ರಾಜ್ಯ ಶಾಹಿಯ ಯೋಜನೆಯಿದು ! ಮುನಿ ಸಂಘದಲ್ಲಿ ಬ್ರಹ್ಮಚಾರಿಯಾಗಿ ಬಂದು ನಿಂತು ರಾಜಕುಮಾರ ಇದನ್ನೆಲ್ಲ ಸಾಧಿಸಬೇಕೆಂದರೆ ಎಂಥ ಸಾಹಸ ಇರಬೇಕು. ಆ ಗುಪ್ತದಾರಿಯನ್ನಾದರೂ ತೋರಿಸುವ ಸಮಯ ಎಂಥದು ? ಸಂಘ ನಗರದಿಂದ ಹೊರಟು ನಿಂತ ಸಂದರ್ಭದಲ್ಲಿ. ಇತ್ತ ಆಚಾರ್ಯರ ಪಾದ ಪೂಜೆ ಅತ್ತ ನಮ್ಮ ಪ್ರೇಮ ದೀಕ್ಷೆ. ಎಲ್ಲವೂ ವಿಚಿತ್ರ !

ಹೀಗೇನೇನೋ ಹಿಂದೆ ಮುಂದೆ ವಿಚಾರಿಸುತ್ತ ಗೊತ್ತಾದ ಸ್ಥಳದ ಕಡೆಗೆ ನಡೆದಿದ್ದೆ ನಗರವೆಲ್ಲ ನಿದ್ರೆಯಲ್ಲಿ ಮುಳುಗಿ ಶಾಂತವಾಗಿದ್ದಿತು. ದೂರದಲ್ಲಿ ಎಲ್ಲಿಯೋ ವೇಶ್ಯಾನಿವಾಸದೊಳಗಿನ ನಗೆಯೋ ಹಾಡೋ ಅಸ್ಪಷ್ಟವಾಗಿ ಕೇಳಿಸುತ್ತಿತ್ತು. ಘಳಿಗೆಗೊಮ್ಮೆ ಅರಮನೆಯ ತಲೆ ಬಾಗಿಲಿನ ಗೋಪುರದ ಮೇಲೆ ಬಾರಿಸುವ ಸಮಯ ಗಂಟೆ ಮಾತ್ರ ಸ್ಪಷ್ಟವಾಗಿ ಕಿವಿಗೆ ಬಿದ್ದು ಎದೆಯನ್ನು ನಡುಗಿಸುತ್ತಿದ್ದಿತು.

ದೂರದಲ್ಲಿ ಮರಗಳ ಆಚೆಗೆ — ತೋಟದೊಳಗಿನ ಪುಷ್ಕರಣಿಯ ಹತ್ತಿರ — ಯಾವುದೋ ಪುರುಷಾಕೃತಿ ಶತಪಥ ಹಾಕುತ್ತ ತಿರುಗಾಡುವುದು ಕಂಡಿತು. ಮನಸ್ಸು ಅರಳಿತು. ಮುಂಗಾರು ಮಳೆಯ ಮೋಡವನ್ನು ಕಂಡ ಮಯೂರಿಯಂತೆ ಮುಂದರಿದೆ.ಒಮ್ಮೆಲೇ ಹತ್ತರ ಹಾರಿದೆ.

"ಹೊತ್ತಾಯಿತೆ ಎನ್ನರಸ ?" ಎಂದೆ.

"ಇಲ್ಲ.... ರಾಣೀ...."

ಎರಡೇ ಶಬ್ದ ! ಆದರೆ ಅದರಲ್ಲಿ ಪ್ರಪಂಚದೊಳಗಿನ ಪ್ರೇಮವೆಲ್ಲ ತುಂಬಿದಂತಿತ್ತು. ಆ ಮೇಲೆ ಅಲ್ಲಿ ನಾವು ಆಡಿದ ಮಾತುಗಳನ್ನೆಲ್ಲ ಇಲ್ಲಿ ವಿವರಿಸುವುದು ಅನುಚಿತ ಅವುಗಳನ್ನೆಲ್ಲ ತಿರುಗಿ ನೆನೆದು ಹೇಳಬೇಕೆಂದರೆ ಹೃದಯ ತುಂಬಿ ಬರುವುದು. ಹೆಚ್ಚಿಗೇನು ? ಆ ಅನುಭವ ಸಂಸಾರಿಗಳಿಗೆಲ್ಲರಿಗೂ ಗೊತ್ತಿದ್ದುದೇ. ಆತ್ಮ ಇಂಥ ಭೋಗವನ್ನು ಎಷ್ಟು ದೇಹಗಳಲ್ಲಿ ಅದೆಷ್ಟು ಜನ್ಮಗಳಲ್ಲಿ ಅದೆಂಥ ವಿವಿಧ ರೀತಿಯಲ್ಲಿ ಭೋಗಿಸಿಲ್ಲ ? ಅದನ್ನು ನೆನೆದರೆಯೇ ಮೈ ನಡುಗುವುದು ! ಬಾಯಿ ಬಿಚ್ಚಿ ಮತ್ತೆ ಮತ್ತೆ ಹೇಳುವದರಲ್ಲೇನಿದೆ ?

ಅಂದರೂ ಆ ದಿನ ಬೆಳಗಿನ ಜಾವದಲ್ಲಿ ನಲ್ಲ ತಿರುಗಿ ನಡೆದಾಗ ಮೆಲ್ಲನೆ ಕೇಳದಿರಲಿಕ್ಕಾಗಲಿಲ್ಲ.

"ಹೀಗೆ ಎಷ್ಟು ದಿನ ಸಾಗುವುದು ?"

"ನೀನು ಇಂದೇ ಸಿದ್ಧವಿದ್ದರೆ ನಡೆಯಲ್ಲ....!"

ಅಡಿ ಬಿಟ್ಟರವರು. ನಾನು ಕ್ಷಣ ಹೊತ್ತು ಸುಮ್ಮನೆ ನಿಂತು ಬಿಟ್ಟೆ. ಏನು ಹೇಳಬೇಕೆಂಬುದೂ ತಿಳಿಯಲಿಲ್ಲ. ಆ ಸಿದ್ಧತೆಯಿಂದಲೂ ನಾನು ಬಂದಿರಲಿಲ್ಲ. ಅದನ್ನೂ ಅವರು ಬಹು ಬೇಗ ಅರಿತುಕೊಂಡರು. ನಲ್ಲೆಯ ಹೃದಯದ ಆಳ ಅಗಲಗಳನ್ನೆಲ್ಲ ಬಲ್ಲ ಚದುರರವರು.

"ಬರುವ ಚತುರ್ದಶಿಯ ದಿನ ಸಿದ್ಧವಾಗಿರು ...."

"ಹೂಂ !" ಎಂದೆ. ಧ್ವನಿಯಲ್ಲಿ ಉಲ್ಲಾಸವಿತ್ತು.

"ಹೋಗಿ ಬರಲೆ ?"

ಓರೆ ನೋಟವೊಂದನ್ನು ಬೀರಿ ಅಪ್ಪಣೆ ಬೇಡಿದರು.

"ಪುನಃ ದರ್ಶನವಿಲ್ಲವೆ ?"

ಈಸಲ ಧ್ವನಿಯಲ್ಲಿ ಕಾತರವಿತ್ತು.

"ಅಂದೇ...! ಏಕೆ ಏನಾದರೂ .... ಅನುಮಾನವೆ ?"

"ಇಲ್ಲ .... ದೊರೆ !"

"ಹಾಗಾದರಾಯಿತು ..."

ಅದೆಂಥ ದುರ್ದೈವದ ಸಮಯವೋ.! ಅದೇ ದರ್ಶನ ಕೊನೆಯ ದರ್ಶನವಾಯಿತು! ಪೂರ್ವಾರ್ಜಿತ ಕರ್ಮದ ಫಲ ವಿಚಿತ್ರ! ಮುಂದೆ ಹನ್ನೆರಡು ವರ್ಷಗಳವರೆಗೆ ಒಬ್ಬರನ್ನೊಬ್ಬರು ನಾವು ಕಾಣಲಿಲ್ಲ. ಭಗವಂತರ ಸಮವಸರಣದಲ್ಲಿಯೇ ನಮ್ಮದು ಪುನರ್ ದರ್ಶನವಾಯಿತು.

೫

ಮರುದಿನ ಬೆಳಗಿನಲ್ಲಿ ನನಗೆ ಸ್ವಲ್ಪ ವಿಲಂಬವಾಯಿತು. ಎಚ್ಚರಾಗಲಿಕ್ಕೆ. ಮುಖದ ಮೇಲೆ ಸೂರ್ಯನ ಹೊಂಬಿಸಿಲು ಬಿದ್ದಾಗಲೇ ನನ್ನ ಕಣ್ಣುಗಳು ತೆರೆದುವು. ಗಡಬಿಡಿಸಿ ಸುತ್ತಲೂ ನೋಡಿದೆ. ಸಮೀಪದ ಮಂಚದಲ್ಲಿ

ಇನ್ನೂ ತಂಗಿಯು ಮಲಗಿದಂತೆಯೇ ಕಂಡಿತು. ಏನೋ ಒಂದು ತರದ ಬೆರಗು ಬೆದರಿಕೆಗಳು. ಕೂಡಿ ಒಮ್ಮೆಲೇ ನನ್ನ ಹೃದಯವನ್ನು ನಡುಗಿಸಿದುವು ನಮ್ಮ ನಿರ್ಣಯವನ್ನು ಇವಳೂ ಅರಿತುಕೊಂಡಳೆ? ಕಳ್ಳ ಹೆಜ್ಜೆಯಿಂದ ಇರುಳು ನನ್ನ ಹಿಂದೆ ಬಂದಿದ್ದಳೇ ?— ಇವೇ ಮೊದಲಾದ ಸಂಶಯಗಳು ನನ್ನ ಮನದಲ್ಲಿ ಉದ್ಭವಿಸಿ ಕಾಡ ತೊಡಗಿದುವು; ಹೊರಗೆ ಅರಮಂದಿರವೆಲ್ಲ ಪ್ರಸನ್ನವಾಗಿದ್ದಿತು. ತಂದೆ – ತಾಯಂದಿರು ಬೆಳಗಿನ ಪೂಜೆ ಪುನಸ್ಕಾರಗಳನ್ನೆಲ್ಲ ಈಗಾಗಲೇ ತೀರಿಸಿಕೊಂಡು ಬಂದಿದ್ದರು. ತಮ್ಮ ತಮ್ಮ ಕಾರ್ಯಗಳಲ್ಲಿ ನಿರತರಾಗಿದ್ದರು. ಅದೇಕೋ ನನ್ನಷ್ಟಕ್ಕೆ ನಾನೇ ನಾಚಿಕೊಂಡೆ. ಮೆಲ್ಲನೇ ಎದ್ದು ತಂಗಿಯ ಮಂಚದ ಹತ್ತರ ಹೋಗಿ ಅವಳನ್ನು ಎಚ್ಚರಿಸಿದೆ.

ಸಹಜ ಎದುರಿಗಿರುವ ರತ್ನಗನ್ನಡಿಯ ಕಡೆಗೆ ನನ್ನ ದೃಷ್ಟಿ ಹೋಯಿತು ಕೆಂಪಡರಿದ ಕಣ್ಣುಗಳು ! ಅಸ್ತವ್ಯಸ್ತವಾದ ತಲೆಗೂದಲು ! ಕೊರಳೊಳಗಿನ ಮಾಸಿದ ಮುತ್ತಿನ ಸರ! ಮುದುಡಿದ ರವಿಕೆ! — ಎಲ್ಲವೂ ನನ್ನ ಮನಸ್ಸಿನ ಪ್ರತೀಕದಂತಿದ್ದುವು. ಹಾಗೇ ಕೋಣೆಯಿಂದ ಹೊರಬೀಳುವ ಧೈರ್ಯ ನನಗಂತೂ ಆಗ ಆಗಲಿಲ್ಲ. ಸ್ವಲ್ಪ ಹೊತ್ತು ಸುಮ್ಮನೆ ಕುಳಿತೆ. ಉಡಿಗೆ ತೊಡಿಗೆಗಳನ್ನೆಲ್ಲ ಸರಿಪಡಿಸಿಕೊಂಡೆ. ಸಾಧ್ಯವಿದ್ದಷ್ಟು ಮನಸ್ಸನ್ನು ಸ್ತಿಮಿತಕ್ಕೆ ತರಲು ಯತ್ನಿಸಿದೆ. ಮುಖದ ಭಾವವನ್ನು ಸ್ವಾಭಾವಿಕತೆಗೆ ಇಳಿಸಿದೆ.

ನನ್ನ ಈ ಚಟುವಟಿಕೆಗಳನ್ನೆಲ್ಲ ಅಲ್ಲಿಯೇ ಇದ್ದು, ಸೂಕ್ಷ್ಮ ದೃಷ್ಟಿಯಿಂದ ನನ್ನ ಸಹೋದರಿ ನಿರೀಕ್ಷಿಸುತ್ತಿದ್ದಳಾದರೂ ಒಂದು ಮಾತನ್ನೂ ಆಡಲಿಲ್ಲ. ಗಂಭೀರವಾಗಿಯೇ ಇದ್ದಳು. ಕೋಣೆಯನ್ನು ಬಿಟ್ಟು ಹೊರಗೂ ಹೋಗಲಿಲ್ಲ. ಏನೋ ಮನದಲ್ಲಿ ಲೆಕ್ಕ ಹಾಕುತ್ತಿರುವಂತೆ ನನಗೇ ಭಾಸವಾಯಿತು. ಮತ್ತೆ ಹೃದಯ ಸಾಗರದಲ್ಲಿ ಸಂಶಯದ ತರಂಗಗಳು ಎಡೆ ಬಿಡದೆ ಏಳ ತೊಡಗಿದುವು. ಏನೇ ಆಗಲಿ, ಬಂದದ್ದಕ್ಕೆ ಬಾ ಎನ್ನುವುದೇ ನಿಜ !– ಎಂದುಕೊಂಡು ಮೆಲ್ಲನೆ ಎದ್ದು, ಸ್ನಾನದ ಮನೆಯ ಕಡೆಗೆ ಹೋಗಿ ಬಿಟ್ಟೆ.

ಆ ಮೇಲೆ ನಿತ್ಯದಂತೆ ದಿನಗಳು ಉರುಳತೊಡಗಿದುವು. ಬಗೆಯಾಳದ ಕೋಲಾಹಲ ಭೂಮಿಯ ಬಸಿರಿನಲ್ಲಿ ಹುದುಗಿದ ಜ್ವಾಲಾ ಮುಖಿಯಂತೆ ಮೇಲೆ ಮೇಲೆ ಶಾಂತವಾಗಿ ಕಂಡಿತು. ಆದರೆ ನನ್ನ ಜೀವನವು ಸೆಳವಿಗೆ ಸಿಕ್ಕು ಪ್ರವಾಹ ಪತಿತ ನಾವೆಯಂತೆ ಭರದಿಂದ ಸಾಗಿದ್ದಿತು.

ತೀರವೋ ಸಾಗರವೋ ಬಂಡೆಗಲ್ಲೋ ಏನೂ ತಿಳಿಯದ ಹಾಗಿತ್ತು. ಮೊಸಳೆಗಳಿಂದ ತುಂಬಿದ ಮಡುವಿನಂತೆ ಭಯಾನಕವಾಗಿದ್ದುವಾ ದಿನಗಳು,

ನೋಡ ನೋಡುತ್ತ ಆ ಹದಿಮೂರು ದಿನಗಳು ಅಪಾರವಾದ ಕಾಲಗರ್ಭದಲ್ಲಿ ಮಾಯವಾಗಿ ಬಿಟ್ಟುವು ! ಹದಿನಾಲ್ಕನೆಯ ದಿನದ ಆರಂಭವಾಯಿತು. ಸೂರ್ಯ ಉದಯಿಸಿ ಮೇಲೇರ ಹತ್ತಿದ ಚತುರ್ದಶಿಯ ಪೂಜಾದಿಗಳು ಜಿನಮಂದಿರದಲ್ಲಿ ತೊಡಗಿದುವು. ತಂದೆ ತಾಯಂದಿರ ಮನಸ್ಸೆಲ್ಲ ಅತ್ತ ಕಡೆಗೇ ಇತ್ತು ಆ ಶುಭಧ್ಯಾನದಲ್ಲಿಯೇ ತಂಗಿಯೂ ಮಗ್ನಳಾದಂತಿದ್ದಳು. ನಾನು ಮಾತ್ರ ನನ್ನ ಮುಂದಿನ ದಾರಿಯ ಸಿದ್ಧತೆಯಲ್ಲಿ ಮೈಮರೆತು ಬಿಟ್ಟೆ.

ಸಂಗಡ ನಾನೇನೂ ಒಯ್ಯ ಬೇಕಿರಲಿಲ್ಲ ಬೆಳಗಾಗುವುದರಲ್ಲಿ ಸಾಮ್ರಾಜ್ಞಿಯ ಪದ ನನಗಾಗಿ ಕಾದಿತ್ತು. ಮೈಮೇಲಿನ ವಸ್ತ್ರ ಭೂಷಣಗಳೊಡನೆ ಸಮಯಕ್ಕೆ ಸರಿಯಾಗಿ ಗೊತ್ತಾದ ಸ್ಥಳಕ್ಕೆ ಹೋಗಿ ಬಿಟ್ಟರಾಯಿತು. ಮುಂದಿನ ಎಲ್ಲ ಭಾರ ಅವರದಾಗಿತ್ತು. ನನ್ನ ಪ್ರಿಯಕರನದಾಗಿತ್ತು. ಆದರೆ ಅಂದಿನ ಉಡಿಗೆ ತೊಡಿಗೆಗಳ ಸಿದ್ಧತೆಯೆಂದರೂ ಸಣ್ಣದಾಗಿರಲಿಲ್ಲ. ಅವು ನನ್ನ ಮೈಗೆ ಒಪ್ಪಾಗಿರಬೇಕು, ಅವರ ಮನ ಸೆಳೆಯುವಂತಿರಬೇಕು, ಮೋಹಕವಾಗಿರಬೇಕು.. ಇವುಗಳನ್ನೆಲ್ಲ ಗಮನಿಸಿ, ಆಕಾಶವರ್ಣದ ರೇಶಿಮೆಯ ಸೀರೆಯನ್ನು ಉಡಲು ಮೇಲೆ ತೆಗೆದಿಟ್ಟೆ. ಅದಕ್ಕೊಪ್ಪುವ ರವಕೆಯನ್ನು ಸಿದ್ಧಗೊಳಿಸಿಟ್ಟೆ. ಆಯಿತು. ಇನ್ನೇನು ? ಇಳಿಹೊತ್ತಿಗೇನೇ ಉಟ್ಟುಕೊಂಡು ಹೂದೋಟದತ್ತ ಹೋಗಿ ಬಿಡಲೆ ? – ಎಂದು ಮನಸ್ಸು ಹವಣಿಸ ಹತ್ತಿತು. ಅದು ಸುರಕ್ಷಿತವಲ್ಲೆಂದು ಬಗೆದು ಮನಸ್ಸನ್ನು ಶಾಂತಗೊಳಿಸಿದೆ, ಬಿಗಿ ಹಿಡಿದೆ. ಅವಸರ ಪಟ್ಟು ಕಾರ್ಯವನ್ನು ಕೆಡಿಸಿಕೊಳ್ಳುವುದು ಒಳ್ಳೆಯದಲ್ಲವೆಂದು ಭಾವಿಸಿದೆ ಆದರೆ ಆಗಲೇ ಹೋಗಿದ್ದರೆ ಒಳ್ಳೆಯದಿತ್ತೋ ಏನೋ!

ಹೇಗೋ ಹಗಲನ್ನು ನೂಕಿದೆ. ಸೂರ್ಯಾಸ್ತವಾಯಿತು. ಮೂರು ನಾಲ್ಕು ಜಾವಗಳೂ ಜಾರಿದುವು. ತಂದೆಯವರು ಚತುರ್ದಶಿಯ ರಾತ್ರಿಯನ್ನು ಕಳೆಯಲೆಂದು ನಗರದ ಹೊರಭಾಗದ ಶಾಂತ ಪ್ರದೇಶಕ್ಕೆ ಹೋದರು. ತಾಯಿಗಂತೂ ಇಂದು ಜಿನಮಂದಿರವೇ ನಿವಾಸ ಸ್ಥಳ. ಅವರೂ ಭಗವಂತನ ಸಾನಿಧ್ಯದೆಡೆಗೆ ಸಾಗಿದಳು. ಹೋಗುವಾಗ ಕೋಣೆಯಲ್ಲಿದ್ದ ನಮ್ಮಿಬ್ಬರನ್ನು ಕೂಗಿ ಕರೆದಳು. ಇಬ್ಬರೂ ಹೊರಗೆ ಬಂದೆವು.

ಏಳೆಂಟು ಮಕ್ಕಳ ತಾಯಿಯಾಗಿದ್ದರೂ ನಮ್ಮ ತಾಯಿ ಮುಕ್ತಿ ಕನ್ನೆಯಂತೆ ಸದಾ ಸುಂದರಿಯಾಗಿದ್ದಳು. ಒಂದು ಕ್ಷಣ ತಾಯಿಯ ಮುಖವನ್ನು ನೋಡಿದೆ. ಇದೇ ಕೊನೆಯ ದರ್ಶನವೆಂದು ನನ್ನ ಕಣ್ಣುಗಳು ತೇವುಗೊಂಡುವು. ತಿರುಗಿ ತಂಗಿಯ ಕಡೆಗೆ ನೋಡಿದೆ. ಅವಳ ಕಣ್ಣುಗಳಲ್ಲೂ ನೀರು ತುಂಬಿದ್ದುವು.

"ಬಸ್ತಿಗೆ ಬರುವಿರಾ?"

ತಾಯಿ ಕರೆದಳು. ಎಷ್ಟು ಮಧುರವಾಗಿತ್ತಾ ಸ್ವರ! ತಾಯ ಪ್ರೇಮವೆಂಬುದೆಲ್ಲ ಅದರಲ್ಲಿ ತುಂಬಿದ್ದಿತು.

ಏನು ಹೇಳಬೇಕೆಂದು ನನಗೆ ಹೊಳೆಯಲಿಲ್ಲ. ಸಂಗಡ ಹೋಗಿದ್ದರೆ ಇರುಳೆಲ್ಲ ಬಸ್ತಿಯಲ್ಲಿ ಇರಬೇಕಾಗುತ್ತಿದ್ದಿತು. ಮುಂದಿನ ನನ್ನ ಜೀವನವೆಲ್ಲ ಹಾಳು..! ಹಾಳು! ಗೊತ್ತಾದ ಸಮಯಕ್ಕೆ ಅವರು ಬಂದು ಹೋಗುವರು! ನಾನು ಅಲ್ಲಿರದಿದ್ದರೆ ಎಂಥ ನಿರಾಶೆ ಅವರಿಗೆ? ಇತ್ತ ತಾಯಿಯ ಕರೆ! ಯಾವುದಕ್ಕೆ ಓಗೊಡಲಿ? ಹತ್ತು ತಿಂಗಳ ಹೊತ್ತು ಹೆತ್ತು ಸಲಹಿದ ಮಾತೃ ಹೃದಯದ ಕೊನೆಯ ಕರೆಯಿದು. ನಾಳೆ ಅಲ್ಲಿ ಮಾತನಾಡಿಸಲಿಕ್ಕೆ ಬಂದಾಳೆಯೇ ನನ್ನ ಹಡೆದವ್ವ! ಆದರೆ ಏನು ಮಾಡುವುದು..! ಏನು ಮಾಡಲಿ! ಹೃದಯದ ಹೊಯ್ದಾಟದಿಂದಾಗಿ ದೇಹ ಶಕ್ತಿಯೆಲ್ಲ ಒಮ್ಮೆಲೇ ಉಡುಗಿ ಹೋದಂತಾಯಿತು. ಮುಖ ಬಿಳುಪೊಡೆಯಿತು. ನಿಲ್ಲಲಿಕ್ಕಾಗದೆ ಬಾಗಿಲ ತೋಳುಗಳನ್ನು ಹಿಡಿದು ನಿಂತೆ. ಸಾವಕಾಶವಾಗಿ ಕೆಳಗೆ ಕುಳಿತೆ....

"ಉಪವಾಸ ತಡೆಯುವದಿಲ್ಲವೇನೋ ತಾಯಿ ನಿಮಗೆ"

ಎಂದು ಮೆಲ್ಲನೆ ಮುಂದೆ ಹೆಜ್ಜೆ ಹಾಕಿದಳು ತಾಯಿ! ಸ್ವಲ್ಪ ಹೊತ್ತು ಸರಿಯಿತು. ಇನ್ನೂ ಒಳಗಿನ ಚೌಕನ್ನು ದಾಟಿ ಹೊರಗೆ ಹೋಗಿರಲಿಲ್ಲ; ಅವಳು.

"ನಾನೂ ಬಂದೆ ಅವ್ವ!"

ಎಂದು ಹೇಳಿ ತಂಗಿ ಹೋಗಿ ಬಿಟ್ಟಳು. ತಾಯ ಕರೆಗೆ ಓ ಕೊಟ್ಟಳು. ಕೊನೆಯ ಸಮಯದಲ್ಲಿ ಅವಳು ಎಸಗಿದ ಪುಣ್ಯವೇ ಅವಳಿಗೆ ಫಲಕೊಟ್ಟಿತೇನೋ! ತಾಯ್ಗರುಳಿನ ಹರಕೆಯೇ ಹಾಗಿರುತ್ತದೆಯಷ್ಟೇ!

ಹೊತ್ತು ಹೋದಂತೆ ಅರಮನೆಯಲ್ಲಿ ನಿಃಶಬ್ದವಾಯಿತು. ಆಳು ಹೋಳುಗಳೆಲ್ಲ ನಿದ್ರೆ ಹೋದರು. ಹೊರಗಿನ ಕೋಟೆಯ ಮೇಲಿನ ಕಾವಲು ಗಾರರ ಎಚ್ಚರಿಕೆಯ ಕೂಗುಗಳು ಆಗಾಗ ಕೇಳ ಬರುತ್ತಿದ್ದುವು. ಪಡಸಾ ಲೆಯಲ್ಲಿಟ್ಟ ರತ್ನ ದೀವಿಗೆಗಳು ಪ್ರಕಾಶಮಾನವಾಗಿ ಎಂದಿನಂತೆ ಉರಿಯು ತ್ತಿದ್ದವು. ಕೋಶಾಗಾರದ ಕಾವಲುಗಾರರು ಹೆಗಲ ಮೇಲೆ ಹೊಳೆಯುವ ಕತ್ತಿಗಳನ್ನು ಇಟ್ಟುಕೊಂಡು ತೂಕಡಿಸುತ್ತ ಅಡ್ಡಾಡುತ್ತಿದ್ದರು. ಗಳಿಗೆ ಬಟ್ಟಲು, ತನ್ನ ಕಾರ್ಯದಲ್ಲಿ ತಾನು ನಿರತವಾಗಿದ್ದಿತು. ಹೀಗೆ ಗಣರಾಜ್ಯದ ಎಲ್ಲ ಕಾರ್ಯಗಳೂ ಸುವ್ಯವಸ್ಥಿತವಾಗಿ ಸಮಯಕ್ಕೆ ಸರಿಯಾಗಿ ಸಾಗಿದ್ದುವು. ಗಣತಂತ್ರದ 'ಪ್ರವೇಣೀಪುಸ್ತಕ'ದ ನಿಯಮಗಳನ್ನು ಉಲ್ಲಂಘಿಸುವವರನ್ನು ಅಲ್ಲಿ ಯಾರನ್ನೂ ನಾನು ಕಾಣಲಿಲ್ಲ. ಅದಕ್ಕೆ ಅಪವಾದ ನಾನೊಬ್ಬಳೇ! ಸಾಮ್ರಾಜ್ಞಿಪದದ ಮೋಹ ಎಂಥದು! ಪ್ರಿಯಕರನ ಪ್ರೇಮ ಪಾಶ ಎಂಥದು!

ಇನ್ನು ಕಾಲ ಕಳೆದು ಉಪಯೋಗವಿಲ್ಲೆಂದು ಕೋಣೆಯೊಳಗೆ ಹೋದೆ. ತಂಗಿಯೂ ತಾಯಿಯೊಡನೆ ಬಸ್ತಿಗೆ ಹೋದುದೊಂದು ನನಗೆ ಅನುಕೂಲವಾಗಿಯೇ ತೋರಿತು. ಎಷ್ಟು ಅನುಕೂಲ ಪರಿಸ್ಥಿತಿ ಇದ್ದರೂ ಸಹ ಕಾರ್ಯವನ್ನು ಜಾಗೃತೆಯಿಂದಲೇ ಮಾಡಬೇಕಂತೆ. ಇಂಥ ಕಾರ್ಯ ಗಳಲ್ಲಂತೂ ಬಹಳ ಎಚ್ಚರಿಕೆ ವಹಿಸುವ ಅವಶ್ಯಕವೆ ಇರುತ್ತದೆ, ಎಂದು ಕೊಂಡು ಬಾಗಿಲನ್ನು ಗಟ್ಟಿಯಾಗಿ ಮುಚ್ಚಿಕೊಂಡು, ಕೋಣೆಯಲ್ಲಿ ಸಿಂಗರಿಸಿ ಕೊಳ್ಳಲು ತೊಡಗಿದೆ.

ನನ್ನನ್ನು ಸಿಂಗರಿಸಲಿಕ್ಕೆ ಎಂದಿನಂತೆ ಇಂದು ದಾಸಿಯರಿರಲಿಲ್ಲ. ಅದ ರಿಂದ ರನ್ನಗನ್ನಡಿಯ ಮುಂದೆ ನಿಂತು ಮೈಗೆ ಒಪ್ಪುವ ಸೀರೆಯನ್ನು ನಾನೇ ಉಟ್ಟುಕೊಂಡೆ. ಕೂದಲ ಸರಿಪಡಿಸಿಕೊಂಡೆ; ರವಕೆ ತೊಟ್ಟೆ; ಕುಂಕುಮ ಇಟ್ಟುಕೊಂಡೆ. ಆಭರಣಗಳನ್ನೆಲ್ಲ ಸರಿಯಾಗಿ ತೊಟ್ಟುಕೊಂಡೆ.. ಸೌಂದ ರ್ಯದ ಅಧಿದೇವತೆಯಂತೆ ಕಾಣತೊಡಗಿದೆ. ನನ್ನ ಚಲುವಿಕೆಗೆ ಒಂದು ಕ್ಷಣ ನಾನೇ ಮರುಳಾದೆ, ಮೆಚ್ಚಿದೆ. ತಲೆದೂಗಿದೆ. ಮುಖದಲ್ಲಿ ಅಭಿಮಾನದ ಮುಗುಳು ನಗೆಯೊಂದು ಮೂಡಿ ಮಾಯವಾಯಿತು.

ದೇವೇಂದ್ರನ ಅಪ್ಪಣೆಯಂತೆ ಇಂದ್ರಾಣಿಯು ತೀರ್ಥಂಕರರ ಸಮ ವಸರಣ ಪೂಜೆಗೆ ಹೋಗಲು ಸಿಂಗರಿಸಿಕೊಳ್ಳುವಂತೆ ಶೃಂಗಾರಾದೆ, ಇನ್ನೂ

ನನ್ನ ದೇವೇಂದ್ರ ಬರುವುದಕ್ಕೆ ತುಸು ಅವಕಾಶವಿದ್ದಿತು. ಅದರಿಂದ ಘಳಿಗೆಯ ಗಂಟೆಗಳನ್ನು ನಿರೀಕ್ಷಿಸುತ್ತ ಮಂಚದ ಮೇಲೆ ಸ್ವಲ್ಪ ಹೊತ್ತು ವಿರಮಿಸಿದೆ. ಉಟ್ಟ ಸೀರೆ ಮುಮರೀತೆಂದು ಎಚ್ಚರವಹಿಸದಿರಲಿಲ್ಲ.

'ಢಣ್ ! ಢಣ್ ! ಢಣ್ !'

ಘಳಿಗೆ ಗಂಟೆಯ ಆಳು ಹದಿನೈದು ಏಟು ಹೊಡೆದ. ರಾಜಾಲಯದ ಮುಂದೆ ತೂಗು ಬಿಟ್ಟ ದೊಡ್ಡ ಜಾಗಟೆಯು ತುಸು ಹೊತ್ತು ನಾದವನ್ನುಂಟು ಮಾಡಿತು. ಕ್ರಮದಿಂದ ಧ್ವನಿಯ ತರಂಗಗಳು ಪ್ರಶಾಂತವಾದ ವಾತಾವರಣದಲ್ಲಿ ವ್ಯಾಪಿಸುತ್ತ ವ್ಯಾಪಿಸುತ್ತ ಕೊನೆಗೆ ಮಾಯವಾದುವು. ಅವನು ಗುಣಿಯನ್ನು ಜಾಗಟೆಯ ಮೇಲ್ಭಾಗಕ್ಕೆ ಇಟ್ಟ ಸದ್ದೂ ಕೇಳಿಸಿತು. ಇನ್ನು ಹೊರಡಲಿಕ್ಕೆ ಅಡ್ಡಿಯಿಲ್ಲವೆಂದು ಮೆಲ್ಲನೆ ಎದ್ದು, ಕೋಣೆಯ ಬಾಗಿಲ ಕಡೆಗೆ ಸಾಗಿದೆ. ಸ್ವಾಭಾವಿಕವಾಗಿ ಇನ್ನೊಂದು ಮಂಚದ ಕಡೆಗೆ ದೃಷ್ಟಿಯನ್ನು ಬೀರಿದೆ. ನನ್ನ ಹೆದರಿಕೆಗೆ ನಾನೇ ಮನದಲ್ಲಿ ನಕ್ಕೂ ಆಯಿತು. ಆದರೆ ದೈವವು ನನ್ನನ್ನು ನೋಡಿ ಮುಂದೆ ನಗುತ್ತಿದ್ದುದರ ಕಲ್ಪನೆ ಆಗ ನನಗಿರಲಿಲ್ಲ. ಬಾಗಿಲ ತೆರೆಯಲು ಕೈಯಿಕ್ಕಿದೆ. ಮೆಲ್ಲನೆ ಬಾಗಿಲ ಹಿಡಿದು ಎಳೆದೆ. ಕೈಯೊಡನೆ ಬಾಗಿಲ ಬರಲಿಲ್ಲ. ಎದೆ 'ಧಸ್ !' ಎಂದಿತು. ಇನ್ನೂ ಜೋರಿನಿಂದ ಜಗ್ಗಿದೆ. ಏನೂ ಪರಿಣಾಮವಾಗಲಿಲ್ಲ. ಹತ್ತಿರ ಹೋಗಿ ನಿರುಕಿಸಿದೆ. ಕೋಣೆಯ ಕದಕ್ಕೆ ಹೊರಗಿನಿಂದ ಯಾರೋ ಚಿಲಕ ಹಾಕಿದುದು ಗೊತ್ತಾಯಿತು. ! ನಿಂತಲ್ಲಿಯೇ ನೆಲಕ್ಕೆ ಕುಸಿದು ಬಿಟ್ಟೆ. ಒಂದೆರಡು ಗಂಟೆ ಮೈಮೇಲೆ ಎಚ್ಚರವೇ ಇರಲಿಲ್ಲ. ಬರ ಬರುತ್ತ ಯಾವುದೋ ಒಂದು ಕೆಟ್ಟ ಕನಸನ್ನು ಕಾಣುತ್ತಿರುವಂತೆ ಭಾಸವಾಗತೊಡಗಿತು. ಏನೇನು ಕಲ್ಪಿಸಿದೆನೋ ಯಾವ ಯಾವ ವಿಚಾರಗಳು ತಲೆಯಲ್ಲಿ ಬಂದುವೋ... ಈಗ ಯಾವುದನ್ನು ಹೇಳಲಿಕ್ಕೆ ಬರುವಂತಿಲ್ಲ. ಬೇಸರ ನಿರಾಶೆ ಮತ್ತು ಮಾನಸಿಕ ಶ್ರಮಗಳಿಂದ ಮತ್ತೆ ಮತ್ತೆ ಮೂರ್ಛೆ ಹೋದೆ.

ಮರುದಿನ ರಾಜ ಪುತ್ರಿಯ ಅಪಹರಣದ ಸುದ್ದಿಯು ನಗರದಲ್ಲೆಲ್ಲ ಪಸರಿಸಿದ ಮೇಲೆಯೇ ನನಗೂ ವಸ್ತು ಸ್ಥಿತಿಯ ಅರಿವಾಯಿತು.

೬

ಆರ್ಯಿ – ಸುಜ್ಯೇಷ್ಠೆ – ಕಥೆ ಹೇಳುವದನ್ನು ನಿಲ್ಲಿಸಿದಳು. ಸ್ವಲ್ಪ ಹೊತ್ತು ಎಲ್ಲರೂ ಸುಮ್ಮನೆ ಕುಳಿತರು. ಎಲ್ಲೆಡೆಗೂ ಮೌನ ಪಸರಿಸಿತು. ಇನ್ನೂ ಶ್ರಾವಕರ ಮನಸ್ಸು ಕಥೆಯ ವಾತಾವರಣದಲ್ಲಿಯೇ ವಿಹರಿಸುತ್ತಿದ್ದಿತು.

ಅಜಾತಶತ್ರುವಿನ ಕುತೂಹಲ ಬುದ್ಧಿ ಸುಮ್ಮನಿರಲಿಲ್ಲ. ಸುತ್ತಲೂ ಒಮ್ಮೆ ಕಣ್ಣಾಡಿಸಿದ. ಎಲ್ಲರೂ ಗಂಭೀರವಾಗಿಯೇ ಕುಳಿತಂತಿತ್ತು. ಯಾರೂ ಏನೂ ಕೇಳುವ ಬಯಕೆಯನ್ನು ಪ್ರಕಟಿಸುವಂತೆ ತೋರಲಿಲ್ಲ. ತಾನೇ ಮೆಲ್ಲನೆ ಆರ್ಯಿಯನ್ನು ಕುರಿತು ಮಾತನಾಡಿದ,—

" ಇದೇನು ಕಥೆಯಂತೆ ಎನಿಸಲಿಲ್ಲವಲ್ಲ ತಾಯಿ ! "

" ಹೇಗೆನಿಸಿತು ಮಗು ? "

ಯಾವುದೋ ಒಂದು ದೂರದ ಗುಹೆಯಿಂದ ಮಾತನಾಡುವಂತೆ ಸುಜ್ಯೇಷ್ಠೆಯ ಧ್ವನಿಯಿದ್ದಿತು. ಆದರೂ ಮುಖದ ಮೇಲೆ ಪ್ರಸನ್ನತೆ ಇತ್ತು.

" ಯಾರೊಬ್ಬರ ಹೆಸರೂ ಇಲ್ಲ ! ಸಂಗತಿ ಎಲ್ಲಿ ನಡೆಯಿತು? ಎಂದು ನಡೆಯಿತು ? — ಎಂಬುದರ ವಿವರವಿಲ್ಲ. ! ಏನೋ ಒಂದು ಆತ್ಮ ಕಥೆಯನ್ನು ಚಿತ್ರರಿಸಿದಂತೆ ಹೇಳಿಬಿಟ್ಟರಲ್ಲ .... ! "

ಅಜಾತಶತ್ರುವಿನ ಈ ಮಾತನ್ನು ಕೇಳಿ ಪ್ರಭಾವತಿಯು ಪದ್ಮಾವತಿಯ ಮುಖದ ಕಡೆಗೆ ನೋಡಿ ಮುಗಳು ನಗೆಯೊಂದನ್ನು ಬೀರಿದಳು. ಮುಪ್ಪಿನವರ ಮಂದಹಾಸವದು, ರಹಸ್ಯ ತುಂಬಿದ ನಗೆಯದು ! ಅದನ್ನರಿತು ಅಜಾತಶತ್ರುವು ತನ್ನ ದೊಡ್ಡವ್ವಂದಿರಿಗೆ ಕೇಳಿದ, –

" ತಮಗೇನಾದರೂ ಈ ವಿಷಯ ಗೊತ್ತದೆಯೇನಮ್ಮ ? "

" ಗೊತ್ತಿರದೆ ಏನು ? ಇದೇನು ಹೊರಗಿನ ಕಥೆಯೆ ? "

ಪದ್ಮಾವತಿಯು ಹೇಳಿದಳು.

" ತಮಗೆಲ್ಲ ಗೊತ್ತಿದ್ದು, ನನಗೇ ಗೊತ್ತಿರಬೇಡವೆಂದರೆ .... ? "

" ಆರ್ಯಿಕೆಯವರ ಅಪ್ಪಣೆಯಾದರೆ ಹೇಳುವೆ.... ! ಅದಕ್ಕೇನು ?"

ಪ್ರಭಾವತಿ ಆಶ್ವಾಸನವಿತ್ತಳು.

" ಹೇಳು ತಾಯೀ ಹೇಳು.... ! ನಿಮಗೆಲ್ಲ ಗೊತ್ತಿದೆ. ಈ ಘಟನೆ ನಡೆದ ಒಂದೆರಡು ದಿನಗಳಲ್ಲಿಯೇ ನೀವೆಲ್ಲ ವೈಶಾಲಿಗೆ ಬಂದಿರಲ್ಲ....

ಮುಂದಿನ ಸಂಗತಿಯನ್ನು ನೀವೇ ತಿಳಿಸಿ ಬಿಡಿರಿ... ಎಲ್ಲರೂ ಕೇಳಲಿ..." ಸುಜ್ಯೇಷ್ಠೆ ಹೃತ್ ಪೂರ್ವಕವಾಗಿ ಒಪ್ಪಿಗೆಯಿತ್ತಳು....

"ಆಕೆ ಮತ್ತಾರೂ ಅಲ್ಲ ... ನಮ್ಮ ಸಂಘ ನಾಯಕಿ ಆರ್ಯೆ ಸುಜ್ಯೇಷ್ಠೆಯೇ...." ಪ್ರಭಾವತಿ ಹೇಳತೊಡಗಿದಳು.

"ಅಪಹೃತ ರಾಜ ಕುಮಾರಿ ಯಾರು? ಹಾಗಾದರೆ...." ಅಜಾತ ಶತ್ರುವು ಕುತೂಹಲ ತುಂಬಿದ ಧ್ವನಿಯಲ್ಲಿ ಉದ್ಗಾರ ತೆಗೆದ.

"ಯಾರಿರಬಹುದು ಊಹಿಸಿ ನೋಡುವ. !"

ಶಿವಾದೇವಿ ನಕ್ಕು ಕೇಳಿದಳು

"ಪಾಪ ! ಈ ಮಗುವಿಗೇನು ಗೊತ್ತೇ ಶಿವು ?"

ಆರ್ಯಿಕೆ ಅಕ್ಕನ ಮುಖ ನೋಡಿ ಕರುಣೆಯಿಂದ ನುಡಿದಳು.

"ಮತ್ತಾರೂ ಅಲ್ಲಪ್ಪ ! ನಿನ್ನ ತಾಯಿ ಚೇಳನಾ !"

ಪ್ರಭಾವತಿ ಮಾತನ್ನು ಮುಗಿಸಿದಳು... ಸ್ವಲ್ಪ ಹೊತ್ತು ಎಲ್ಲರೂ ಸುಮ್ಮನೆ ಕುಳಿತರು .... ವೈಭಾರ ಗಿರಿಯ ಮೇಲಿನ ಜಿನಮಂದಿರಗಳಲ್ಲಿ ಯಾರೋ ಬಾರಿಸಿದ ಗಂಟೆ ಕೇಳಬರುತ್ತಿದ್ದಿತು. ಧೂಪದ ವಾಸನೆ ಸುಳಿ ಗಾಳಿಯಲ್ಲಿ ಬೆರೆತು ಎಲ್ಲರಿಗೂ ಬಂದು ತಲುಪುತ್ತಿತ್ತು. ಸೂರ್ಯ ಪಶ್ಚಿಮ ದಿಗಂತದಲ್ಲಿ ಮೆಲ್ಲನೆ ಕೆಳಗಿಳಿಯುತ್ತಿದ್ದ. ಸಂಜೆಯ ಸ್ವರ್ಣ ಕಿರಣಗಳಲ್ಲಿ ರಾಜಗೃಹ ನಗರ, ವಿಪುಲಾಚಲ, ತಪೋದಾ ನದಿ, ವೇಣುವನಗಳೆಲ್ಲವೂ ಸುಂದರತರವಾಗಿ ತೋರುತ್ತಿದ್ದುವು.

"ಅಪ್ಪ ಹೀಗೆ ಮಾಡಿದರೆ ?"

ಮೆಲ್ಲನೆ ಅಜಾತಶತ್ರುವು ಉಚ್ಚರಿಸಿದ. ಅದನ್ನು ಕೇಳಿ ಆರ್ಯೆಯು ಕೂಡಲೆ ಉಸುರಿದಳು.

"ಅವರದು ತಪ್ಪಲ್ಲ ಮಗು ! ತಾರುಣ್ಯದಲ್ಲಿ ಮನುಷ್ಯರ ಮನಸ್ಸು ಸ್ವಾಧೀನ ಇರುವುದು ಬಹು ಕಷ್ಟ. ಅದಕ್ಕಂತಲೆ ಆಗಳೆ ನಾನು ಕೇಳಲಿಲ್ಲವೆ? ಯುವರಾಜ್ಞಿಯನ್ನು ಬಿಟ್ಟು ನೀನೊಬ್ಬನೇ ಇತ್ತ ಬಂದುದು ಹೇಗೆಂದು ?"

ಎಂದು ಮನಃಪೂರ್ವಕವಾಗಿ ನಗಲು ಯತ್ನಿಸಿದಳು ಸುಜ್ಯೇಷ್ಠೆ. ಶ್ರಾವಕ ಸಮೂಹವೆಲ್ಲ ನಗೆಗಡಲಿನಲ್ಲಿ ತೇಲಿತು. ನಗೆಯ ಭರತಿಯು ಸ್ವಲ್ಪ ತಗ್ಗಲು ಪ್ರಭಾವತಿ ನುಡಿದಳು.

"ಚೇಳನೆಯ ಅಪಹರಣದಿಂದ ಗಣರಾಜ್ಯವೆಲ್ಲ ಅಲ್ಲೋಲ ಕಲ್ಲೋಲವಾಗಿ ಬಿಟ್ಟಿತು. ತಂದೆಯವರು - ಚೇಟಕರಾಜ ಅತ್ಯಂತ ಕೋಪಕುಲರಾದರು. ಸಾಮ್ರಾಜ್ಯದ ಮೇಲೆ ದಾಳಿಯನ್ನು ಮಾಡುವ ಯೋಚನೆ ಮಾಡಿದರು. ಅದಕ್ಕಾಗಿ ಎಲ್ಲ ಮಲ್ಲರಾಜರನ್ನೂ ಲಿಚ್ಛವಿಯರೊಳಗಿನ ಗಣರಾಜರನ್ನೂ ಸೇರಿಸಿದರು. ಚೇಳನೆಯ ಪ್ರಕರಣವನ್ನು ಅವರ ಮುಂದೆ ಇಟ್ಟರು. ರಾಜಗೃಹದ ಮೇಲೆ ದಂಡೆತ್ತಿ ಹೋಗುವ ಗೊತ್ತುವಳಿಯನ್ನು ಆ ಸಭೆಯಲ್ಲಿ ಮಂಡಿಸಿದರು. ಅದಕ್ಕೆ ಎಲ್ಲ ಗಣನಾಯಕರೂ ಸಮ್ಮತಿಯಿತ್ತರು. ಇಷ್ಟೇ ಅಲ್ಲ; ಸಾಮ್ರಾಜ್ಯವನ್ನೇ ಹೇಳ ಹೆಸರಿಲ್ಲದಂತೆ ಮಾಡಿ ಬಿಡೋಣವೆಂದು ತ್ವೇಷದಿಂದ ಮಾತನಾಡಿದರು! ಆ ಯುದ್ಧವಾಗಿದ್ದರೆ ಎಂಥ ಭಯಂಕರ ಹಿಂಸೆಯಾಗುತ್ತಿದ್ದಿತು! ಇಂದಿನ ಈ ಸುದಿನಗಳನ್ನು ನಾವು ಕಾಣುವುದು ಸಾಧ್ಯವಿತ್ತೇ? ಈ ರಾಜಗೃಹದ ವೈಭವ ಉಳಿಯುವುದು ಶಕ್ಯವಿತ್ತೇ? ನಾವು ಇಲ್ಲಿ ಬರುವುದಾದರೂ ಎಲ್ಲಿ?"

"ಆ ಯುದ್ಧವಾಗಲಿಲ್ಲವೇಕೆ?"

ಅಜಾತಶತ್ರುವು ಆತುರದಿಂದ ಕೇಳಿದ. ಧ್ವನಿಯಲ್ಲಿ ತುಂಬ ಕುತೂಹಲ ತುಂಬಿತ್ತು.

"ಎಲ್ಲ ಆ ಮಹಾತ್ಮನ ಪುಣ್ಯವೇ ಸೈ!"

ಸುಜ್ಯೇಷ್ಠೆಯು ಕೃತಜ್ಞತೆಯಿಂದ ಉದ್ಗಾರ ತೆಗೆದು ಸುಮ್ಮನಾದಳು. "ಅಂದಿನ ಆ ಗಣರಾಜರ ಸಭೆಯಲ್ಲಿ ಆ ಯುದ್ಧವನ್ನು ಮಹಾವೀರ ವಿರೋಧಿಸದಿದ್ದರೆ ... ನಿರ್ಣಯವೇನೂ ಬದಲಾಗುತ್ತಿರಲಿಲ್ಲ! ಎಲ್ಲರ ಪ್ರಶ್ನೆಗಳಿಗೂ ಮಹಾವೀರನೊಬ್ಬನೇ ಸಮಾಧಾನವನ್ನು ಹೇಳಿ, ಶಾಂತಗೊಳಿಸಿದ. ಅಂದಿನ ಸಭೆಯನ್ನು ನಾವು ಒಳಗೆ ಕುಳಿತೇ ನೋಡುತ್ತಿದ್ದೆವು. ಎಂಥ ವಾಕ್ ಪ್ರವಾಹವದು. ಅದೆಷ್ಟು ಪ್ರಭಾವ! ಇನ್ನೂ ಹದಿನೆಂಟು ಇಪ್ಪತ್ತು ವರ್ಷದ ಪ್ರಾಯ ಆಗ ನಮ್ಮ ವರ್ಧಮಾನರಿಗೆ! ಆದರೂ ಎಂಥ ಬುದ್ಧಿಮತ್ತೆ. ಅಹಿಂಸೆಯ ಮೇಲೆ ಅದೆಂಥ ಅತುಲ ನಿಷ್ಠೆ. ಅದನ್ನು ಕೇಳಿದವರೆಲ್ಲರೂ ಬೊಟ್ಟು ಕಚ್ಚಿಕೊಳ್ಳುವಂಥ ಪ್ರವಚನವದು. ನೆನೆದರೆ ಇನ್ನೂ ಆ ದೃಶ್ಯ ನನ್ನ ಕಣ್ಣ ಮುಂದೆ ನಿಲ್ಲುವುದು; ಆ ಶಬ್ದಗಳು ಕಿವಿಯಲ್ಲಿ ದುಮುದುಮುಸುವವು. ಆಗ ಸಿದ್ಧಾರ್ಥ - ತ್ರಿಶಲೆಯರಿಗೆ ತಮ್ಮ ಮಗನು

ಎಲ್ಲರಿಗೂ ವಿರೋಧಿಸಿ ಹೀಗೆ ಮಾತನಾಡುತ್ತಿರುವುದು ಕೆಡಕೆಣಿಸಿರಬೇಕು ತಂಗಿಯ ಅಪಹರಣದಿಂದ ತ್ರಿಶಲೆಯ ಹೃದಯವಂತೂ ಹಣ್ಣಾಗಿ ಹೋಗಿದ್ದಿತು. ಯುದ್ಧವಾಗಲಿ, ರಕ್ತ ಹರಿಯಲಿ !- ಆದರೆ ತನ್ನ ತಂಗಿ ತಿರುಗಿ ಮನೆಗೆ ಬರುವಂತಾಗಲೆಂದು ಅವಳು ಇಚ್ಛಿಸುತ್ತಿದ್ದಳು.. ಎಲ್ಲರ ಇಚ್ಛೆಗೂ ಮಹಾವೀರ ಅಡ್ಡಿಯಾದ ತನ್ನ ಅಜ್ಜ ಚೇಟಕನಿಗೂ ಸಮಾಧಾನವನ್ನು ಹೇಳಿದ ದ್ವೇಷಕ್ಕೆ ಪ್ರತಿಕಾರ ದ್ವೇಷದಿಂದಲ್ಲ; ಪ್ರೇಮದಿಂದ–ಎಂದು ಪ್ರಸ್ತಾಪಿಸಿದ. ಎಲ್ಲರ ಮನಸ್ಸನ್ನೂ ಆ ಮಹಾ ಸಿದ್ಧಾಂತದತ್ತ, ವಿಶ್ವ ಪ್ರೇಮದತ್ತ ಸೆಳೆದ. ಶಾಂತಿಯನ್ನು ಸ್ಥಾಪಿಸಿದ .... " ಹೀಗೆ ಹೇಳಿ ಪ್ರಭಾವತಿ ಸ್ವಲ್ಪ ಹೊತ್ತು ತಡೆದಳು. ಆ ಮೇಲೆ ಇಳಿದ ಧ್ವನಿಯಲ್ಲಿ ಅಂದಳು " ಆ ಮಹಾ ತಾಯಿ - ತ್ರಿಶಲಾ ಮಗನ ಈ ಧರ್ಮ ಸಾಮ್ರಾಜ್ಯವನ್ನು ನೋಡಲಿಕ್ಕೆ ಇನ್ನೂ ನಾಲ್ಕು ದಿನ ಉಳಿಯಲಿಲ್ಲ ! ಈಗ ಇದ್ದಿದ್ದರೆ ಎಷ್ಟು ಹಿರಿ ಹಿರಿ ಹಿಗ್ಗುತ್ತಿದ್ದಳೋ " ಎಂದು ಕಣ್ಣೀರು ಮಿಡಿದಳು.

" ಅದೆಲ್ಲ ಕರ್ಮದ ಕೈವಾಡ ನಮ್ಮಮ್ಮ ! ಅದಕ್ಕೆಲ್ಲ ನಾವು ಕಣ್ಣೀರು ಕರೆದರೆ ಆದೀತೆ ? "

ಎಂದು ಆರ್ಯಿಕೆ ಸಮಾಧಾನ ಹೇಳಿದಳು. ಕೈಯೊಳಗಿನ ಪಿಂಛದಿಂದ ಪಾದಗಳನ್ನು ಸವರಿಕೊಂಡು ಮೆಲ್ಲನೆ ಎದ್ದಳು. ಪಡುವಣಕ್ಕೆ ಹೊರಳಿ,

" ಹೊತ್ತು ಹೋಗಹತ್ತಿತು. ನೀವೆಲ್ಲ ಹೊರಡಿರಿನ್ನು ! "

ಎಂದು ಹೇಳಿ ಸಾಯಂಕಾಲದ ಸಾಮಾಯಿಕಕ್ಕೆ ಗುಹೆಯ ಕಡೆಗೆ ಸಾಗಿದಳು.

೩

ಮಹಾವೀರನ ಮಾತುಗಳು.

ಒಂದು ಸಲ ಭಗವಾನ್ ಮಹಾವೀರನು ಮಹಾ ಶ್ರಮಣ ಸಂಘ ದೊಡನೆ ವಿಹರಿಸುತ್ತ ಬಿಹಾರದ ಪಾವಾಪುರಿಯ ಉಪವನದಲ್ಲಿ ಬಂದು ತಂಗಿದ್ದನು. ಅದು ಒಳ್ಳೆಯ ಫಲವತ್ತಾದ ಪ್ರದೇಶ. ರಾಜ ಭೋಗ್ಯವಾದ ವಸ್ತುಗಳಿಂದ ತುಂಬಿ ತುಳುಕುತ್ತಿದ್ದಿತು. ದನಕರುಗಳು ಹುಲ್ಲು ಕಡ್ಡಿ ಗಳನ್ನು ಮೇದು, ತಂಗೊಳದಲ್ಲಿ ತಿಳಿನೀರನ್ನು ಕುಡಿದು ಸಮೃದ್ಧವಾಗಿ ಜೀವಿಸುತ್ತಿದ್ದುವು. ಧನ ಧಾನ್ಯಗಳು ವಿಪುಲವಾಗಿದ್ದುವು. ಅಂದಿನ ಬರಗಾಲ ಇಂದಿನ ಸಮೃದ್ಧಿಗಳನ್ನು ನೆನೆದು ಭಗವಂತನ ಮನಸ್ಸು ಅರಳಿತು.

ಆಗ ಆ ಸಮಯದಲ್ಲಿ, ಊರಲ್ಲಿ ಮಹಾಯಜ್ಞದ ಸನಾಹವೊಂದು ನಡೆದಿದ್ದಿತು. ಬರಗಾಲ ನಿವಾರಣೆಯಾಗಿ ಮಳೆರಾಯನು ದಯೆದೋರಿದ್ದ ಕ್ಕಾಗಿ ವರುಣ ದೇವನ ತೃಪ್ತಿಯ ಯಜ್ಞವದು. ಯಜ್ಞಕ್ಕಾಗಿ ಮುನ್ನೂರು ಗೂಳಿ, ಮುನ್ನೂರು ಹಸು, ಮುನ್ನೂರು ಕುರಿ, ಮುನ್ನೂರು ಆಡು, ಮುನ್ನೂರು ಕೋಳಿಗಳನ್ನು ಯೂಪ ಸ್ತಂಭದ ಹತ್ತರ ಒಯ್ದಿದ್ದರು.

ಪಾವಾಪುರಿಯ ಗೃಹಪತಿಗಳಿಗೆ ತಿಳಿಯಿತು : " ಭೋ ! ಸಿದ್ಧಾರ್ಥ ತನಯನೂ ಲಿಚ್ಛವಿಕುಲದಿಂದ ಪ್ರವ್ರಜಿತನೂ ಆದ ಶ್ರಮಣ ಮಹಾವೀರನು ವಿಹರಿಸುತ್ತ ಎಂಟು ನೂರು ಮುನಿಗಳ ಸಂಘದೊಡನೆ ಪಾವಾಪುರಿಯ ಬಳಿಗೆ ಬಂದು ಸರೋವರದ ತಟದಲ್ಲಿರುವ ಉಪವನದಲ್ಲಿ ತಂಗಿರುವನಂತೆ ? ಅಂತಹ ಅರ್ಹತರ ದರ್ಶನದಿಂದ ಒಳ್ಳೆಯದಾಗುವುದು .... "

ಆಗ ಪಾವಾಪುರಿಯ ಬ್ರಾಹ್ಮಣರೂ ಕ್ಷತ್ರಿಯರೂ ನಗರದಿಂದ ಗುಂಪು ಗುಂಪಾಗಿ ಹೊರಟು ಮುನಿಸಂಘವಿರುವಲ್ಲಿಗೆ ಹೊರಟರು. ಹೀಗೆ ತೆರಳುವ ಜನ ಸಮೂಹವನ್ನು ಅಲ್ಲಿಯ ಹಸ್ತಿಪಾಲ ರಾಜನು ಕಂಡನು.

ಅಂದು ಆ ಸಂದರ್ಭದಲ್ಲಿ ಹಸ್ತಿಪಾಲನು ಮಧ್ಯಾನ್ಹದ ನಿದ್ರೆಮಾಡಲು ಪ್ರಾಸಾದದ ಮೇಲುಗಡೆಗೆ ಹೋಗಿದ್ದನು. ಆದರೂ ನಿದ್ರೆ ಬಂದಿರಲಿಲ್ಲ.

ಮರುದಿನದಿಂದ ಆರಂಭವಾಗುವ ಯಜ್ಞದ ವಿಷಯವನ್ನೇ ಕುರಿತು ವಿಚಾರಿಸುತ್ತ ಇದ್ದನು. ಆಗ ಅವನಿಗೆ ಹೀಗೆನ್ನಿಸಿತು: ಮಹಾ ಶ್ರಮಣ ಸಂಘದ ನಾಯಕನಾದ ಭಗವಾನ್ ಮಹಾವೀರನು ಯಜ್ಞಕ್ರಮಗಳನ್ನೆಲ್ಲ ಅರಿತವನು. ಹಿಂದೆ ಅನಾವೃಷ್ಟಿಯಿಂದ ಪಶುಗಳೂ ಮಾನವರೂ ಜೀವ ಬಿಡುತ್ತಿರುವಾಗ ಬಂದು ಸಂರಕ್ಷಿಸಿದವನು. ನಾಳೆಯೇ ನಗರದಲ್ಲಿ ಯಜ್ಞ ಆರಂಭವಾಗಲಿದೆ. ನಾನು ಯಜ್ಞ ವಿಧಾನ ಅರಿಯೆ. ಶ್ರಮಣ ಮಹಾವೀರನ ಬಳಿಗೆ ಹೋಗಿ, ವಿವರವನ್ನು ಕೇಳಿ ತಿಳಿಯುವೆ .... "

ಪುರ ನಿವಾಸಿಗಳಿಗೆ ಹೇಳಿ ಕಳಿಸಿದನು. ತುಸು ಹೊತ್ತಿನಲ್ಲಿ "ಭೋ ! ಹಸ್ತಿಪಾಲ ಮಹಾರಾಜರು ಹೀಗೆ ತಿಳಿಸಿರುವರು:— 'ತಾವು ಸ್ವಲ್ಪ ತಡೆಯಬೇಕು. ರಾಜನು ಕೂಡ ತೀರ್ಥಂಕರ ವರ್ಧಮಾನನ ದರ್ಶನಕ್ಕೆ ಬರುವನು " ಎಂಬ ಸಂಗತಿಯು ನಗರದಲ್ಲೆಲ್ಲ ಪ್ರಸಾರವಾಯಿತು.

ಆಗ ಮಗಧ, ವಜ್ಜಿಯೊ ಮೊದಲಾದ ಕಡೆಗಳಿಂದ ಪಾವಾಪುರಿಯಲ್ಲಿ ನಡೆಯಲಿರುವ ಮಹಾಯಜ್ಞವನ್ನು ಅನುಭವಿಸಲೆಂದು ಹಲವು ಜನರು ಸೇರಿದ್ದರು. ಅವರಲ್ಲಿ ಕೆಲವರು ರಾಜನ ದರ್ಶನಕ್ಕೆ ಮುನಿಸಂಘವೇ ಬರುವುದು ತಕ್ಕುದೆಂದು ವಾದಿಸಿದರು. ಅವರಿಗೆ ಹಸ್ತಿಪಾಲನು ತಾನೇ ಅರ್ಹತರ ದರ್ಶನಕ್ಕೆ ಹೋಗುವುದು ಹೇಗೆ ಉಚಿತವೆಂಬುದನ್ನು ತಿಳಿಸಿ ಹೇಳಿದನು. ಅದರಿಂದ ಎಲ್ಲರೂ ಸೇರಿ ಭಗವಂತನ ದರ್ಶನಕ್ಕೆ ಸಮವಸರಣ ಇರುವಲ್ಲಿಗೆ ತೆರಳಿದರು.

ಬಂದವರೆಲ್ಲರೂ ತಮ್ಮ ತಮ್ಮ ಮನಃಪ್ರಸಾದಕ್ಕನುಗಣವಾಗಿ ಭಗವಂತನೊಡನೆ ನುಡಿದೋ ನಮಸ್ಕರಿಸಿಯೋ ಒಂದೊಂದು ಕಡೆ ಕುಳಿತರು.

ಒಂದು ಕಡೆಗೆ ಹಸ್ತಿಪಾಲನು ಕುಳಿತು, ಮತ್ತೊಮ್ಮೆ ಭಗವಂತನಿಗೆ ವಂದಿಸಿ, ಹೀಗೆಂದು ಕೇಳಿದನು.

"ಭೋ ! ಭಗವಾನ್ ! ತಾವು ಯಜ್ಞದ ವಿವಿಧ ವಿಧಾನಗಳನ್ನು ಅರಿತಿರುವಿರೆಂದು ಕೇಳಿರುವೆ. ನಮ್ಮಲ್ಲಿಯಂತೂ ನಾಳೆಗೇ ಯಜ್ಞ ಆರಂಭವಾಗಲಿದೆ. ಅದಕ್ಕಾಗಿ ಹಲವು ಜನ ಬ್ರಾಹ್ಮಣರು ಇಲ್ಲಿ ನೆರೆದಿದ್ದಾರೆ! ನಮಗೆಲ್ಲ ಯಜ್ಞದ ಸ್ವರೂಪವನ್ನು ತಿಳಿಸಿ ಕೊಡಬೇಕಾಗಿ ಪ್ರಾರ್ಥಿಸುವೆ.."

"ಅದರಿಂದ ರಾಜ, ಕಿವಿಗೊಟ್ಟು ಕೇಳು, ಸಾಧುವಾದುದನ್ನು ಮನಸ್ಸಿನಲ್ಲಿಡು, ಅದರಂತೆ ಆಚರಿಸು .... " ಎಂದು ಭಗವಂತನು ಹೇಳಲಿಕ್ಕೆ ಆರಂಭಿಸಿದನು.

"ಬಹು ದಿನಗಳ ಹಿಂದಿನ ಸಂಗತಿಯೇನಲ್ಲ ಈ ನಿಮ್ಮ ರಾಜ್ಯದಲ್ಲೆಲ್ಲ ಭಯಂಕರ ಬರಗಾಲ ಪಸರಿಸಿತು. ಮೂರು ವರ್ಷಗಳ ವರೆಗೆ ಮಳೆಯೇ ಹೋಯಿತು. ಕೆರೆ ಕಾಲುವೆಗಳೆಲ್ಲ ಬತ್ತಿದುವು. ಜನರಿಗೆ ಕುಡಿಯಲಿಕ್ಕೆ ನೀರಿಲ್ಲ. ದನಕರುಗಳು ನಿಂತಲ್ಲಿಯೇ ಪ್ರಾಣ ಬಿಟ್ಟವು. ದವಸ ಧಾನ್ಯಗಳೆಲ್ಲ ತೀರಿ ಹೋದವು. ಜನ ಬಾಯ್ ಬಾಯ್ ಬಿಡಹತ್ತಿದರು. ಸಮೃದ್ಧವಾದ ನಾಡುಗಳಿಗೆ ತೆರಳಹತ್ತಿದರು. ಊರು, ನಗರ, ದೇಶಗಳೆಲ್ಲ ಹಾಳು ಹಾಳು ಸುರಿಯಹತ್ತಿದುವು. ದಾರಿ ದಾರಿಗೆ ಗೋವುಗಳು ಬಿದ್ದು ಸತ್ತುವು. ಪ್ರದೇಶವೆಲ್ಲ ಹೊಲಸು ಹೊಲಸು ಆಯಿತು. ಜನರಿಗೆ ಅನ್ನವಿಲ್ಲ, ಒಳ್ಳೆಯ ಹವೆ ಇಲ್ಲ, ಸಾಂಸರ್ಗಿಕ ಬೇನೆಗಳು ಎಲ್ಲೆಡೆಗೂ ಹಬ್ಬಿದುವು. ಜನ ಕಂಗಾಲ ಆದುದು ! ಆದರೂ ಸುತ್ತಲಿನ ಸೀಮೆಯ ಜನರೆಲ್ಲ ಸುಮ್ಮನಿದ್ದರು. ತಮ್ಮ ತಮ್ಮ ರಾಜ್ಯಗಳ ವ್ಯವಸ್ಥೆಯಲ್ಲಿಯೇ ತೊಡಗಿದ್ದರು. ತಮ್ಮ ಭಾಗದಲ್ಲಿಯೂ ಇಂಥ ಬರಗಾಲ ಬಂದರೆ ಬೇಕೆಂದು ಧಾನ್ಯಗಳನ್ನು ಸಂಗ್ರಹಿಸಹತ್ತಿದರು. "

"ಆಗಲೇ ಅಲ್ಲವೆ ನಾವು ವಿಶಾಲಾನಗರಿಯಿಂದ ಇಲ್ಲಿಗೆ ಬಂದುದು ?"

ಆರ್ಯಿಕಾದ ಸಂಘ ನಾಯಕಿ ಸುಜೇಷ್ಠೆ ಭಗವಂತನಿಗೆ ಮೆಲ್ಲನೆ ಕೇಳಿದಳು. ಆಗ ಭಗವಾನ್ ವರ್ಧಮಾನನು ಸುಜೇಷ್ಠೆಯ ಕಡೆಗೆ ಹೊರಳಿ ಹೀಗೆಂದನು:

"ಆಗ ವಿಶಾಲಾ ನಗರಿಯಲ್ಲಿ ನಡೆದ ಸಂಗತಿಯನ್ನು ವಿವರಿಸು ತಾಯೀ..! ನೀನೇ ನನಗಿಂತ ಚೆನ್ನಾಗಿ ಹೇಳಬಲ್ಲೆ. ಆಗ ನಾನು ಭಾವ ಪರವಶನಾಗಿದ್ದೆ. ನಡೆದ ಸಂಗತಿಯನ್ನು ಸರಿಯಾಗಿ ಹೇಳಲಾರೆ.. ಸೇವೆಯೊಂದೇ ಆಗ ನನ್ನ ಧ್ಯೇಯವಾಗಿತ್ತು !"

"ಅಹುದು; ಅಂಥ ಉತ್ಕಟ ಸೇವಾ ಧರ್ಮವನ್ನು ಅಂದು ಆಚರಿಸಿದಿರೆಂದೇ ಇಂದು ತೀರ್ಥಂಕರರೆನಿಸಿದಿರಿ. ಸಮಕ್ತ್ವ ಸಂಸಿದ್ಧರೆನಿಸಿದಿರಿ !" ಎಂದು ಸುಜೇಷ್ಠೆ ಮುಂದೆ ವಿವರಿಸತೊಡಗಿದಳು :– "ಅಂದು ಚೇಟಕ ರಾಜರ ಆಸ್ಥಾನದಲ್ಲಿ ಈ ಹಸ್ತಿಪಾಲ' ರಾಜನ ಬೇಡಿಕೆ ಬರುವಷ್ಟರಲ್ಲಿ

ಅಲ್ಲಿಯ ಪರಿಸ್ಥಿತಿಯೇ ಬದಲಾಗಿದ್ದಿತು. ಎಲ್ಲರೂ ತಮ್ಮ ತಮ್ಮಲ್ಲಿ ಧಾನ್ಯಗಳನ್ನು ಸಂಗ್ರಹಿಸುವವರೇ. ಆ ಮೊದಲೇ ಪಾವಾಪುರಿಯ ನಾಡಿನಿಂದ ಹಲವು ಜನ ಸಿರಿವಂತರು ಹಿಂಡು ಹಿಂಡಾಗಿ ವಿಶಾಲನಗರಿಗೆ ಬಂದು ನೆಲೆಸಿದ್ದರು. ಅವರಿಂದ ಪಾವಾರಾಜ್ಯದ ಬಡ ಜನರ ಸ್ಥಿತಿಗತಿಗಳೆಲ್ಲ ಜನರ ಕಿವಿಗೆ ಬಿದ್ದಿದ್ದುವು. ಬರಗಾಲದ ಭೀಕರ ಸ್ವರೂಪ ಗೊತ್ತಾಗಿದ್ದಿತು. ಅದರಲ್ಲೂ ಮಗಧದ ಬಲಿಷ್ಠ ಸಮ್ರಾಟ್ ಬಿಂಬಸಾರನ ದಾಳಿಯ ಹೆದರಿಕೆಯೊಂದು ಕ್ಷಣಕ್ಷಣಕ್ಕೂ ಹೆಚ್ಚುತ್ತಲಿದ್ದಿತು. ಅದಕ್ಕಾಗಿಯೂ ಹುಲ್ಲು ಹಾಗೂ ಕಾಳುಕಡಿಗಳನ್ನು ಸಂಗ್ರಹಿಸಬೇಕಾಗಿತ್ತು, ಗಣ ರಾಜ್ಯರಿಗೆ. ಇಂಥ ಕಾಲದಲ್ಲಿ ಹಸ್ತಿರಾಜರ ಬೇಡಿಕೆ ಸಭೆಯು ಇದುರಿಗೆ ಬಂದಿತು. ಕೂಡಲೆ ಎಲ್ಲ ಗಣರಾಜರೂ ಸಹಾಯ ನೀಡುವ ವಿಚಾರವನ್ನು ನಿರಾಕರಿಸಿದರು. ಆಗ ಮಹಾವೀರನ ಮಾತು ರಾಜ ಸಭೆಯಲ್ಲಿ ನಡೆಯುತ್ತಿದ್ದಿತು. ಈಗಾಗಲೇ ತನ್ನ ಶ್ರಾವಕ ಜೀವನದಿಂದ – ಸಮ್ಯಕ್ತ್ವಾಚರಣೆಯಿಂದ – ಎಲ್ಲರ ಮೇಲೂ ಪ್ರಭಾವ ಬೀರಿದ್ದರು. ಅದರಿಂದ ಧಾನ್ಯದ ಸಹಾಯಕ್ಕಾಗಿಯೂ ಬಡಜನರ ಸೇವಾ ಸಂಘಗಳ ಸಂಘಟನೆಗಾಗಿಯೂ ಸಿದ್ಧರಾಗಿ ಮಹಾವೀರರೇ ನಿಂತರು. ಹಳ್ಳಿ ಹಳ್ಳಿ ತಿರುಗಿದರು. ಸಹಾಯ ಬೇಡಿದರು. ತರುಣರನ್ನು ಸೇರಿಸಿದರು. ಪಾವಾನಗರಿಯ ರಾಜ್ಯವನ್ನು ಬರಗಾಲದಿಂದ ಸಂರಕ್ಷಿಸಲು ಧಾವಿಸಿದರು. ಅಲ್ಲಿ ನಿಲ್ಲದೆ ಜನ ಧಾನ್ಯಗಳೊಡನೆ ಇತ್ತ ಬಂದರು.

ಇಷ್ಟು ಹೇಳಿ ಸುಜ್ಯೇಷ್ಠೆಯು ಸುಮ್ಮನಾದಳು. ಮುಂದೆ ಭಗವಂತನೇ ಹೇಳಲಾರಂಭಿಸಿದ:

“ಇಲ್ಲಿ ಬರುವುದರಲ್ಲಿ ಬರಗಾಲದ ಭೀಕರತೆಯು ಎಲ್ಲೆಡೆಗೂ ಪಸರಿಸಿದ್ದಿತು. ದನಕರುಗಳು ಹಾದಿ ಬೀದಿಗೆ ಬಿದ್ದು, ಸಾಯಲಾರಂಭಿಸಿದ್ದುವು. ಜನರೆಲ್ಲ ಕಂಗಾಲಾಗಿದ್ದರು. ಎರಡು ಮೂರು ವರ್ಷಗಳಿಂದ ಮಳೆಯಿಲ್ಲ, ಬೆಳೆಯಿಲ್ಲ. ಅಡವಿಗಳು ಬೀಜವನ್ನು ಕಾಣದೆ ಇದ್ದುವು. ಕೆರೆ ತೊರೆಗಳೆಲ್ಲ ಬತ್ತಿದ್ದುವು. ಆದೊಂದು ಪ್ರಕೃತಿಯ ವೈಪರಿತ್ಯ ನಡೆದು ಹೋಗಿದ್ದಿತು. ಆದರೆ ಕೆಲವರ ಕಲ್ಪನೆಯೇ ಬೇರೆ. ಮಳೆರಾಯ ಪಾವಾಪುರಿಯ ಜನರ ಮೇಲೆ ಕೋಪಿಸಿದ್ದನಂತೆ. ಅವನ ಶಾಂತಿಗಾಗಿ ಅನೇಕ ಪಶುಗಳನ್ನೂ ನರರನ್ನೂ ಆಹುತಿ ಹಾಕಿ ಯಜ್ಞಮಾಡಬೇಕೆಂದು ಯೋಜನೆ ಹೂಡಿದ್ದರು.

ಇಂದಿನಂತೆಯೇ ಎಲ್ಲ ಸಿದ್ಧತೆ ನಡೆದು ಹೋಗಿದ್ದಿತು ಅಂದು ನಾವು ಬರಲಿಕ್ಕೆ ತುಸು ವಿಲಂಬವಾಗಿದ್ದರೂ ಸಾವಿರಾರು ಪ್ರಾಣಿಗಳ ವಧೆ ಯಾಗುವುದರಲ್ಲಿತ್ತು. ಅದು ಅಂದು ನಿಂತಿತು. ಇಂದೂ ಕೂಡ ಅದೇ ಸಂದರ್ಭ ನಮಗೆ ಈ ಸಂಗತಿ ತಿಳಿದೊಡನೆಯೇ ಸಂಘದೊಡನೆ ಇತ್ತ ಬಂದೆವು. ಈ ಹಿಂಸಾಕೃತಿಯು ಯಜ್ಞವಲ್ಲ ಜನ ಅಜ್ಞಾನದಿಂದ ಇದನ್ನು ಆಚರಿಸಲಿದೆ ಯಜ್ಞ ಎನ್ನುವದೊಂದು ವಿಧಿ ಅದೊಂದು ವ್ರತ ಅದರಲ್ಲಿ ನಮ್ಮ ಆತ್ಮ ಪರಿಶುದ್ಧವಾಗಬೇಕು ಸಂಘಜೀವನಕ್ಕಾಗಿ ವ್ಯಕ್ತಿ ತ್ಯಾಗಿಯಾಗ ಬೇಕು. ಆ ತ್ಯಾಗ ಯಜ್ಞವೆನಿಸುವುದು ಇಂಥ ಯಜ್ಞ ನಿಜವಾದ ಯಜ್ಞ ಅದು ಲೋಕಹಿತಕಾರಿಯಾದ ಯಜ್ಞ.. ಬ್ರಾಹ್ಮಣರ ಋಗ್ವೇದದಲ್ಲಿಯೂ ಕೂಡ ಶುನಃಶೇಫನ ಕತೆಯಲ್ಲಿ ಸಹ ಈ ಅಹಿಂಸಾ ಯಜ್ಞದ ಪ್ರತಿಪಾದ ನೆಯಿದೆ.."

ಇಂತಹ ಅಹಿಂಸಾ ಯಜ್ಞವನ್ನು ಮಾಡಿದರೆ – ಮಾಡಿಸಿದರೆ - ಸತ್ತ ಮೇಲೆ ಸ್ವರ್ಗದಲ್ಲಿ ಒಳ್ಳೆಯ ಗತಿಯು ಸಿಕ್ಕುವುದೆಂದು ಭಗವಂತರು ಹೇಳು ವರೋ ? "

ಹಸ್ತಿಪಾಲರಾಜನು ಕೇಳಿದನು.

"ಅಹುದು; ಸ್ವರ್ಗದಲ್ಲಿ ಇಂಥ ಯಜ್ಞದಿಂದ ಸುಗತಿ ಸಿಕ್ಕುವದೆಂದು ನಾನು ನಂಬುವೆನು. ಅದರಂತೆ ಆಚರಿಸಲು ಹೇಳುವೆನು. "

"ಇನ್ನೂ ಸುಲಭವಾದ ಯಜ್ಞ ಕ್ರಮಗಳಿವೆಯೇ ? "

"ಇರುತ್ತವೆ. "

"ಭೋ ಭಗವನ್, ಅಂತಹ ಯಜ್ಞ ಯಾವುದು ? "

"ರಾಜ, ಆಚಾರವಂತರಾದ ನಿರ್ಗ್ರಂಥರಿಗೆ ಕೊಟ್ಟ ನಿತ್ಯದಾನಗಳು ಇವು ಅನುಕೂಲ ಯಜ್ಞಗಳಾಗಿವೆ. "

"ಮತ್ತೆ ಯಾವ ಯಾವ ಆಚಾರಗಳು ಯಜ್ಞದ ಫಲಗಳನ್ನು ಕೊಡುವವು ? "

"ಪ್ರಸನ್ನ ಚಿತ್ತದಿಂದ ಆತ್ಮಧ್ಯಾನ ಮಾಡುವುದು. ಪ್ರಾಣಿ ಹತ್ಯೆ ಯಲ್ಲಿ ವಿಮುಖನಾಗುವುದು; ಕೊಡದುದನ್ನು ತೆಗೆದುಕೊಳ್ಳದೆ ಇರುವುದು; ಕಾರ್ಯ ಸಾಧನೆಯಲ್ಲಿ ಮಿಥ್ಯಾಚಾರವಿಲ್ಲದಿರುವುದು; ಸುಳ್ಳಾಡದಿರುವುದು;

ಪ್ರಮಾದ ರಹಿತನಾಗಿರುವುದು; ಮದ್ಯ ಮಾಂಸ ಮಧುಗಳನ್ನು ವರ್ಜಿಸು ವುದು; ಶಿಕ್ಷಾವ್ರತಗಳನ್ನು ಪ್ರಸನ್ನ ಚಿತ್ತನಾಗಿ ಸ್ವೀಕರಿಸುವುದು - ಇವೆಲ್ಲ ಒಳ್ಳೆಯ ಯಜ್ಞಗಳು.''

ಹೀಗೆನ್ನಲು ಹಸ್ತಿಪಾಲರಾಜನು ಭಗವಂತನಿಗೆ ಹೀಗೆ ಅಂದನು:—

''ಬಹಳ ಉತ್ತಮ ಭೋ ಭಗವಾನ್! ಬಹಳ ಉತ್ತಮ ಭೋ ಭಗ ವಾನ್! ಮುಚ್ಚಿದ್ದುದನ್ನು ಬಿಚ್ಚಿದಂತೆ, ಮೂಢನಿಗೆ ಮಾರ್ಗತೋರಿಸಿ ಕೊಟ್ಟಂತಾಯಿತು. ಪೂಜ್ಯ ಮಹಾವೀರರಿಂದ ಧರ್ಮವು ಪ್ರಕಾಶಿತವಾ ಯಿತು. ಭಗವಂತನನ್ನೂ ನಿರ್ಗಂಥ ಸಂಘವನ್ನು ನಾನು ಶರಣು ಹೋಗು ವೆನು. ಇಂದಿನಿಂದ ಪ್ರಾಣವಿರುವವರೆಗೂ ಶರಣಾಗತನಾದ ಉಪಾಸಕ ನೆಂದು ನನ್ನನ್ನು ಸ್ವೀಕರಿಸಲಿ. ಭೋ ಭಗವಾನ್ ಮಹಾವೀರ! ಈ ಮುನ್ನೂರು ಗೂಳಿ, ಮುನ್ನೂರು ಹಸು, ಮುನ್ನೂರು ಕುರಿ, ಮುನ್ನೂರು ಆಡು, ಮುನ್ನೂರು ಕೋಳಿಗಳನ್ನು ನಾನೇ ಬಿಡಿಸುವೆನು. ಜೀವಧಾನ ಕೊಡುವೆನು. ಹಸರು ಹುಲ್ಲು ತಿನ್ನಲಿ, ಶೀತಲವಾದ ನೀರು ಕುಡಿಯಲಿ, ತಿರುಗಾಡಲಿ.''

ಆ ಮೇಲೆ ಅರಸನಿಗೆ ಅನೇಕ ಧಾರ್ಮಿಕ ಕತೆಗಳನ್ನು ಭಗವಂತನು ಹೇಳಿದನು. ಸಾಯಂಕಾಲವಾಗುತ್ತಿರಲು ಸಾಮಾಯಕಕ್ಕೆಂದು ಮುನಿಸಂ ಘವು ಭಗವಂತನನ್ನು ವಂದಿಸಿ ಎದ್ದಿತು.

೨

ಇಂದು ಬಹುದಿನಗಳ ಮೇಲೆ ಭಗವಾನ್ ಮಹಾವೀರನು ತನ್ನ ಸಂಘ ಸಹಿತ ವಿಶಾಲಾನಗರಿಗೆ ಆಗಮಿಸಿದ್ದನು. ಆ ಸುಂದರವಾದ ದ್ಯುತಿ ಪಲಾಶ ವನದಲ್ಲಿಯೇ ಸಮವಸರಣ ಸಭೆ ನಡೆಯುತ್ತಿದ್ದಿತು. ಒಮ್ಮೆ ಭಗ ವಂತನ ಉಪದೇಶ ಮುಗಿದ ಮೇಲೆ ಯಾರೋ ಒಬ್ಬರು ಕೇಳಿದರು.:—

''ಪ್ರಪಂಚದಲ್ಲಿ ತನಗೆ ಲಭಿಸಬೇಕಾದುದು ಯೋಗ್ಯ ಪ್ರಯತ್ನ ಮಾಡಿಯೂ ಲಭಿಸುವದಿಲ್ಲವೇಕೆ? ಹಾಗೆ ಆದಾಗ ಮನುಷ್ಯನು ಸಂಸಾರ ದಲ್ಲಿ ವಿರಕ್ತಿಯನ್ನು ತಳೆಯುವದು ಸಹಜವೋ ಹೇಗೆ?''

ಭಗವಂತ ಸ್ವಲ್ಪ ನಿಧಾನಿಸಿ, ತನ್ನ ದಿವ್ಯ ಧ್ವನಿಯಲ್ಲಿ ಹೀಗೆ ಹೇಳ ಲಾರಂಭಿಸಿದ:—

"ಕರ್ಮದ ವಿಚಿತ್ರ ಸ್ವಭಾವವನ್ನು ಅರಿತವರಿಗೆ ಇದು ಆಶ್ಚರ್ಯಕರವೆನಿಸಲಿಕ್ಕಿಲ್ಲ. ನಾವು ಇಹದಲ್ಲಿ ಇಷ್ಟಾರ್ಥವನ್ನು ಸಾಧಿಸಿಕೊಳ್ಳುವದಕ್ಕೆ ಎಷ್ಟು ಪುರುಷಾರ್ಥ ಮಾಡಿದರೂ ಸಹ ಪೂರ್ವಾರ್ಜಿತ ಕರ್ಮವು ನಮಗೆ ಅನುಕೂಲವಿರದಿದ್ದರೆ ಅದು ಸಿಗದು. ಅಂಥವೇಳೆಯಲ್ಲಿ ಕ್ಷಣಿಕ ವೈರಾಗ್ಯ ತಳೆಯುವುದು ಸರಿಯಲ್ಲ. ನಿಜವಾಗಿ ವಿರಾಗ ಭಾವನೆಯು ಮನದಲ್ಲಿ ಮೂಡಿದ್ದರೆ ಅದು ಫಲಕಾರಿಯಾಗುವುದು. ಇದಕ್ಕೆ ಎರಡು ಚಿತ್ರಗಳು ನಮ್ಮ ಕಣ್ಣೆದುರಿಗೆ ಇವೆ.

ಭಗವಂತನು ಮಾತನ್ನು ತಡೆದು ಸಂಘದಲ್ಲಿ ಅತ್ತಿತ್ತ ಹೊರಳಿ ನೋಡಿದನು. ಆರ್ಯೆ ಸುಜ್ಯೇಷ್ಠೆ ಎಲ್ಲಿಯೂ ಕಾಣಲಿಲ್ಲ. ಬೇರೆಡೆಗೆ ಧ್ಯಾನಕ್ಕೆ ಕುಳಿತಿರಬೇಕೆಂದು ಎನಿಸಿತು.

"ಭಗವಾನ್ ಆ ಉದಾಹರಣೆಗಳು ಯಾವವು ?"

ಶ್ರಾವಕ ಮುಖ್ಯನು ಮುಂದಿನ ಸಂಗತಿಯನ್ನು ಕೇಳಲು ಕುತೂಹಲವುಳ್ಳವನಾಗಿ ಕೇಳಿದ. ಭಗವಂತ ಹೇಳತೊಡಗಿದ:

"ಒಬ್ಬ ರಾಜ ಕುವರಿ. ಲೋಕೋತ್ತರ ಸುಂದರಿ. ನಾಡಿನೊಳಗಿನ ಯಾವ ರಾಜ ಮಹಾರಾಜರೂ ಅವಳನ್ನು ಮದುವೆಯಾಗಲು ನಾ ಮುಂದೆ ನೀ ಮುಂದೆ ಎಂದು ಬರುತ್ತಿದ್ದರು. ಅವಳ ತಂದೆಗೆ ಮಗಳನ್ನು ಎಂಥ ವರನಿಗೆ ಕೊಡಬೇಕೆಂಬ ಬಗ್ಗೆ ಒಂದು ಕಲ್ಪನೆ ಇದ್ದಿತು. ಅದರಂತೆ ಅವರು ವರ್ತಿಸುತ್ತಿದ್ದರು. ಅದಕ್ಕೆ ವಿಪರೀತವಾಗಿ ಮಗಳ ಮನೋರಥವಿದ್ದಿತು. ಯಾರಿಗೆ ತನ್ನನ್ನು ತಂದೆಯು ಮದುವೆ ಮಾಡಿ ಕೊಡಲಾರನೋ ಅಂಥವರನ್ನು ಅವಳು ಮೋಹಿಸಿದಳು! ಅವಳ ಕರ್ಮ ವಿಚಿತ್ರ. ಕೈಗೆ ನಿಲಕಮದೂ ಒಂದು ಕ್ಷಣ ಸಿಗುವಂತಾಯಿತು. ಅವಳ ಪ್ರಿಯಕರನೂ ಅವಳನ್ನಲ್ಲದಿದ್ದರೂ ಅವಳ ತಂಗಿಯ ರೂಪ ಗುಣಗಳಿಗೆ ಮುಗ್ಧನಾಗಿದ್ದನು. ಅವಳನ್ನು ಪಡೆಯಲೂ ಯತ್ನಿಸುತ್ತಿದ್ದನು. ಅಕ್ಕತಂಗಿಯಂದಿರು ತದ್ ರೂಪರಾದುದರಿಂದ ಆತ ಭ್ರಮೆಗೆ ಒಳಗಾದ. ತನ್ನ ಪ್ರೇಯಸಿಯೆಂದೇ ಭಾವಿಸಿ ಹಿರಿಯಳನ್ನು ಸೇರಿದ. ಈ ಗುಪ್ತ ಮಿಲನ ಬಹಳ ಮುಂದರಿಯಿತು. ಯಾರಿಗೂ ಗೊತ್ತಿಲ್ಲದಂತೆ ಇಬ್ಬರೂ ಕೂಡಿ ವಿಹರಿಸಹತ್ತಿದರು. ಕೂಡಿ ಕಾಲಕಳೆಯಹತ್ತಿದರು. ಇನ್ನೇನು ಸತಿ ಪತಿಯರಂತೆ ವರ್ತಿಸಹತ್ತಿದರು. ಮುಂದೆ

ಒಂದು ದಿನ ಅವಳ ಪ್ರಿಯಕರ ಅವಳ ಕೈಯನ್ನು ಬಿಟ್ಟು ಅವಳ ತಂಗಿಯ ಕೈ ಹಿಡಿದು ಬಿಟ್ಟ !

ಆಯಿತು; ಈ ಕನ್ನೆಯ ಗತಿ ಏನು ? ಇನ್ನೊಬ್ಬರನ್ನು ಮದುವೆ ಯಾಗಿ ಬಾಳಬೇಕೆ ? ಶೀಲ, ಪಾತಿವ್ರತ್ಯಗಳ ಗತಿ ಏನು ? ತನ್ನ ಭಗ್ನ ಪ್ರಣಯದ ಕಥೆಯನ್ನು ಯಾರಿಗೆ ಹೇಳುವುದು ? ಹೇಳಿದರೆ ಈ ನಮ್ಮ ಸಮಾಜದಲ್ಲಿ ಅವಳಿಗೆ ಇರಲಿಕ್ಕೆ ನೆಲೆಯುಂಟೆ ? ಇಂಥ ಜೀವಿಗೆ ಬಾಳಿನ ದಾರಿ ಏನು ? ಯಾವುದೂ ತಿಳಿಯದೆ ಕಂಗಾಲಾದಳು ಬಾಲೆ. ಕೆಲದಿನ ಹುಚ್ಚಳಂತೆ ಭ್ರಮಿಸಿದಳು ! ಆಗಮಗಳನ್ನು ತಿರುವಿ ಹಾಕಿದಳು, ಧ್ಯಾನಕ್ಕೆ ಕುಳಿತು ನೋಡಿದಳು, ದೇವ ಸಾನಿಧ್ಯ ಸಾರಿದಳು. ಏನೂ ಆಗಲಿಲ್ಲ. ಪ್ರಣಯ ಸಮಾಧಿಗೆ ತಿರು ತಿರುಗಿ ಹೂವೇರಿಸದೆ ಮನಸ್ಸು ಇನ್ನೇನನ್ನೂ ಮಾಡಲಿಲ್ಲ. ಏಕಾಂತ ಅವಳಿಗೆ ಇನ್ನಿಷ್ಟು ಭಯಾನಕವೆನಿಸಿತು.

ಅಂಥ ಸಂದರ್ಭದಲ್ಲಿ ನಮ್ಮ ನದಿಗೆ ಹುಚ್ಚು ಪ್ರವಾಹವೊಂದು ಬಂದಿತು, ಅವಳ ಪ್ರಣಯ ಪ್ರವಾಹಕ್ಕೆ ಬಂದಂತೆ ಎಲ್ಲೆಡೆಗೂ ಹಾಹಾಕಾರ ಹಲವು ಜನರ ಮನೆ ಮಠಗಳು ತೇಲಿ ಹೋದುವು. ಮಕ್ಕಳು ಮರಿಗಳು ಮುಳು ಗಿದುವು. ಹೊಲಗದ್ದೆಗಳು ಮಾಯವಾದುವು. ಎಲ್ಲೆಡೆಗೂ ಒಂದೆರಡು ದಿನ ಗಳ ವರೆಗೆ ನೀರೇ ನೀರು. ಬಂದ ನೀರು ಬಂದಂತೆ ಇಳಿಯಿತು. ಜನರ ಸ್ಥಿತಿ ಮಾತ್ರ ಮೊದಲಿರುವಂತೆ ಇರಲಿಲ್ಲ. ಎಲ್ಲೆಡೆಯಲ್ಲಿ ನಿರಾಶ್ರಿತರ ಗುಂಪು .... ನಾಲಂದ ವಿದ್ಯಾಲಯದಿಂದ ವಿದ್ಯಾರ್ಥಿಗಳ ಗುಂಪೊಂದು ಜನರ ಸೇವೆಗೆ ಮುಂದಾಗಿ ಬಂದಿತು. ಅಂಥ ಕನಿಕರ ಸ್ಥಿತಿಯಲ್ಲಿ ಯಾರಿಗೆ ಸುಮ್ಮನೇ ಕೂಡಲಿಕ್ಕೆ ಆದೀತು. ಇಲ್ಲಿರುವ ತರುಣರೆಲ್ಲ ಸೇರಿ ನಾವೂ ಒಂದು ಸೇವಾ ಮಂದಿರವನ್ನು ತೆರೆದೆವು. ಅದರಲ್ಲಿ ದಿಕ್ಕಿಲ್ಲದವರ ಊಟ ವಸತಿಗಳ ಏರ್ಪಾಡು ಮಾಡಿದೆವು. ಈ ಕಾರ್ಯದಲ್ಲಿ ನಮ್ಮ ಆ ಭಗ್ನ ಹೃದ ಯಿಯಾದ ಅಕ್ಕನನ್ನು ತೊಡಗಿಸಿದೆವು.

ಈ ಕಾರ್ಯ ಹಗಲಿರುಳೂ ಮಾಡುವಂತಹದು. ಎದುರಿಗೆ ಬೆಟ್ಟ ದಷ್ಟು ಕೆಲಸ. ನಿರಾಶ್ರಿತರಿಗೆ ಇರಲು ಗುಡಿಸಲುಗಳನ್ನು ಕಟ್ಟಿಕೊಡು ವುದು. ಅವರಿಗೆ ಅನ್ನ ಬೇಯಿಸಿ ಹಾಕುವುದು. ತಂದೆ ತಾಯಂದಿರನ್ನು ಕಳೆದುಕೊಂಡ ಮಕ್ಕಳನ್ನು ಸಲಹುವುದು. ಅವರಿಗೆ ಬಟ್ಟೆ ಬರೆಗಳನ್ನು ಹೊಲೆದು ಕೊಡುವುದು. ಒಂದೋ ಎರಡೋ ಸಾವಿರಾರು ಕೆಲಸಗಳು.

ಅದರಲ್ಲೂ ಅಲ್ಲಲ್ಲಿ ಸಾಂಸರ್ಗಿಕ ರೋಗವೊಂದು ಪಸರಿಸಿತು. ಜನರು ದಾರಿ ಬೀದಿಗಳಲ್ಲಿ ಬಿದ್ದು ಸಾಯತೊಡಗಿದರು. ಆಗ ರೋಗಿಗಳ ಆರಯಿಕೆ ಮಾಡುವ ಹೊಣೆಯೂ ಅವಳ ಮೇಲೆಯೇ ಬಿದ್ದಿತು. ಹೆಂಗಸರು ಬೇನೆಯವರನ್ನು ಜೋಪಾನ ಮಾಡಲಿಕ್ಕೆ ಗಂಡಸರಿಗಿಂತ ಬಲ್ಲವರು. ರಾಜಪುತ್ರಿಯೇ ಮುಂದಾಗಿ ಈ ಎಲ್ಲ ದೀನ ಪತಿತರ ಸೇವೆ ಮಾಡಹತ್ತಿದ ಮೇಲೆ ಇನ್ನೂ ಹಲವು ಜನ ಹುಡಿಗೆಯರು ಮುಂದೆ ಬಂದರು. ಇಂಥವರ ಒಂದು ಗುಂಪು ಸೇರಿತು. ಅಲ್ಲಲ್ಲಿ ರುಗ್ಣಾಲಯಗಳನ್ನು ತೆರೆಯಲಾಯಿತು. ಜನರನ್ನು ಸಂರಕ್ಷಿಸಲಾಯಿತು. ನಮ್ಮ ಎಷ್ಟೋ ಕೆಲಸ ಹಗುರಾಯಿತು.

ಮಹಾಪೂರ ಮೂರು ದಿನ ಬಂದು ಕೆಡಸಿದ ನಾಡನ್ನು ತಿರುಗಿ ಮೊದಲಿನಂತೆ ವ್ಯವಸ್ಥೆಗೊಳಿಸಲು ಮೂರು ವರ್ಷಗಳೇ ಹಿಡಿದುವು. ಇಷ್ಟು ಸಮಯ ಕಷ್ಟಪಟ್ಟು ಇತ್ತ ವ್ಯವಸ್ಥೆಗೊಳಿಸುವಷ್ಟರಲ್ಲಿ ಅತ್ತ ಪಾವಾಪುರಿಯ ಹಸ್ತಿಪಾಲನ ರಾಜ್ಯದಲ್ಲಿ ಭೀಕರ ಬರಗಾಲಕ್ಕೆ ಆರಂಭವಾಯಿತು. ಜನ ಕಂಗೆಟ್ಟರು. ಸಹಾಯಕ್ಕಾಗಿ ಗಣರಾಜರ ಮುಖ್ಯಸ್ಥರಾದ ಚೇಟಕ ಮಹಾರಾಜರ ಕಡೆಗೆ ಧಾವಿಸಿ ಬಂದರು ! ಈಗಾಗಲೇ ಇಲ್ಲಿ ನೆರೆಯ ಹಾವಳಿಯಿಂದ ರಾಜ್ಯದ ಕೋಶ ಸವೆದಿದ್ದಿತು. ಅದರಲ್ಲೂ ಮಗಧ ಸಮ್ರಾಟ್‌ನ ದಾಳಿಯ ಹೆದರಿಕೆಯೊಂದು ಕ್ಷಣ ಕ್ಷಣಕ್ಕೂ ಹೆಚ್ಚುತ್ತಲಿತ್ತು.... ಆ ಸನ್ನಾಹದಲ್ಲಿ ಗಣರಾಜ್ಯವಿತ್ತು. ಇಂದಿಗೂ ಇದೆ. ಅದರಿಂದ ಹಸ್ತಿಪಾಲನ ಸೀಮೆಗೆ ರಾಜ್ಯ ಸಹಾಯ ನೀಡುವುದನ್ನು ನಿರಾಕರಿಸಿತು.

ರಾಜ್ಯಸಂಸ್ಥೆ ನಿರಾಕರಿಸಿತೆಂದು, ತಿಳಿದ ಜನಕ್ಕೆ ಸುಮ್ಮನೇ ಕೂಡಲಿಕ್ಕೆ ಆಗುವುದೇ ? ಇಲ್ಲಿ ನಮ್ಮ ಕೈಯೊಳಗಿನ ಕೆಲಸವೂ ಮುಗಿಯುತ್ತ ಬಂದಿದ್ದಿತು. ಜನರ ಜೀವನವೂ ಸುವ್ಯವಸ್ಥೆಗೊಂಡಿದ್ದಿತು. ಅದರಿಂದ ಆ ಸೀಮೆಯ ಕೆಲಸವನ್ನು ಕೈಯಲ್ಲಿ ತಕ್ಕೊಂಡೆವು. ಅದಕ್ಕೂ ಆ ರಾಜಪುತ್ರಿಯೇ ಮುಂದಾಗಿ ನಿಂತಳು. ನಮ್ಮ ಬಲಗೈಯಂತೆ ಕೆಲಸ ಮಾಡಿದಳು. ಪುರುಷರನ್ನು ನಾಚಿಸುವಂತೆ ಜನತಾ ಸೇವೆಯನ್ನು ಮಾಡಿದಳು.

ಮನೆ ಮನೆಗೆ ತಿರುಗಿದಳು .... ರಾಜಪುತ್ರಿ ಭಿಕ್ಷೆಗಾಗಿ ಜನರ ಮುಂದೆ ಉಡಿಯೊಡ್ಡಿದಳು. ಧನ ಧಾನ್ಯ ಸೇರಿಸಿದಳು. ಹಗಲಿರುಳೆನ್ನದೆ, ಕಣ್ಣಿವೆ ಮುಚ್ಚದೆ ದುಡಿದಳು. ಎಲ್ಲರೂ ಸೇರಿ ಹಳ್ಳಿ ಹಳ್ಳಿ ತಿರುಗಿದೆವು. ಎಷ್ಟೋ ಸಹಾಯ ಸೇರಿತು. ಎರಡು ವಾರಗಳಲ್ಲಿ ಪಾವಾಪುರಿಯನ್ನು ಸೇರಿದೆವು.

ಇಲ್ಲಿ ನೀರಿನ ಹಾವಳಿಯಾಗಿದ್ದರೆ ಅಲ್ಲಿ ನೀರಿಲ್ಲದುದಕ್ಕೆ ಜನ, ದನಗಳೆಲ್ಲ ಬಾಯಿ ಬಾಯಿ ಬಿಡುತ್ತಿದ್ದುವು. ಅನ್ನ ಹಾಕಿದರೆ ತೀರಲಿಲ್ಲ. ಬಟ್ಟೆ ಕೊಟ್ಟರೆ ಮುಗಿಯಲಿಲ್ಲ. ದೂರದಿಂದ ನೀರು ಹೊತ್ತು ತಂದು ಪೂರೈಸಬೇಕು. ಇದನ್ನೂ ಕೂಡ ರಾಜಪುತ್ರಿ ಸೇವಾ ಬುದ್ಧಿಯಿಂದ ಮಾಡಿದಳು. ರಾಷ್ಟ್ರಕ್ಕೆ ಬಂದ ಸಂಕಟವನ್ನು ಕಳೆದಳು. ಅದರಲ್ಲಿ ಅವಳ ಸಂಕಟದ ನೋವು ಎಲ್ಲಿಯೋ ಮಾಯವಾಗಿ ಬಿಟ್ಟಿತು.

ಅಷ್ಟರಲ್ಲಿ ಹುಡಗಿಯ ಹೃದಯ ಹಣ್ಣಾಯಿತು. ತನ್ನ ಜೀವನಕ್ಕೊಂದು ದಾರಿಯನ್ನು ತನ್ನಿಂದ ತಾನೇ ಕಂಡುಕೊಂಡಿತು. ತಪಸ್ಸಿಗೆ ಮನಸ್ಸು ಸಿದ್ಧವಾಯಿತು... ವೈರಾಗ್ಯ ಹುಟ್ಟಿತು.... ಅದೊಂದು ಇನ್ನೊಂದು ರೀತಿಯ ಜನತಾ ಸೇವೆಗೆ ಹಾತೊರೆಯತೊಡಗಿತು. ದೀಕ್ಷೆ ತಕ್ಕೊಂಡು ಆರ್ಯಿಕೆಯಾದಳು. ಇಂದು ಸಂಘನಾಯಿಕಿಯಾದಳು.

ಇವನ್ನೇನು ನಾನು ತಮ್ಮ ಮುಂದೆ ಹೊಸ ಕತೆಯನ್ನು ಕಟ್ಟಿ ಹೇಳುತ್ತಿಲ್ಲ.... ನಡೆದ ಸಂಗತಿಯಿದು. ಇಲ್ಲಿ ಬಹು ಜನರಿಗೆ ಇದರಲ್ಲಿಯ ಬಹುಭಾಗ ಗೊತ್ತಿದ್ದುದೇ ಆಗಿದೆ. ಕೆಲವು ಮಾತುಗಳು ಮರೆಯಲ್ಲಿ ನಡೆದಿದ್ದುವು. ಅವು ಈಗ ಬೆಳಕಿಗೆ ಬಂದರೆ ಯಾರಿಗೂ ನಷ್ಟವಿಲ್ಲವೆಂದು ತೋರಿತು. ಹೇಳಿದೆ. ಇದರಿಂದ ಕರ್ಮದ ಗತಿ ಎಷ್ಟು ವಿಚಿತ್ರ ಎಂದು ಅರಿಯಬಹುದು. ಸಂಸಾರದೊಳಗಿನ ಅತೃಪ್ತಿ ಹೇಗೆ ಫಲಕಾರಿಯಾಗುವುದು, ವೈರಾಗ್ಯದಲ್ಲಿ ಪರಿವರ್ತನಗೊಳ್ಳುವುದು ಎಂಬುದನ್ನು ತಿಳಿಯಬಹುದು.... ಇಂಥ ವೈರಾಗ್ಯ ಆತ್ಮಕಲ್ಯಾಣ ಮಾಡದೇ ಹೋಗದು. ಬೂದಿ ಮುಚ್ಚಿದ ಕೆಂಡದಂತೆ ಒಳಗೆ ಕಾಮಾಗ್ನಿಯನ್ನಿಟ್ಟುಕೊಂಡು ತ್ಯಾಗ ಜೀವನ ನಡೆಯಿಸುವುದು ಯಾವ ಕಾಲಕ್ಕೂ ಕಲ್ಯಾಣಕಾರಿಯಲ್ಲ.... ಯಾರಿಗೂ ಅಲ್ಲ. ವಂಚನೆಯದು....

ಇಷ್ಟು ಹೇಳಿ ಭಗವಂತರು ಸಾಮಾಯಿಕಕ್ಕೆಂದು ಆಸನ ಬಿಟ್ಟು ಎದ್ದರು. ಜನರೂ ವಂದಿಸಿ ತಮ್ಮ ತಮ್ಮ ನಿವಾಸಸ್ಥಾನಗಳಿಗೆ ತೆರಳಿದರು.

೩

ಭಗವಾನ್ ಮಹಾವೀರರು ಮಹಾಶ್ರಮಣ ಸಂಘದೊಡನೆ ವಿಹರಿಸುತ್ತ ವಿಹರಿಸುತ್ತ ಬಹುದಿನಗಳ ಮೇಲೆ ಒಂದು ದಿನ ಚಂಪಾನಗರಿಗೆ

ಬಂದರು. ಗಂಗಾ ತಟಾಕದಲ್ಲಿ ಒಂದು ಪ್ರಶಾಂತವಾದ ಉದ್ಯಾನದಲ್ಲಿ ತಂಗಿದ್ದರು. ಆದರೆ ಹಿಂದಿನ ಉತ್ಸಾಹ ಈ ಸಲ ಜನರಲ್ಲಿ ತೋರುತ್ತಿರಲಿಲ್ಲ. ಮುನಿಸೇವೆ, ಆಹಾರ ದಾನಗಳಲ್ಲಿ ಜನತೆ ತನ್ಮಯವಾಗಿ ವರ್ತಿಸಲಿಲ್ಲ. ಎಲ್ಲರ ಮನಸ್ಸೂ ಅಸ್ಥಿರವಾಗಿದ್ದುವು. ಯಾವುದೋ ಒಂದು ಸಂಗತಿಯನ್ನು ತಿಳಿಯಲಿಕ್ಕೆ ಕಾತರ ಗೊಂಡಿದ್ದುವು.

ನಿತ್ಯದಂತೆ ಭಗವಂತನ ಉಪದೇಶಕ್ಕೆ ನಗರದ ಹಲವು ಜನ ಹಿರಿ ಕಿರಿಯರು ಸೇರಿದ್ದರು. ಆದರೆ ರಾಜ ಮನೆತನದ ಪುರುಷರಾರೂ ಅವರಲ್ಲಿ ಇರಲಿಲ್ಲ. ಅರಮನೆಯ ಸ್ತ್ರೀಯರೇನೋ ಬಂದಿದ್ದರು. ಅಂದರೂ ಸಮವ ಸರಣಕ್ಕೊಂದು ಕೊರತೆಯಿದ್ದಂತೆ ಭಾಸವಾಗುತ್ತಿದ್ದಿತು. ಭಗವಂತನ ದಿವ್ಯ ಧ್ವನಿ ದಿನದಂತೆ ಗಂಭೀರವಾಗಿಯೇ ಪ್ರವಹಿಸುತ್ತಿದ್ದಿತು.

ಧರ್ಮಾ ಧರ್ಮ ಸ್ವರೂಪದ ವಿವರಣೆ ಮುಗಿಯಿತು. ದಯೆ ದಾನ ಗಳ ಸ್ವರೂಪ ವಿವರಿಸಿಯಾಯಿತು. ಜನರು ಈ ಗಂಭೀರ ವಿಷಯಗಳನ್ನು ತಿಳಿದುಕೊಂಡು ಶಾಂತ ಚಿತ್ತರಾದರು. ಅನೇಕರ ಮನದ ದುಗುಡ ಮಯ ವಾದಂತಾಯಿತು. ಸಮತೆ ನೆಲಿಸಿದಂತೆ ತೋರಿತು.

ಇನ್ನೂ ಸಮಯ ಉಳಿದುದನ್ನು ಗಮನಿಸಿ ಶ್ರೋತೃಮುಖ್ಯಳಾದ ಚಂಪಾನಗರದ ಅರಸಿ, ಸುಜ್ಯೇಷ್ಠೆಯ ಮುಖದ ಕಡೆಗೆ ನೋಡಿ ಮೆಲ್ಲನೆ, ಒಂದು ಪ್ರಶ್ನೆಯನ್ನು ಕೇಳಿದಳು. ಧ್ವನಿಯಲ್ಲಿ ತುಂಬ ಕುತೂಹಲ ತುಂಬಿದ್ದಿತು.

“ ಈ ಸಮರದ ಕೊನೆಯು ಹೇಗೆ ತಾಯಿ ?

ಆರ್ಯೆ ಸುಜ್ಯೇಷ್ಠೆ ಏನನ್ನೂ ಹೇಳಲಿಲ್ಲ. ಸ್ವಲ್ಪ ಹೊತ್ತು ಸುಮ್ಮನೆ ಕುಳಿತಳು. ಭಗವಂತನ ಕಡೆಗೆ ಹೊರಳಿ ನೋಡಿದಳು. ಭಗವಂತರೇ ರಾಣಿ ಯ ಪ್ರಶ್ನೆಗೆ ಉತ್ತರಿಸಬೇಕೆಂದು ಅವಳ ಮುಖಭಾವವಿದ್ದಂತಿತ್ತು.

ಎಲ್ಲರಿಗೂ ಬೇಕಾದ ಪ್ರಶ್ನೆಯಾಗಿತ್ತದು. ಮಾತು ಮುಂದರಿಯದೆ ಇರಲು ಇನ್ನೊಬ್ಬ ನಗರ ಶ್ರೇಷ್ಠಿಯು ಮೆಲ್ಲನೆ ಒಂದು ಸಂಗತಿಯನ್ನು ಅರುಹಲು ಯತ್ನಿಸಿದನು.

“ನಮ್ಮ ರಾಜ ಕುವರಿಯು ಅಪಹರಣವಾದಾಗ ನಾವು ರಾಜಗೃಹವನ್ನು ಮುತ್ತುವುದು ಸಯುಕ್ತಿಕವಾಗಿತ್ತು. ಆಗ ಭಗವಂತರೇ ತಡೆದರೆಂದು ಕೇಳುವೆ. ಈಗ ತಿರುಗಿ ಸಮ್ರಾಟ್ ಶ್ರೇಣಿಕನೇ ತಿರುಗಿ ನಮ್ಮ ಗಣರಾಜ್ಯವನ್ನೇ ನಷ್ಟಗೊಳಿಸಲು ವೀಳ್ಯ ಎತ್ತುವದೆಂದರೆ....ವಿಶಾಲಾನಗರಿಗೆ ಮುತ್ತಿಗೆ ಹಾಕುವದೆಂದರೆ.... ಎಂಥ ಅನ್ಯಾಯ .. ಈ ಹಿಂಸೆಗೆ ಪರಿಮಾರ್ಜನವೆಲ್ಲಿ ? ಇಂದಿಗೆ ಒಂಭತ್ತು ದಿನಗಳಾಯಿತು. ಘನಘೋರಕಾಳಗ ನಡೆದಿದೆ. ಮೂವತ್ತಾರು ಜನ ಗಣರಾಜರೆಲ್ಲ ಸೇರಿ, ಸಾಮ್ರಾಜ್ಯದ ಸೈನ್ಯಕ್ಕೆ ಎದುರಾಗಿದ್ದಾರೆ. ಆದರೂ ವೈಶಾಲಿಯು ವೈಭವವೇನು ಉಳಿಯುವ ಲಕ್ಷಣ ತೋರದು... ದಿನ ದಿನಕ್ಕೂ ಭಯಂಕರ ಸುದ್ದಿಗಳೇ ಬರುತ್ತಲಿವೆ. ಇಂಥ ಸಮಯದಲ್ಲಿ ಅಲ್ಲಿ ಮಹಾರಾಣಿಯಾಗಿ ಮೆರೆಯುವ ಚೇಳನಾದೇವಿಯಾದರೂ ಏನು ಮಾಡಿಕೊಂಡಿರುವಳೋ ! ಭಗವಂತನೇ ಬಲ್ಲ ! ” ಸ್ವಲ್ಪ ತಡೆದು ಶ್ರೇಷ್ಠಿಯು “ ಈ ಯುದ್ಧದ ಕಾರಣವನ್ನಾದರೂ ಭಗವಂತರು ವಿವರಿಸಿ, ನಮಗೆ ಸಮಾಧಾನವನ್ನುಂಟು ಮಾಡಬೇಕು ಭಗವಾನ್ ! ” ಎಂದನು.

“ಓ ! ಭವ್ಯ, ಈ ಸಮರದ ಕಾರಣವನ್ನು ಶ್ರವಣಮಾಡುವುದರಿಂದ ಶಾಂತಿ ಲಭಿಸದು ಭವ್ಯ.... ಈ ವಿಷದ ಬೀಜವು ಮೊಳಕೆಯೊಡೆಯುತ್ತಿರುವಾಗಲೇ ಕಿತ್ತು ಹಾಕಲು ಯತ್ನಿಸಲಾಯಿತು. ಆದರೆ ಅದು ನಿಮ್ಮ ರಾಜನೀತಿಗೆ ಬಗ್ಗಲಿಲ್ಲ. ಅದರಿಂದ ಇಂದು ಜನತೆಯು ಅದರ ಕಹಿ ಫಲಗಳನ್ನು ಉಣ್ಣಬೇಕಾಗಿದೆ... ”

ಎಂದು ಭಗವಂತರು ತುಸು ಹೊತ್ತು ಮೌನ ತಾಳಿದರು. ಧ್ಯಾನ ಮಗ್ನರಾದರು. ಆ ಮೇಲೆ ಕಣ್ತೆರೆದು ಶ್ರಾವಕರ ಕಡೆಗೆ ದೃಷ್ಟಿಯೊಂದನ್ನು ಬೀರಿದರು. ತರುವಾಯ ಮೆಲ್ಲನೆ ಮಾತಿಗೆ ಆರಂಭಿಸಿದರು:

“ ಹಿಂದಕ್ಕೆ ವೈಶಾಲಿಯಲ್ಲಿ ನಮ್ಮ ಸಂಘ ತಂಗಿದ್ದಾಗ ಶ್ರಾವಕರಿಗೆ ಒಬ್ಬ ಅತೃಪ್ತ ಸ್ತ್ರೀ ಹೃದಯ ಸಮಾಜ ಸೇವೆಯಲ್ಲಿ ಹೀಗೆ ಶಾಂತಿಯ ನೆಲೆಯನ್ನು ಕಂಡಿತು. ಮುಂದೆ ಅದು ವೈರಾಗ್ಯದ ಕಡೆಗೆ ಒಲಿಯಿತು. ಹೇಗೆಂಬುವನ್ನು ಕತೆ ಮಾಡಿ ಹೇಳಿದ್ದೆ. ಇಂದು ಇನ್ನೊಂದು ಅತೃಪ್ತ ನಾರೀ ಜೀವನದ ಒಳ ಚಿತ್ರವನ್ನು ನಿಮ್ಮ ಮುಂದೆ ಇಡುವೆ... ಅದರಿಂದ ನಿಮಗೆಲ್ಲ

ಸಂಗತಿ ಸ್ಪಷ್ಟವಾಗುವದು. ದೊಡ್ಡ ದೊಡ್ಡ ಘಟನೆಗಳಿಗೂ ಸಣ್ಣ ಸಣ್ಣ ಕಾರಣಗಳು ಹೇಗೆ ಇರುತ್ತವೆಂಬುದನ್ನು ನೀವು ತಿಳಿದುಕೊಳ್ಳುವಿರಿ. ಇಂದು ನಾವು ಭೋಗಿಸುವ ಭಯಂಕರ ದುಃಖಕ್ಕೂ ಹಿಂದಿನ ನಮ್ಮ ಒಂದು ಚಿಕ್ಕ ಕರ್ಮಾಣುವೂ ಕೂಡ ಎಂತು ಕಾರಣವಾಗಿರಬಲ್ಲುದೆಂಬುವನ್ನು ಇದರಿಂದ ಗಮನಿಸುವಂತಿದೆ...."

ಎಂದು ಭಗವಂತರು ಮುಖ್ಯ ವಿಷಯದ ಕಡೆಗೆ ಹೊರಳಿದರು. ಶ್ರಾವಕರು ಮನಸ್ಸನ್ನೆಲ್ಲ ಏಕಾಗ್ರ ಚಿತ್ತದಲ್ಲಿ ನಿಲಿಸಿ ಮುಂದಿನ ಸಂಗತಿಯನ್ನು ಕೇಳಲಿಕ್ಕೆ ಕುತೂಹಲವುಳ್ಳವರಾಗಿ ಕುಳಿತರು.

"ಅಂದು ಗಣತಂತ್ರ ರಾಜ್ಯದ ಗಣರಾಜ ಪ್ರಮುಖರೆಲ್ಲ ವೈಶಾಲಿನಗರದಲ್ಲಿ ಸೇರಿದ್ದರು. ಪ್ರವೇಣೀ ಪುಸ್ತಕದೊಳಗಿನ ಅನೇಕ ವಿಷಯಗಳ ವಿವೇಚನೆಯಾಗುವದಿತ್ತು. ಮುಖ್ಯವಾಗಿ ಲೋಕ ಸುಂದರಿ ಎನಿಸಿದ ಅಂಬಪಾಲಿ — ಆಮ್ರಪಾಲಿ-ಯ ಮದುವೆಯ ವಿಚಾರವೂ ಆಗುವದಿದ್ದಿತು. ಸ್ವತಃ ಆಮ್ರಪಾಲಿಯು ತನ್ನ ಅಭಿಪ್ರಾಯವನ್ನು ಸಭೆಯ ಎದುರು ಇಡುವವಳಿದ್ದಳು. ಅದಕ್ಕೆ ಯಾರ ಸಮ್ಮತಿಯೂ ಇರಲಿಲ್ಲ. ಎಲ್ಲ ಹೆಣ್ಣು ಮಕ್ಕಳಂತೆ ತಾನೂ ಲಗ್ನವಾಗಿ ಯೋಗ್ಯ ಪತಿಯೊಡನೆ ಪ್ರಪಂಚ ಮಾಡಬೇಕೆಂಬುದೇ ಅವಳ ಇಚ್ಛೆಯಾಗಿದ್ದಿತು. ಅವಳ ಲೋಕೋತ್ತರ ಸೌಂದರ್ಯವು ಅದಕ್ಕೆ ಅಡ್ಡ ಬಂತು! ಗಣರಾಜರ ಭೋಗ ಸ್ತ್ರೀಯಾಗಲು ಗಣರಾಜತಂತ್ರ ಅಂದು ವಿಧಿಸಿತು! ತಾನೆಷ್ಟು ವಿರೋಧಿಸಿದರೂ ನಿರ್ಣಯ ಆಗಿಯೇ ತೀರಿತು. ಈ ನಿರ್ಣಯವನ್ನು ಕೇಳಿದ ಆಮ್ರಪಾಲಿಯು ಕುಳಿತಲ್ಲಿಯೇ ಮೂರ್ಛೆ ಹೋದಳು. ಅಲ್ಲಿಂದ ಅವಳನ್ನು ಎತ್ತಿಯೇ ಮನೆಗೆ ಒಯ್ಯಬೇಕಾಯಿತು. ಸ್ತ್ರೀ ಹೃದಯದ ಅರ್ಥ ಅಂದು ಅಲ್ಲಿ ಯಾರಿಗೂ ಆದಂತೆ ತೋರಲಿಲ್ಲ.

ಅಂದು ನಾನು ಮಾತ್ರ ಬಹಳ ನೊಂದುಕೊಂಡೆ. ಸುಜ್ಯೇಷ್ಠೆಯೂ ಕೂಡ ಬಹುವಾಗಿ ಮರುಗಿದಳು. ರಾಜ ಭವನದಲ್ಲಿಯೇ ಆಮ್ರಪಾಲಿಯನ್ನು ಸಮಾಧಾನ ಪಡಿಸಲು ಯತ್ನಿಸಿದಳು. ಆದರೆ ಅವಳು ಸುದ್ದಿಯ ಮೇಲೆ ಇದ್ದರಲ್ಲವೆ, ಸುಜ್ಯೇಷ್ಠೆಯು ಸಾಂತ್ವನದ ಉಪಯೋಗವಾಗುವುದು?

ಇರುಳು ಮತ್ತೆ ಸುಜ್ಯೇಷ್ಠೆಯು ನನ್ನೆಡೆಗೆ ಬಂದಳು. ಇದೀಗ ನಾನು ಅಗ್ರಾಯಣೀಯ ಪೂರ್ವದ ಚಯನಲಬ್ಧಿ ಪ್ರಾಭೃತದ ನಾಲ್ಕು ಪಾಹುಡ

ಗಳನ್ನು ಓದಿ, ಅದೇ ವಿಚಾರದಲ್ಲಿ ಮಗ್ನನಾಗಿ ಕುಳಿತಿದ್ದೆ. ಇಂದಿನ ನನ್ನ ವಾಚನವು ಆಮ್ರಪಾಲಿಯ ವಿಷಯವನ್ನು ಮರೆಯಲಿಕ್ಕೆಂದೇ ಇತ್ತು. ಒಂದು ಜೀವಿಗೆ ಆಗುವ ಅನ್ಯಾಯವನ್ನು ನೋಡುತ್ತ ಸುಮ್ಮನಿರುವುದು ನನ್ನ ಸ್ವಭಾವಕ್ಕೆ ಸಹನವಾಗದ ವಿಷಯವಾಗಿತ್ತು. ಆದರೆ ಗಣತಂತ್ರದ ಶಿಸ್ತಿನ ಮುಂದೆ ಗಣರಾಜ ಮಗನಾಗಿ ನಾನೇನೂ ಮಾಡಲು ಬರುವಂತೆ ಇರಲಿಲ್ಲ. ಒಮ್ಮೊಮ್ಮೆ ನಮ್ಮ ಕುಲಗೋತ್ರಗಳು ನಮ್ಮ ಮಾನವತೆಯನ್ನೂ ಒತ್ತಿಡುವಷ್ಟರ ಮಟ್ಟಿಗೆ ಪ್ರಭಾವ ಬೀರುತ್ತವೆ. ಇರಲಿ. ಸುಜ್ಯೇಷ್ಠೆ ಬಂದ ಮೇಲೆ ಮತ್ತೆ ಆಮ್ರಪಾಲಿಯ ಭೆಟ್ಟಿಗೆ ಹೋದೆವು. ಅಂದೇ ನನಗೆ ಸುಜ್ಯೇಷ್ಠೆಯ ಬಗ್ಗೆ ಕರುಣೆ ಆದರಗಳುಂಟಾದವು.

'ನಾವು ಹೋಗುವ ಹೊತ್ತಿಗೆ ಆಮ್ರಪಾಲಿಯು ಎಚ್ಚರಾಗಿದ್ದಳು. ಇಡೀ ದಿನ ಅತ್ತು ಅತ್ತು ಅವಳ ಕಣ್ಣುಗಳು ಕೆಂಪಾಗಿದ್ದುವು; ದೊಡ್ಡವಾಗಿದ್ದವು. ಅನ್ನ ನೀರುಗಳಿಲ್ಲದೆ ಸೋತು ಹೋಗಿದ್ದಳು. ಆದರೂ ಅವಳ ಸೌಂದರ್ಯವು ನಮ್ಮ ಮನಸ್ಸನ್ನು ಸೆಳೆಯುವಂತಿತ್ತು. ಎಂಥ ತಪಸ್ವಿಯ ಮನಸ್ಸನ್ನೂ ವಿಭ್ರಮ ಗೊಳಿಸುವಂತಿತ್ತು. ಇಂಥ ಸುಂದರಿಯನ್ನು ಪುರುಷ ವರ್ಗವು ಒಬ್ಬನ ಸ್ವತ್ತಾಗಿ ಇರಲು ಬಿಟ್ಟಾರೆಯೇ? — ಎಂದು ಮನದಲ್ಲಿಯೇ ಎಂದುಕೊಂಡೆ. ಪುರುಷ ಜಾತಿಯ ಮೇಲೆಯೇ ಕೆರಳಿದೆ. ಆದರೆ ಹೆಚ್ಚಿಗೇನನ್ನೂ ಆಮ್ರಪಾಲಿಗೆ ನಾನು ಹೇಳುವದಾಗಲಿಲ್ಲ. ಸುಮ್ಮನೆ ಕಂಬದಂತೆ ಕುಳಿತೆ. ಸಹಾನುಭೂತಿಯಿಂದ ನೋಡಿದೆ. ನನ್ನ ಕರ್ಮ ಸಿದ್ಧಾಂತದ ವಿವರಣೆಯೆಲ್ಲ ಅಲ್ಲಿ ಮಾಯವಾಗಿ ಬಿಟ್ಟಿತು. ಇದು ಪ್ರತ್ಯಕ್ಷ ಮಾನವರೆಸಗುವ ಪ್ರತಿಬಂಧಕ್ಕೆ – ದೋಷಕ್ಕೆ – ಕರ್ಮ ಸಿದ್ಧಾಂತದ ಆಧಾರ ಹೇಗೆ ಹೇಳಲಿ? — ಎಂದು ಅಸಹಾಯನಾಗಿ ಕಣ್ಣೀರು ಮಿಡಿದೆ. ಕೊರಗಿದೆ.

ಸುಜ್ಯೇಷ್ಠೆಯದು ಸ್ತ್ರೀ ಹೃದಯ. ಸ್ತ್ರೀ ಸಹಜವಾದ ಸಹೃದಯತೆಯಿಂದ ಹಲವು ಮಾತುಗಳನ್ನು ಹೇಳಿದಳು. ಇಷ್ಟೇ ಅಲ್ಲ, ಅವಳೂ ಆಮ್ರಪಾಲಿಯ ಸಮದುಃಖಿ — ಎಂಬುದು ಅಂದು, ಆ ಕ್ಷಣದಲ್ಲಿ ನನಗೆ ಕಂಡು ಬಂತು. ಅಂತಲೇ ಅವಳ ಹೃದಯ ಆಮ್ರಪಾಲಿಗಾಗಿ ಅಷ್ಟು ಕರಗಿರಬೇಕು.

ನಾವೆಲ್ಲ ಅಲ್ಲಿ ಹತ್ತರ ಇರುವವೆಂಬುದನ್ನೇ ಸುಜ್ಯೇಷ್ಠೆ ಮರೆತು ಬಿಟ್ಟಳು! ತನ್ನ ಪ್ರಣಯ ಸಮಾಧಿಯ ಕತೆಯನ್ನೇ ಹುಚ್ಚಿಯಂತೆ ವಿಸ್ತರಿಸಿ

ಬಿಟ್ಟಳು. ತಾನು ಶ್ರೇಣಿಕನನ್ನು ಪ್ರೀತಿಸಿದುದು. ಅವನ ಕೂಡ ವೈಶಾಲಿಯ ವನದಲ್ಲಿ ಏಕಾಂತದಲ್ಲಿ ಕಳೆದುದು... ಮುಂದೆ ಪ್ರಣಯ ಭಂಗವಾದ ಬಗೆ ಎಲ್ಲವನ್ನೂ ತೆರೆದ ಮನಸ್ಸಿನಿಂದ ಆಮ್ರಪಾಲಿಕೆಗೆ ಹೇಳಿ, ಸಮಾಧಾನ ಹೇಳಲು ಯತ್ನಿಸಿದಳು.

ಅಂದೇ ನನ್ನ ಮುಂದೆಯೂ ಒಂದು ಹೊಸ ಲೋಕ ತೆರೆದುದು ಸುಜ್ಯೇಷ್ಠೆಯ ನಿಜವಾದ ಪರಿಚಯವಾದುದು. ಅಂದಿನಿಂದ ಈ ನೊಂದ ಜೀವಿಯನ್ನು ಸಮಾಧಾನ ಗೊಳಿಸುವ ಭಾರವೆಲ್ಲ ನನ್ನನ್ನು ಕೂಡಿತು. ಆದರೆ ಇಂಥ ಪ್ರಭಾವ ಆಮ್ರಪಾಲಿಯ ಮೇಲೆ ನಾನು ಬೀರಲು ಸಾಧ್ಯ ವಾಗಲಿಲ್ಲ. ಸುಜ್ಯೇಷ್ಠೆಯ ಸಮಾಧಾನದ ವಚನಗಳಲ್ಲಿಯೇ ಅವಳಿಗೆ ಮುಂ ದಿನ ದಾರಿ ಕಂಡಿತು. ಶ್ರೇಣಿಕನ ಪಟ್ಟದ ರಾಣಿಯಾಗುವ ಹಂಬಲ ಹುಟ್ಟಿತು. ಅವನ ಸ್ತ್ರೀಲೋಲುಪತೆಯ ಕಲ್ಪನೆ ಅವಳಿಗೆ ಉಂಟಾ ಯಿತು. ಅಂದಿನಿಂದ ಅವಳು ಆ ಪ್ರಯತ್ನದಲ್ಲಿ ತೊಡಗಿದಳು. ಆದರ ಫಲವೇ ಇಂದು ನಡೆದಿರುವ ಯುದ್ಧ.... ಶ್ರೇಣಿಕನಿಗೆ ಆಮ್ರಪಾಲಿ ಬೇಕಾಗಿದ್ದಾಳೆ. ಆಮ್ರಪಾಲಿಗೆ ಗಣರಾಜ್ಯದ ಸೇಡು ತಕ್ಕೊಳ್ಳಬೇಕಾಗಿದೆ. ! ತನ್ನ ಮನೋ ರಥವನ್ನು ಪೂರ್ತಿಗೊಳಿಸಿಕೊಳ್ಳಬೇಕಾಗಿದೆ. ! ಶ್ರೇಣಿಕಸಮ್ರಾಟ್‌ನ ಜೊತೆಗೆ ಮಹಾರಾಣಿಯಾಗಿ ಮೆರೆಯ ಬೇಕಾಗಿದೆ !....

ಇಷ್ಟು ಹೇಳಿ ಭಗವಂತರು ಸುಮ್ಮನಾದರು. ಆದರೆ ಶ್ರಾವಕರು ಅಷ್ಟಕ್ಕೆ ನಿಲ್ಲಿಸಲಿಲ್ಲ. ಮತ್ತೊಂದು ಪ್ರಶ್ನೆಯನ್ನು ಹಾಕಿಯೇ ಬಿಟ್ಟರು. ಸಾಂಸಾರಿಕ ಜೀವಿಗಳ ಸ್ವಭಾವವೇ ಹಾಗೆ.

" ಈ ಯುದ್ಧದ ಕೊನೆ ? "

" ನಾಳೆ ಬೆಳಗಿನಲ್ಲಿ ಗೊತ್ತಾಗುವುದು ! "

ಒಂದೇ ಮಾತಿನಲ್ಲಿ ಭಗವಂತ ಹೇಳಿ ಎದ್ದರು. ಕಾಡಿಗೆ ತೆರಳಬೇಕಾ ಗಿತ್ತವರಿಗೆ ... ಜನ ಒಬ್ಬರ ಮುಖವನ್ನೊಬ್ಬರು ಬೆರಗಿನಿಂದ ನೋಡುತ್ತ ಭಗವಂತರಿಗೆ ' ನಮೋಸ್ತು ' ಮಾಡಿಕೊಂಡರು. ಆ ಮೇಲೆ ಸುಜ್ಯೇಷ್ಠೆಯ ಕಡೆಗೆ ಹೊರಳಿ ವಂದಿಸುವಾಗ ಅವಳು ಮೆಲ್ಲನೆ ವಿಷಯವನ್ನು ಹೀಗೆ ವಿಷದ ಪಡಿಸಿದಳು.

" ಸೋಮದತ್ತ ಸಮ್ರಾಟ್‌ನ ಸೇನಾನಾಯಕ – ಹಾಗೂ ಹಿರಿಯ ಮಗ — ಈ ಯುದ್ಧದಲ್ಲಿ.... ಅವನನ್ನು ಕಾಣಲು ನಮ್ಮ ಸಂಘದೊಳಗಿನ

ಒಬ್ಬ ಏಲಕರನ್ನು ಭಗವಂತರು ಕಳಿಸಿರುವರು....ಏನಾಗುವುದೋ ನೋಡ ಬೇಕು .... " ಎಂದು ಕರದೊಳಗಿನ ಪಿಂಛಿಯಿಂದ ಪಾದಗಳನ್ನು ಮೆಲ್ಲನೆ ಸವರಿಕೊಂಡು ಅವಳೂ ಎದ್ದಳು.

೪

ಒಮ್ಮೆ ಶ್ರಾವಸ್ತೀನಗರದ ಹೊರವಲಯದಲ್ಲಿ ಭಗವಾನ್ ಮಹಾವೀರರ ಸಮವಸರಣವು ವಿರಾಜಮಾನವಾಗಿದ್ದಿತು. ಮಗಧ, ಕೋಸಲ, ವಿದೇಹ ಗಳಿಂದ ಬಂದು ಜಿನಧರ್ಮದ ದೀಕ್ಷೆಯನ್ನು ತಕ್ಕೊಂಡ ಹನ್ನೊಂದು ಜನ ವಿದ್ವಾಂಸ ಬ್ರಾಹ್ಮಣರೂ ಸಂಘದಲ್ಲಿ ಇದ್ದರು. ಗೌತಮ ಗೋತ್ರೀಯ ಇಂದ್ರಭೂತಿಯು ಇವರಲ್ಲಿ ಪ್ರಮುಖನಾಗಿದ್ದನು. ಇವನೇ ಭಗವಂತನ ಮುಖ್ಯ ಗಣಧರನು. ಇವನ ಮುಖಾಂತರವೇ ಸಮವಸರಣದಲ್ಲಿ ಅನೇಕ ವಿಷಯಗಳು ವಿವರಿಸಲ್ಪಡುತ್ತಿದ್ದುವು. ಭಗವಂತನ ಭವ್ಯ ಕಲ್ಪನೆಗಳನ್ನೂ ದಿವ್ಯ ಧ್ವನಿಯನ್ನೂ ಸೂಕ್ಷ್ಮವಾಗಿ ಅರ್ಥ ಮಾಡಿಕೊಳ್ಳಲಿಕ್ಕೆ ಇಂದ್ರಭೂತಿ ಯೊಬ್ಬನೇ ಸಮರ್ಥನಾಗಿದ್ದನು.

ಶ್ರಾವಸ್ತಿಯ ರಾಜ ಮನೆತನವೇ ಶ್ರಮಣ ಸಂಘದ ಸೇವೆಗೆ ಸಿದ್ಧವಾಗಿ ನಿಂತಿದ್ದಿತು. ನಾಡಿನ ನಾಲ್ಕು ನಿಟ್ಟಿಗೆ ಭಗವಂತನ ಉಪದೇಶದ ವರ್ತಮಾನ ಹರಡಿದ್ದಿತು. ಧರ್ಮದ ಪ್ರಭಾವ ಹೆಚ್ಚಿದ್ದಿತು.

ಒಂದು ದಿನ ಇದೀಗ ಭಗವಂತರ ಧರ್ಮ ಪ್ರವಚನ ಮುಗಿದಿದ್ದಿತು. ಇನ್ನೂ ಸ್ವಲ್ಪ ಹೊತ್ತು ಇದ್ದುದರಿಂದ ಶ್ರಾವಕರೆಲ್ಲ ಅಲ್ಲಿಯೇ ಕುಳಿತಿದ್ದರು. ಪಶ್ಚಿಮ ದಿಕ್ಕಿನಲ್ಲಿ ರವಿಯು ಕೆಂಪು ಕಾಂತಿಯಿಂದ ಕಂಗೊಳಿಸುತ್ತಿದ್ದನು. ವರ್ಷಾಯೋಗದ ಕೊನೆಯ ದಿನಗಳವು. ಆಕಾಶವು ನಿರಭ್ರವಾಗುತ್ತ ನಡೆ ದಿದ್ದಿತು. ಸೂರ್ಯನ ಸ್ವರ್ಣ ವರ್ಣವು ಲೋಕವನ್ನೆಲ್ಲ ಬೆಳಗುತ್ತಿದ್ದಿತು.

ಭಗವಂತನ ಸಂಘದಲ್ಲಿ ಹಲವು ಜನ ಮುನಿಗಳೂ ಆರ್ಯಿಕೆಯರೂ ಇದ್ದರು. ಆರ್ಯಿಕೆಯರ ಸಂಘ ನಾಯಿಕಿ ಸುಜೇಷ್ಠೆಯು ಸಂಘದ ಮೇಲ್ವಿಚಾರಣೆಯನ್ನೆಲ್ಲ ನೋಡಿಕೊಳ್ಳುತ್ತಿದ್ದಳು. ಸಂಘದ ಮುಂದಿನ ಪ್ರಯಾಣದ ಪದ್ಧತಿ, ಸ್ಥಾನ ನಿರ್ದೇಶಗಳೆಲ್ಲ ಅವಳ ಕಡೆಗೇ ಇದ್ದುವು. ಭಗವಂತನ ಸಲಹೆಯಿಂದ ಅವಳು ಎಲ್ಲವನ್ನೂ ನಿರ್ವಹಿಸುತ್ತಿದ್ದಳು.

ಅಂದು ರಾಜಗೃಹದಿಂದ ರಾಜದೂತನೊಬ್ಬನು ಬಂದು, ಸುಜ್ಯೇಷ್ಠೆಯ ಕೈಯಲ್ಲಿ ಪತ್ರ ಒಂದನ್ನು ಕೊಟ್ಟು, ಸಂಘಕ್ಕೆ ಅತ್ಯಾದರದಿಂದ ನಮಿಸಿ ಕುಳಿತನು. ಸುಜ್ಯೇಷ್ಠೆ ಪತ್ರ ಓದಿಕೊಂಡಳು. ಅವಳ ಮುಖದಲ್ಲಿ ಸಂತಸದ ಸೂಕ್ಷ್ಮ ರೇಷೆಯೊಂದು ಮೂಡಿತು. ಮೆಲ್ಲನೆ ಎದ್ದು ಭಗವಂತನ ಹತ್ತಿರ ಬಂದು ವಿಷಯವನ್ನು ಅರುಹಿದಳು. ಹಾಗೆಯೇ ಈಗ ಅತ್ತ ಶ್ರಮಣ ಸಂಘ ಪ್ರಯಾಣ ಬೆಳೆಸಲಿಕ್ಕೆ ಉಚಿತ ಸಮಯವೆಂದೂ ಸೂಚಿಸಿದಳು.

ಅದು ಮಹಾರಾಜ್ಞಿ ಚೇಳನಾದೇವಿಯ ಆದರದ ಕರೆಯೋಲೆಯಾಗಿದ್ದಿತು. ಶ್ರಮಣ ಸಿಂಹ ಮಹಾವೀರನ ಸಂಘವು ರಾಜಗೃಹಕ್ಕೆ ಬರಬೇಕೆಂದು ಅವಳ ಬಯಕೆಯಾಗಿದ್ದಿತು. ಅಲ್ಲಿಯ ಸಾಮ್ರಾಜ್ಯದ ಸ್ಥಿತಿಯು ಈಗ ಹೇಗೆ ಅನುಕೂಲವಾಗಿದೆ ಎಂಬುದನ್ನೂ ವಿವರಿಸಿ ಬರೆದಿದ್ದಳು, ಆ ಮಹಾಸತಿ ಚೇಳನಾ.

ಭಗವಂತನಲ್ಲಿಯೂ ಆಶೆಯ ಕುಡಿಯೊಡೆಯಿತು. ಮಗಧಸಮ್ರಾಟನ ಶುಭ ಕಾಲ ಸಮೀಪಿಸಿದೆ. ಅಶುಭ ಕರ್ಮದ ಅಚ್ಛಾದನ ಕಳೆಯುತಲಿದೆ. ಅಹಿಂಸಾ ಸೂರ್ಯನ ಉದಯವಾಗಲಿದೆ. ಅಂತಲೇ ಸೋಮದತ್ತನ ಒಂದು ಮಾತಿನಿಂದ ಸೈನ್ಯವನ್ನು ವಿಶಾಲಾನಗರಿಯಿಂದ ರಾಜಗೃಹದತ್ತ ಒಯ್ದನು ಶುಭಕಾಲ ಒದಗಿ ಬಂದಾಗ ನಿಮಿತ್ತ ಮಾತ್ರ ನಾವಾಗಿರಲಿಕ್ಕೆ ಅಡ್ಡಿಯಾದರೂ ಏನು ? – ಎಂದು ಭಗವಂತ ವಿಚಾರಿಸಿ, ಸುಜ್ಯೇಷ್ಠೆಯ ಸೂಚನೆಗೆ ಸಮ್ಮತಿಯನ್ನು ವ್ಯಕ್ತಗೊಳಿಸಿದನು.

ಮಗಧ ಸೀಮೆಯಿಂದ ಬಂದ ಅನೇಕ ಜನ ಶ್ರಾವಕರು ಭಗವಂತನ ಹೆಸರಿನ ಜಯ ಜಯಕಾರ ಹಾಕಿದರು. ಹರ್ಷೋದ್ಗಾರವು ಮುಗಿಲು ಬಿರಿಯುವಂತೆ ದಿಗಂತವನ್ನು ಹೋಗಿ ಮುಟ್ಟಿತು.

ಎಲ್ಲರೂ ಭಗವಾನ್ ಮಹಾವೀರನಿಗೆ ಮತ್ತೊಮ್ಮೆ ವಂದಿಸಿ, ತಮ್ಮ ತಮ್ಮ ನಿವಾಸಗಳಿಗೆ ತೆರಳಿದರು.

ಭಗವಂತರು ಕುಳಿತಲ್ಲಿಯೇ ಧ್ಯಾನ ಮಗ್ನರಾದರು. ಮರುಕ್ಷಣದಲ್ಲಿ ಬಾಹ್ಯ ಲೋಕದ ಎಲ್ಲ ಸಂಗತಿಗಳನ್ನು ಮರೆತರು. ಅಂತರಾತ್ಮನಲ್ಲಿ ತನ್ಮಯರಾಗಿ ಬಿಟ್ಟರು, ಒಂದಾಗಿ ಹೋದರು.

—++—

೬

ಚೇಳನಾದೇವಿಯ ಚತುರೋಕ್ತಿಗಳಿಂದ.

ರಾಜಗೃಹದ ಬಿಂಬಿಸಾರ ಬೀದಿಯಲ್ಲಿ ಇದೀಗ ಜನರ ಓಡಾಟಕ್ಕೆ ಆರಂಭವಾಗಿದೆ. ಇನ್ನೂ ರವಿಯು ನಗರವನ್ನೆಲ್ಲ ತನ್ನ ಕಿರಣಗಳಿಂದ ಬೆಳಗಿದ್ದಿಲ್ಲ. ಅಂದರೂ ರಾಜಗೃಹದಲ್ಲಿಯ ಅನೇಕ ಸೌಧಗಳು ಸ್ವರ್ಣಕಿರಣಗಳ ಸುಖವನ್ನು ಅನುಭವಿಸುತ್ತಿದ್ದುವು. ವಿಪುಲಾಚಲದ ಆಚೆಗಿನ ಆಕಾಶವು ಸುಂದರ ಸರೋವರದಂತೆ ಕಂಗೊಳಿಸುತ್ತಿತ್ತು. ಅಲ್ಲಿ ರವಿಯು ಇದೀಗ ಮೂಡಿ ಬಂದುದರಿಂದ ಮೋಡಗಳೆಲ್ಲ ಸುವರ್ಣ ವರ್ಣವನ್ನು ತಳೆದಿದ್ದುವು. ಆ ತಿಳಿಯದ ಮೋಡಗಳು ತೆರೆ ತೆರೆಯಾಗಿ ಪೂರ್ವ ದಿಕ್ಕನ್ನೆಲ್ಲ ವ್ಯಾಪಿಸಿ ವಿಸ್ತಾರವಾದ ಸರಸ್ಸಿನಂತೆ ಕಂಗೊಳಿಸುತ್ತಿದ್ದುವು. ಅದರಲ್ಲೂ ಕೆಲವು ತುಂಡು ಮೋಡಗಳು ಇನ್ನೂ ಹೆಚ್ಚಿನ ಕಾಂತಿಯನ್ನು ಹೊಂದಿ ಕಮಲಗಳ ಕಲ್ಪನೆಯನ್ನುಂಟು ಮಾಡುತ್ತ ಅಲ್ಲಲ್ಲಿ ಆಗಸದಲ್ಲಿ ತೇಲುತ್ತಿದ್ದುವು. ಕುತನಿಯ ಅಂಗಿಯನ್ನು ತೊಟ್ಟು ನಿಂತ ಗಿರಿಧರ ಕೂಟದ ಶಿರಸ್ಸೂ ಕೂಡ ಈಗಾಗಲೇ ಸುವರ್ಣ ಕಿರೀಟವನ್ನು ಧರಿಸಿದಂತೆ ಹೂಬಿಸಿಲನ್ನು ಹೊಂದಿ ಮೆರೆಯುತ್ತದೆ.

ಹುಟ್ಟಾ ಪ್ರಕೃತಿಯ ಮಡಿಲಲ್ಲಿಯೇ ಬೆಳೆದ, ನಿಸರ್ಗ ಪ್ರೇಮಿಯಾದ ಚೇಳನಾದೇವಿಗೆ ಈ ಹೊರಗಿನ ಮುಗಿಲ ಸೌಂದರ್ಯದ ಕಡೆಗೆ ಲಕ್ಷ್ಯವೇ ಇರಲಿಲ್ಲ. ಹಾಗೆಯೇ ಮಗನ ಮಾತಿಗೆ ಮನತೆತ್ತು ಮುಂದೆ ಮುಂದೆ ಸಾಗುತ್ತಿದ್ದಾಳೆ. ಇನ್ನೂ ಗಣಧರ ಇಂದ್ರಭೂತಿಯ ಬೆಳಗಿನ ಪ್ರವಚನಕ್ಕೆ ಅವಕಾಶವಿದ್ದಿತು. ಆದರೂ ತಾಯಿ ಮಕ್ಕಳು ದಿನಕ್ಕಿಂತ ಸ್ವಲ್ಪ ಬೇಗನೆ ಗಿರಿಧರ ಕೂಟದ ಕಡೆಗೆ ಬಿಂಬಿಸಾರ ಬೀದಿಯಿಂದ ಸಾಗಿದ್ದಾರೆ. ಅವರಿಗೆ ಪ್ರವಚನ ಶ್ರವಣಕ್ಕಿಂತ ಅರಮನೆಯ ಅನೇಕ ಸಂಗತಿಗಳನ್ನು ಕುರಿತು ತುಂಬ ಮಾತನಾಡಬೇಕಿತ್ತು. ಅದಕ್ಕಂತಲೇ ತುಸು ಲಗೂನೆ ಅವರಿಬ್ಬರೇ ಹೊರಟಿದ್ದರು. ದಾರಿಯಲ್ಲಿ ಆಗ - ಈಗ ಒಬ್ಬಿಬ್ಬರು ಗಿರಿಧರ ಕೂಟವನ್ನಿಳಿದು ಮುನಿದರ್ಶನವನ್ನು ತೀರಿಸಿಕೊಂಡವರು ಬರುತ್ತಿದ್ದರು. ಆಗೆಲ್ಲ ಇವರ ಮಾತು ತಡೆ ತಡೆದು ಮುಂದೆ ಸಾಗುತ್ತಿದ್ದಿತು.

"ಏನಾದರೂ ನನಗೆ ಇಂಥ ಆತುರ ಸನ್ಯಾಸ ಸೇರಲಿಲ್ಲ...ನೋಡು ತಾಯೀ ....!" ಅಜಾತಶತ್ರುವು ರಾಜಮಾರ್ಗದಲ್ಲಿ ಹಿಂದೆ ಮುಂದೆ ಯಾರೂ ಇಲ್ಲದುದನ್ನು ಗಮನಿಸಿ ಮೆಲ್ಲನೆ ತಾಯಿ ಚೇಳನಾದೇವಿಗೆ ನುಡಿದ.

"ಮಗೂ ! ಇನ್ನು ಮಾತನಾಡಿದರೆ ಏನು ಪ್ರಯೋಜನ ? ಇಷ್ಟು ಭಾವ ಜೀವಿಯಾದ ಹುಡುಗಿ ಎಂಬುದನ್ನು ನಾನು ಭಾವಿಸಿರಲಿಲ್ಲ. ಇದೀಗ ಹುಟ್ಟಿದ ಒಂದು ಗಂಡು ಮಗುವನ್ನೂ ಬಿಟ್ಟು ದೀಕ್ಷೆ ತಕ್ಕೊಳ್ಳುವಷ್ಟು ಅವಳ ಮನಸ್ಸು ವೈರಾಗ್ಯದಿಂದ ತುಂಬೀತೆಂದು ನಾನು ಕನಸು ಮನಸಿನಲ್ಲಿಯೂ ಕಲ್ಪಿಸಿರಲಿಲ್ಲ."

"ಹಗಲು ಹನ್ನೆರಡು ಗಂಟೆಯೂ ಮುನಿಗಳ ಸಹವಾಸ .... ಬೆಳಗಿನಲ್ಲಿ ಅಧ್ಯಾತ್ಮಬೋಧೆ, ಆಮೇಲೆ ಆಹಾರದಾನದ ಗಡಬಿಡಿ. ಮಧ್ಯಾನ್ಹ ಧರ್ಮ ಪ್ರವಚನ, ಸಾಯಂಕಾಲ ಸಾಮಾಯಿಕ, ಇರುಳು ಮಂದಿರದಲ್ಲಿ ಪುರಾಣ ಶ್ರವಣ .... ತೀರಿತಲ್ಲ.... ಉಳಿದ ಪ್ರಪಂಚದ ಕಡೆಗೆ ಲಕ್ಷ್ಯ ಹಾಕಲು ಸಮಯವಾದರೂ ಇರುವುದೆಲ್ಲಿ ?" ಸ್ವಲ್ಪ ಸಿಟ್ಟಿನ ಸ್ವರದಲ್ಲಿಯೇ ಅಜಾತಶತ್ರುವು ತಾಯಿಗೆ ಕೇಳಿದ.

"ಆಯಿತು; ಕರ್ಮದ ಫಲವಿದ್ದಂತೆ ಭೋಗಿಸಬೇಕಲ್ಲ ಅಜಾತ....!" ಸ್ವಲ್ಪ ಮಾತನ್ನು ತಡೆದು, ಎರಡು ಹೆಜ್ಜೆ ಮುಂದೆ ಸಾಗಿದ ಮೇಲೆ ಚೇಳನಾ ನುಡಿದಳು " ಅಂದು ನಾವು ಭಗವಾನರ ಸಂಘದೊಡನೆ ಪಾವಾಪುರಿಗೆ ಅವಳನ್ನು ಕರೆದುಕೊಂಡೇ ಹೋಗಬಾರದಿತ್ತು. ನಮ್ಮ ಸೇವೆಗೆಂದು ಬಂದ ಅವಳು ತೀರ್ಥಂಕರರ ಉಪದೇಶದಲ್ಲಿ ತನ್ಮಯವಾಗಿ ಹೋದಳು. ಆ ಪ್ರಭಾವದಿಂದಲೇ ಈಗ ಅವಳು ದೀಕ್ಷೆ ತಕ್ಕೊಂಡದ್ದು ಮುಂದೆ ಗರ್ಭಿಣಿಯಾದಳೆಂದೇ ಇಷ್ಟು ದಿನ ತಡೆದಳೆನ್ನು .... ಇಲ್ಲದಿದ್ದರೆ ಭಗವಂತರಿಂದಲೇ ಅವಳು ಸನ್ಯಾಸ ಸ್ವೀಕರಿಸುತ್ತಿದ್ದಳು."

ತಾಯಿ ಏನು ಹೇಳಿದರೂ ಅಜಾತಶತ್ರುವಿನ ಮನಸ್ಸು ಶಾಂತವಾಗುವಂತೆ ಇರಲಿಲ್ಲ. ಆ ತರುಣ ಹೃದಯದ ನೋವನ್ನು ಶ್ರೇಣಿಕನಾಗಲಿ, ಚೇಳನಾ ದೇವಿಯಾಗಲಿ ತಿಳಿಯುವುದು ಸಾಧ್ಯವಿರಲಿಲ್ಲ. ಅಷ್ಟು ಅಜಾತಶತ್ರುವು ತನ್ನ ಹೆಂಡತಿಯನ್ನು ಪ್ರೀತಿಸುತ್ತಿದ್ದನು. ಅವರದು ಪ್ರೇಮ ವಿವಾಹ. ತನ್ನ ನಲ್ಲೆಯ ಸಹವಾಸದ ಸುಖದಲ್ಲಿಯೇ ಆತ ಸ್ವರ್ಗವನ್ನು ಕಂಡವ.

ತಂದೆಯು ಎಷ್ಟು ವಿರೋಧಿಸಿದರೂ ಅವಳನ್ನೇ ಹಟಹಿಡಿದು ಲಗ್ನವಾಗಿದ್ದ ಅವಳಿಗಾಗಿ ಸಾಮ್ರಾಜ್ಯವನ್ನೂ ಕೂಡ ಬಿಡಲು ಸಿದ್ಧನಾಗಿದ್ದ ಅಂಥವಳು ಇಂದು ಇವನನ್ನೇ ಬಿಟ್ಟು ನಿರ್ಗ್ರಂಥ ಮುನಿಗಳ ಮಾತನ್ನು ಕೇಳಿ, ಜಿನ ದೀಕ್ಷೆಯನ್ನು ತಕ್ಕೊಂಡು ಬಿಟ್ಟಿದ್ದಳು ! ಮನೆಯಲ್ಲಿ ಮೂರು ವರ್ಷದ ಮಗು ವೊಂದು ಬೇರೆ. ಎಲ್ಲವನ್ನೂ ನೆನೆದಾಗ ಅವನ ಮನಸ್ಸು ಕಲಕುವುದು. ಈ ಮುನಿಸಂಘ, ಧರ್ಮಬೋಧೆಗಳೆಂದರೆ ಅವನಿಗೆ ಈಗೀಗ ಬೇಸರವಾಗಿ ಹೋಗಿದ್ದುವು. ಇಂದು ಅವನಿಗೆ ಸಂಘದಲ್ಲಿ ಪತ್ನಿಯ ಮುಖ ಕಾಣುವದಿತ್ತೇ ಹೊರತಾಗಿ ಇಂದ್ರಭೂತಿಗಳ ಉಪದೇಶವನ್ನು ಕೇಳುವದಿರಲಿಲ್ಲ. ಅವನ ಕನಸಿನ ಸಂಸಾರ ಮಂದಿರವೇ ಇಂದು ಕುಸಿದು ಬಿದ್ದು ಹೋಗಿದ್ದಿತು.

"ಅಲ್ಲ; ಅವ್ವ ! ತಾವು ಇಷ್ಟು ಮುಪ್ಪಿನವರಾದರೂ ಇನ್ನೂ ದೀಕ್ಷೆ ಸ್ವೀಕರಿಸದ ತಂದೆಯವರು ಈ ಎಳೆ ವಯಸ್ಸಿನ ಸೊಸೆಯ ಸನ್ಯಸನಕ್ಕೆ ಸಮ್ಮತಿಯನ್ನಾದರೂ ಹೇಗೆ ಇತ್ತರೆನ್ನುವೆ ?"

ಮಗನ ಈ ಕಟು ಸತ್ಯವನ್ನು ಕೇಳಿ ಚೇಳನಾರಾಣಿಯ ಹೃದಯ ನಡುಗಿತು. ಮುಂದೆ ಇನ್ನೂ ಏನೇನು ಭಯಂಕರ ಪ್ರಸಂಗ ಕಾದಿದೆಯೋ ಎಂದು ಚಿಂತಿಸಿದಳು. ಅರಮನೆಯ ಇತ್ತೀಚಿನ ರಾಜಕಾರಣದ ಅರಿವು ಮಗನಿಗೆ ಇಲ್ಲವೆಂದಲ್ಲ. ಆದರೂ ತಂದೆಯ ವಿಷಯಕ್ಕೆ ಈಗ ಇಂಥ ಕಠೋರ ವಚನಗಳನ್ನು ಆಡುವದೆಂದರೆ .... ಎಂದೇನೇನೋ ವಿಚಾರಿಸುತ್ತ ನುಡಿ ದಳು :—

"ಕಂದಾ, ಅವರು ಸಮ್ರಾಟ್‌ರು ! ಸಮ್ರಾಟ್‌ರಾಗಿಯೇ ಅವರಿಗೆ ಬಾಳಿ ಗೊತ್ತು. ಸೊಸೆಯಾದರೇನು, ಮಗನಾದರೇನು ? – ಎಲ್ಲರೂ ಅವರ ಸಾಮ್ರಾಜ್ಯದ ಪ್ರಜೆಗಳು. ಅವರ ಸ್ವತ್ತುಗಳು. ಈ ಕಲ್ಪನೆಯಿಂದಲೇ ಅವರು ವರ್ತಿಸುವರು. ಅದಕ್ಕೆ ಅಡ್ಡ ಬಂದರೆ ಅವರಿಗೆ ಹಸನವಾಗದು. ಹಿಂದೆ ಸೋಮದತ್ತನ ಕೂಡ ಹೇಗೆ ವರ್ತಿಸಿದರು. ನೋಡಲಿಲ್ಲ ನೀನು ... ಇನ್ನೂ ನೀನು ಆಗ ಇದೀಗ ಹುಟ್ಟಿದ ಕೂಸು. ವೈಶಾಲಿಯ ರಣ ಭೂಮಿಯಲ್ಲಿ ಅವರಿಗೆ ವಿರೋಧಿಯಾಗಿ ವಾದಿಸಿದ ...."

" ಅದೆಲ್ಲ ಆಯಿತು. ಆದರೆ ಇಂದು ಅಂದಿನ ಸಾಮ್ರಾಜ್ಯವಿಲ್ಲವಲ್ಲ.... ಭಗವಾನ್ ಮಹಾವೀರ ಬುದ್ಧರಿಂದ ರಾಜ್ಯದ ಪ್ರಜೆಗಳಲ್ಲಿ ಎಂಥ ಕ್ರಾಂತಿ–

ಯಾಗಿ ಬಿಟ್ಟಿದೆ ! ಬ್ರಾಹ್ಮಣವರ್ಗವೇ ಅವರ ಶಿಷ್ಯವರ್ಗದಲ್ಲಿ ಸೇರಿ ಹೋಗ ಹತ್ತಿದೆ. ಅಂದಿನ ಸಾಮ್ರಾಜ್ಯದ ಬಿಗುವು ಈಗ ಉಳಿದಿಲ್ಲ .... "

ತಾಯಿಯ ಮಾತನ್ನು ತಡೆದು ಅಜಾತ ನಡುವೆಯೇ ವ್ಯತ್ಯಾಸವಾದ ಪರಿಸ್ಥಿತಿಯನ್ನು ವಿವರಿಸತೊಡಗಿದ.

" ಪರಿಸ್ಥಿತಿಗೆ ಹೊಂದಿಕೊಂಡು ಹೋಗಿ, ತನ್ನ ಧ್ಯೇಯವನ್ನು ಸಾಧಿಸಿಕೊಳ್ಳುವ ಯೋಗ್ಯತೆ ಲೋಕದಲ್ಲಿ ಎಷ್ಟು ಜನರಿಗೆ ಇರುವುದು ಹೇಳು ಅಜಾತ ....? ಅವರಿಗೆ ಹೆಸರಿಡುವ ನೀನೂ ಸಹ ಈಗ ಒದಗಿದ ಪರಿಸ್ಥಿತಿಯನ್ನು ಸರಿಯಾಗಿ ಎದುರಿಸುತ್ತಿರುವೆಯಾ ? "

ಮಾತು ಚೇಳನಾದೇವಿಯ ಮನಸ್ಸಿನ ಪೂರ್ಣ ಚಿತ್ರವಾಗಿತ್ತು.

" ಹೂಂ ! ಪತ್ನಿ ದೀಕ್ಷೆ ತಕ್ಕೊಂಡು ತೆರಳಿದಳು... ತಂದೆ ಎದುರಾಡಿದರೆ ಸಾಮ್ರಾಜ್ಯದ ಸೀಮೆಯಲ್ಲೂ ನಿಲ್ಲಲು ಅವಕಾಶ ಕೊಡುವದಿಲ್ಲ.... ಈಗಲೇ ಅಷ್ಟು ಮನಸ್ಸುಗಳು ದೂರಾಗಿ ಬಿಟ್ಟವೆ... ಇನ್ನು ನಾನೂ ಒಬ್ಬ ನಿರ್ಗ್ರಂಥರ ಬೆನ್ನು ಹತ್ತಿ ಹೋಗಬೇಕಲ್ಲ ... ! "

" ಹ್ಞಾ ऽ ! ಇದನ್ನೇ ಭಾವಿಸು... ಇದರಲ್ಲಿಯೇ ನೀನು ಸಮ್ರಾಟ್ ನಾಗುವ ಹಂಚಿಕೆಯನ್ನು ಹುಡುಕು. "

" ಸಮ್ರಾಟ್ .... ! ? ಅದೆಂದೋ ... ಹೋಗಿದೆ.... ಈಗ ಪ್ರಜೆಗಳ ಸಭೆಯನ್ನು ಕೇಳದೆ ಯಾವ ಕಾರ್ಯವನ್ನು ತಂದೆಯರೇ ಮಾಡುವಂತಿಲ್ಲ. "

" ಆಯಿತು; ಮುಂದೆಯೂ ಹಾಗೇ ನಡೆದರಾಯಿತು ... "

" ನಾನೋ ಅಭಯಕುಮಾರನೊ ?"

ಮಗನ ಈ ಪ್ರಶ್ನೆಯು ಚೇಳನಾ ರಾಣಿಯ ಹೃದಯವನ್ನೇ ಅಲ್ಲೋಲ ಕಲ್ಲೋಲವಾಗಿಸಿ ಬಿಟ್ಟಿತು. ತನ್ನ ಮಗನನ್ನು ಬಿಟ್ಟು ಅಭಯಕುಮಾರನನ್ನು ಶ್ರೇಣಿಕರು ಪಟ್ಟಕ್ಕೆ ಕೂಡಿಸುವರೆ ?

ನನ್ನನ್ನು ಅವರಿಗೆ ಸಂಪಾದಿಸಿಕೊಟ್ಟ ಪ್ರೀತಿಯ ಮಗ ಅಭಯಕುಮಾರ; ಮಹಾತಂತ್ರಗಾರ. ಕುಶಲ ರಾಜಕಾರಣಿ ...

ಸೋಮಶೂರ ಸೇನಾನಾಯಕ.... ಆದರೆ ತಂದೆಗೆ ಪ್ರೀತಿ ಪಾತ್ರನಲ್ಲ .... ಅಂದರೂ ಸುಮ್ಮನೆ ಕೂಡುವವನಲ್ಲ. ಭಗವಾನ್ ಮಹಾವೀರರ

ಪ್ರೀತಿಯ ಶಿಷ್ಯನಾದುದರಿಂದ ಇವರ ಮನಸ್ಸು ಒಲಿದರೂ ಒಲಿಯ ಬಹುದೇನೋ !

ಇಂಥದರಲ್ಲಿ ನನ್ನ ಅಜಾತನಿಗೆ ಸಾಮ್ರಾಜ್ಯದ ಪಟ್ಟದೊರೆಯಬೇಕಾದರೆ ? ಅದೆಂತು ಪ್ರಯತ್ನಿಸಬೇಕು... ?

ಈ ವಿಚಾರಗಳಿಂದ ಚೇಳನಾರಾಣಿಯ ಮುಖದ ಮೇಲೆ ಚಿಂತೆಯ ರೇಷೆಗಳು ಮೂಡಿದುವು. ಸಮೀಪದಲ್ಲಿ ಬಂದ ಗಿರಿಧರ ಕೂಟದ ಗುಹಾನಿವಾಸವೂ ಕೂಡ ಸಾವಿರಯೋಜನದಂತೆ ಅವಳಿಗೆ ಎನಿಸತೊಡಗಿತು.

೨

ಭಗವಾನ್ ಮಹಾವೀರರ ಪ್ರಮುಖ ಗಣಧರನಾದ ಇಂದ್ರಭೂತಿಯ ಧರ್ಮಸಭೆಯಲ್ಲಿ ಶ್ರಾವಕ ಮುಖ್ಯನಾಗಿ ಸಮ್ರಾಟ್ ಶ್ರೇಣಿಕ ಕುಳಿತಿದ್ದಾನೆ. ಅವನ ಪಕ್ಕದಲ್ಲಿಯೇ ಚೇಳನಾದೇವಿ ಕುಳಿತ್ತಿದ್ದಾಳೆ. ರಾಜನ ಮುಖವು ಪ್ರಸನ್ನವಾಗಿರುವಷ್ಟು ರಾಣಿಯ ಮನಸ್ಸು ಸುಪ್ರಸನ್ನವಾದಂತಿರಲಿಲ್ಲ ! ಅದಾವುದೋ ಒಂದು ಚಿಂತೆಯ ತೆರೆಯು ಆಗಾಗ ಅವಳ ಮುಖದಲ್ಲಿ ಆವರಿಸುತ್ತಿದ್ದಿತು.

ಭಗವಂತರ ತರುವಾಯ ಶ್ರಮಣಧರ್ಮ ಪ್ರಚಾರದ ಕಾರ್ಯವು ಅಷ್ಟು ಬಲವತ್ತರವಾಗಿರಲಿಲ್ಲ. ಮಹಾವೀರರ ಶಿಷ್ಯವರ್ಗದಲ್ಲಿಯೇ ಕೆಲವರು ಭಗವಂತನ ವಚನಗಳಿಗೆ ವಿವಿಧ ಅರ್ಥವನ್ನು ಕಲ್ಪಿಸಿ ಮತಾಂತರಗಳನ್ನು ಉತ್ಪನ್ನ ಮಾಡುತ್ತಿದ್ದರು. ಇದನ್ನೆಲ್ಲ ಕಂಡು ಇಂದ್ರಭೂತಿಯು ಸಮ್ರಾಟ್ ಶ್ರೇಣಿಕನ ಸಹಾಯದಿಂದ ಭಗವಂತನ ಶಿಷ್ಯರಲ್ಲಿ ಸಂಘಟನೆಯನ್ನು ತರಲು ಯತ್ನಿಸೋಣವೆಂದು ರಾಜಗೃಹಕ್ಕೆ ತನ್ನ ಸಂಘಸಹಿತ ಬಂದಿದ್ದನು. ಆದರೆ ಇಲ್ಲಿಯ ರಾಜ ಮನೆತನದೊಳಗಿನ ಅಂತಃಕಲಹವು ಅವನ ವಿಚಾರಗಳನ್ನು ಮಂಕುಗೊಳಿಸಿ ಬಿಟ್ಟದ್ದಿತು.

ಅನೇಕ ಧರ್ಮ ಕಥೆಗಳನ್ನು ದೃಷ್ಟಾಂತಗಳನ್ನೂ ಹೇಳಿ ರಾಜಮನೆತನದ ಎಲ್ಲರ ಮನಸ್ಸನ್ನೂ ಇಂದ್ರಭೂತಿಯು ಒಂದು ಗೂಡಿಸಲು ಯತ್ನಿಸಿದ ಕೊನೆಗೆ ಸಮ್ರಾಟ್‌ನ ಮನಸ್ಸನ್ನು ಧರ್ಮದಲ್ಲಿ ನಿಲ್ಲಿಸಿದ. ಅವನ ಕಾರ್ಯದ ಮಹತಿಯನ್ನು ವಿವರಿಸಿದ. ಆಗ ಸಮ್ರಾಟ್ ಶ್ರೇಣಿಕ ವಿನಯದಿಂದ ನುಡಿದ;

"ಶ್ರಮಣ ಧರ್ಮದ ಏಳಿಗೆಗೆ ನನ್ನಿಂದೇನಾಗಬೇಕು ಹೇಳಿ. ? "

"ಭಾವೀ ಕಾಲದ ಪ್ರಥಮ ತೀರ್ಥಂಕರರಿಗೆ ನಾವು ಧರ್ಮವನ್ನು ಬೋಧಿಸಬೇಕೆ ?

ಗಹಗಹಿಸಿ ನಕ್ಕು ಇಂದ್ರಭೂತಿಯು ಸಭೆಯ ಕಡೆಗೆ ನೋಡಿ, ನುಡಿದನು. ಶ್ರೇಣಿಕನ ಮುಖದ ಮೇಲೆಯೂ ಸ್ವಲ್ಪ ಹೆಮ್ಮೆಯ ಭಾವವು ಮೂಡಿ ಮಾಯವಾಯಿತು. ನಾನು ಪ್ರಥಮ ತೀರ್ಥಂಕರ! ಭಗವಂತನ ವಾಕ್ಯವಂತೆ ! – ಎಂದೆನೇನೋ ಮನಸ್ಸಿನಲ್ಲಿ ಭಾವ ತೆರೆಗಳು ಎದ್ದುವು. ಮೆಲ್ಲನೆ ಇಂದ್ರಭೂತಿಗೆ ವಂದಿಸಿ,

"ಭಗವಾನ್ ನಾನು ಯಾವಾಗಲೂ ದೀಕ್ಷೆ ತಕ್ಕೊಳ್ಳಲು ಸಿದ್ಧನಾಗಿರುವೆ. ನನಗೂ ರಾಣಿಗೂ ಶ್ರಮಣ ದೀಕ್ಷೆ ಕೊಟ್ಟು ಬಿಡಿರಿ .... "

"ಇನ್ನೂ ಶ್ರಾವಕರಾಗಿ – ಸಮ್ರಾಟರಾಗಿ ಮಾಡಬೇಕಾದ ಕಾರ್ಯಗಳು ವಿಪುಲವಾಗಿದೆ ಭಗವಾನ್ ! "

ನಡುವೆಯೇ ಚೇಳನಾರಾಣಿ ಮಾತು ಮುನ್ನೂಕಿದಳು.

ಶ್ರೇಣಿಕ, ರಾಣಿಯ ಮುಖದ ಕಡೆಗೆ ಒಂದು ಕ್ಷಣ ನೋಡಿ. ಭಗವಂತರ ಸನ್ನಿಧಿಯಲ್ಲಿ ನನ್ನ ಮಾತಿಗೆ ಇವಳು ಸುಮ್ಮನೆ ಸಮ್ಮತಿಸಲಿಲ್ಲವಲ್ಲ ! - ಎಂದು ತುಸು ನೊಂದುಕೊಂಡ. ಅಂತೆಯೇ ಸ್ವಲ್ಪ ಮನಸ್ಸು ರೋಸಿಯೂ ನುಡಿದ :—

" ಮಾಡಬೇಕಾದ ಕಾರ್ಯ ಏನುಳಿದಿದೆ ? ಅಭಯಕುಮಾರ ಸಾಮ್ರಾಜ್ಯದ ಆಡಳಿತವನ್ನು ಸಮರ್ಪಕವಾಗಿ ನೋಡಿಕೊಳ್ಳುತ್ತಿದ್ದಾನೆ. ಪ್ರಜೆಗಳೆಲ್ಲ ಅವನಿಗೆ ಸಹಕರಿಸುತ್ತಿದ್ದಾರೆ. ಎಲ್ಲೆಡೆಗೂ ಶ್ರಮಣ ಧರ್ಮ ಸರಾಗವಾಗಿ ಬೆಳೆಯುತ್ತಿದೆ .... "

" ಇಲ್ಲ ಪ್ರಭೂ ! ಇನ್ನೂ ಬೆಳೆಯುತ್ತಿಲ್ಲ.... ! ಅದನ್ನೇ ನಾವೀಗ ಮಾಡಬೇಕಾಗಿದೆ. ಅದಕ್ಕಾಗಿ ಸಾಮ್ರಾಜ್ಯವೇ ಸಿದ್ಧವಾಗಿ ನಿಲ್ಲಬೇಕಾಗಿದೆ.... ?

ಇಂದ್ರಭೂತಿಯು ಇನ್ನೂ ಸ್ಪಷ್ಟಮಾಡಿ, ತನ್ನ ಉದ್ದೇಶವನ್ನು ಸಾರಿದನು. " ಸಾಮ್ರಾಜ್ಯವೇ ತಮ್ಮ ಸೇವೆಗೆ ಸಿದ್ಧವಾಗಿದೆ ಭಗವಾನ್ ! ತಮ್ಮ ಆಜ್ಞೆಯಾದಂತೆ ವರ್ತಿಸುವೆ. ಬೇಕಾದುದನ್ನು ಹೇಳಿ ... "

" ನೋಡು ಸಮ್ರಾಟ್ ! ಭಗವಾನ್ ಮಹಾವೀರರಂಥವರು ನಮ್ಮ ಸಂಘಕ್ಕೆ ನೇತೃಗಳಾಗಿರುವಾಗ ಯಾವ ಚಿಂತೆಯೂ ಇರಲಿಲ್ಲ. ಎಲ್ಲಿಡೆಗೂ ಯಜ್ಞಯಾಗಾದಿಗಳ ಸೊಲ್ಲು ಅಡಗಿದ್ದಿತು. ಹಿಂಸೆಯ ಹೆಸರೂ ಸಹ ನಾಡಿನಲ್ಲಿ ಇರಲಿಲ್ಲ. ಈಗ ಮತ್ತೆ ಅಲ್ಲಲ್ಲಿ ಹಿಂಸೆ ನಡೆಯುತ್ತಿದೆ. ಜನ ಹುಚ್ಚು ಹುಚ್ಚಾಗಿ ವರ್ತಿಸುತ್ತಿದೆ. ಅದರಿಂದ ಯಜ್ಞಗಳನ್ನು ಪ್ರತಿಭಟಿಸುವ ರಾಜ್ಯಶಾಸನಗಳನ್ನು ಮಾಡಬೇಕು. ಯಜ್ಞ ಮಂಟಪಗಳ ಮೇಲೆ ಋತ್ವಿಜರ ಮೇಲೆ ಬಂಧನಗಳನ್ನು ಹಾಕಬೇಕು. ರಾಜ್ಯದಲ್ಲೆಲ್ಲ ಭಗವಂತನ ವಾಕ್ಯಗಳನ್ನು ಬರೆಯಿಸಿದ ಕಂಬಗಳನ್ನು ನಿಲ್ಲಿಸುವುದು. ದೂರ ದೂರದ ದೇಶಗಳಿಗೆ ಪ್ರಚಾರಕರನ್ನು ಕಳಿಸುವುದು.... "

" ಈ ಎಲ್ಲ ಕಾರ್ಯಗಳನ್ನು ನಾಳೆಯಿಂದಲೇ ಮಾಡುವಂತೆ ಅಭಯ ಕುಮಾರನಿಗೆ ಹೇಳಿ ಬಿಡುವೆ .... "

ಶ್ರೇಣಿಕ ಮಹಾರಾಜನು ತನ್ನ ಒಪ್ಪಿಗೆಯನ್ನು ಸೂಚಿಸಿದನು.

ಚೇಳನಾ ರಾಣಿಯು ನಡುವೆಯೇ ಮಾತು ಸೇರಿಸಿ, ಮೆಲ್ಲನೆ ನುಡಿದಳು.

" ಪವಿತ್ರವಾದ ಈ ನಮ್ಮ ಶ್ರಮಣ ಧರ್ಮ ಪ್ರಚಾರ ಕಾರ್ಯವು ಬಹಳ ಪವಿತ್ರವಾದುದು. ಆತ್ಮ ಕಲ್ಯಾಣಕಾರಿಯಾದುದು. ಅಲ್ಲದೆ ಬಹು ವಿಸ್ತಾರವಾದ ಕಾರ್ಯಕ್ರಮುಗಳುಳ್ಳದು. ಇದನ್ನೂ ರಾಜ್ಯ ಶಕಟವನ್ನೂ ಕೂಡಿಯೇ ಸಾಗಿಸುವುದು ಒಬ್ಬರಿಂದ ಸಾಧ್ಯವೆನಿಸದು. ತಾವಂತೂ ಯಾವಾಗಲೂ ಭಗವಂತನ ಧ್ಯಾನದಲ್ಲಿ ಸಂಸಾರವನ್ನೇ ಮರೆತು ಬಿಟ್ಟಿರುವಿರಿ. ಅದರಿಂದ ಕುಮಾರ ಅಭಯು, ಭಗವಾನ್ ಇಂದ್ರಭೂತಿಗಳು ಸೂಚಿಸುವ ಧಾರ್ಮಿಕ ಚಟುವಟಿಕೆಗಳನ್ನೆಲ್ಲ ನೆರವೇರಿಸುವ ಅಧಿಕಾರವನ್ನು ಹೊಂದಲಿ. ಸಧ್ಯ ರಾಜಕಾರಭಾರವನ್ನು ಅಜಾತಶತ್ರುವು ನಿರ್ವಹಿಸಲಿ, ಅವನಿಗೂ ಅನುಭವ ದೊರೆತಂತಾಗುವುದು .... "

ಈ ವಿಷಯ ಸಮ್ರಾಟನ ಇಚ್ಛೆಯನ್ನು ಅವಲಂಬಿಸಿದ್ದು, ಇದರಲ್ಲಿ ಗಣಧರರು ಹಸ್ತಕ್ಷೇಪಮಾಡಿ, ತಮ್ಮ ತಪಸ್ಸಿಗೂ ಸ್ಥಾನಕ್ಕೂ ಕುಂದನ್ನುಂಟು ಮಾಡಿಕೊಳ್ಳುವುದು ಸರಿಯಲ್ಲವೆಂದು ಇಂದ್ರಭೂತಿಗಳು ಭಾವಿಸಿ ಸುಮ್ಮನಾದರು.

ರಾಣಿಯ ಅಂತರ್ಯವನ್ನು ತಿಳಿದ ಶ್ರೇಣಿಕ ಖಂಡಿತ ಸ್ವರದಲ್ಲಿಯೇ ನುಡಿವ:—

" ಅಭಯಕುಮಾರ ಹಿರಿಯ. ಈಗಾಗಲೇ ರಾಜ್ಯವನ್ನು ಹೇಗೋ ನೋಡಿಕೊಳ್ಳುತ್ತಿದ್ದಾನೆ. ಸಹಾಯಕ್ಕೆ ಪ್ರಜೆಗಳ ಸಮಿತಿಯೊಂದನ್ನು ನಿಯಮಿಸಿಕೊಂಡಿದ್ದಾನೆ. ತನ್ನ ದೃಷ್ಟಿಯಲ್ಲಿ ಆಡಳಿತವನ್ನು ನಡೆಯಿಸಿದ್ದಾನೆ. ಜನರೂ ಅದನ್ನು ಒಪ್ಪಿದಂತಿದೆ. ಈಗ ಅವನನ್ನು ಅಲ್ಲಿಂದ ಅಲ್ಲಾಡಿಸುವದು ರಾಜ ಕಾರಣ ಎನಿಸದು. ಮನೆತನದ ಕಾರಣ ಎನಿಸೀತು. ಆದರಿಂದ ಅಜಾತಶತ್ರುವೇ ಧರ್ಮಾಧಿಕಾರಿಯಾಗಿ ಭಗವಂತರ ಆಜ್ಞೆಗಳನ್ನು ನೆರವೇರಿಸಲಿ. ಅವನಿಗೆ ಎಲ್ಲ ಸಹಾಯವನ್ನೂ ಸಲ್ಲಿಸುವಂತೆ ಅಭಯಕುಮಾರನಿಗೆ ಹೇಳುವ. "

" ಸಧ್ಯಕ್ಕೆ ಈ ವಿಷಯದಲ್ಲಿ ಕುಮಾರನ ಮನಸ್ಸು ಸರಿಯಿಲ್ಲ.... "

ಚೇಳನಾದೇವಿಯೂ ಅಷ್ಟೇ ಖಂಡಿತ ಸ್ವರದಲ್ಲಿ ನುಡಿದಳು.

" ಅದೇಕೆ ? ಅವನ ಹೆಂಡತಿಯು ದೀಕ್ಷೆಯನ್ನು ತಕ್ಕೊಂಡು ಆರ್ಯಿಕೆಯಾದಳು. ನಮ್ಮೆಲ್ಲರ ವಂದನೆಗೆ ಪಾತ್ರಳಾದಳು. ಆತ್ಮ ಕಲ್ಯಾಣವನ್ನು ಸಾಧಿಸತೊಡಗಿದಳು. ಇವನಿಗೆ ಇದೂ ಆಗದೆ ? "

" ಅವಳು ದೀಕ್ಷೆ ತಕ್ಕೊಂಡಳೆಂದೇ ಇವನು ಈ ಸನ್ಯಾಸ ಧರ್ಮದ ವಿಷಯಕ್ಕೆ ಮನಸ್ಸು ನೊಂದವನಾಗಿದ್ದಾನೆ ಪ್ರಭೂ !"

ವಿನಯದಿಂದ ಮೃದುಸ್ವರದಲ್ಲಿ ಚೇಳನಾ ಹೇಳಿದಳು.

" ಅದಕ್ಕಂತಲೇ ರಾಜ್ಯ ಪಟ್ಟವನ್ನು ಒಪ್ಪಿಸಿ ಸಮಾಧಾನ ಪಡಿಸಬೇಕೆಂದಿರುವೆಯಾ ? "

"ಅಲ್ಲ; ಹಿಂದಕ್ಕೇನೇ ಅಜಾತಶತ್ರುವಿಗೆ ತಾವು ಯುವರಾಜ ಪಟ್ಟವನ್ನು ಕಟ್ಟಿರಲಿಲ್ಲವೆ? ಅದನ್ನೇ ಈಗ ನಡೆಯಿಸಬೇಕೆಂದು ಕೇಳಿಕೊಳ್ಳುವೆ."

" ಇದೆಲ್ಲ ಈ ಧರ್ಮ ಸಭೆಯಲ್ಲಿ ಏಕೆ ? "

" ಸಹಜ ಮಾತು ಬಂದಿತೆಂದು ಸೂಚಿಸಿದೆನಷ್ಟೇ. "

"ಮಹಾರಾಣಿ ಎಂದ ಮೇಲೆ ಸ್ಥಳ ಕಾಲಗಳ ಕಲ್ಪನೆ ಇರಬೇಕಲ್ಲ..!"

ಇನ್ನು ಮುಂದೆ ಧರ್ಮ ಸಭೆಯನ್ನು ಮುಂದರಿಸುವುದು ವಿಹಿತವಲ್ಲೆಂದು ಭಾವಿಸಿ ಗಣಧರರು ಮೆಲ್ಲನೆ ಎದ್ದರು. ಜನರೂ ಎದ್ದು, 'ನಮೋಸ್ತು'ಮಾಡಿಕೊಂಡು, ತಮ್ಮ ತಮ್ಮ ನಿವಾಸಸ್ಥಾನಗಳಿಗೆ ತೆರಳಿದರು.

೩

ಇದಾದ ಮೇಲೆ ಹಲವು ದಿನಗಳು ಉರುಳಿದುವು. ಮಗದ ರಾಜ್ಯದ ಸ್ಥಿತಿಯೇ ಈಗ ಬದಲಾಗಿದೆ. ಅದಕ್ಕೆ ಅರಮನೆಯೊಳಗಿನ ಅನೇಕ ಘಟನೆಗಳು ಕಾರಣವಾದುವು. ಇಳಿ ವಯಸ್ಸಿನಲ್ಲಿ ಶ್ರೇಣಿಕ ಮಹಾರಾಜನು ಕಾರಾಗೃಹದಲ್ಲಿ ಕಳೆಯಬೇಕಾಯಿತು. ರಾಜಸೂತ್ರಗಳನ್ನೆಲ್ಲ ಅಜಾತಶತ್ರುವು ತನ್ನ ಸ್ವಾಧೀನಪಡಿಸಿಕೊಂಡ. ತಂದೆಯನ್ನು ಸೆರೆಮನೆಯಲ್ಲಿಟ್ಟ. ರಾಜ್ಯದಲ್ಲಿಯೂ ರಾಜಧಾನಿಯಲ್ಲಿಯೂ ತನಗೆ ವಿರೋಧಿಯಾಗಿ ನಿಂತ ಹಲವರನ್ನು ಬಂಧಿಸಿದ. ಸ್ವಲ್ಪ ದಿನಗಳಲ್ಲಿ ಮಗಧ ಸೀಮೆಯಲ್ಲೆಲ್ಲ ತನ್ನ ನವೀನ ಆಡಳತೆಯನ್ನು ಆರಂಭಿಸಿದ. ಸುವ್ಯವಸ್ಥೆಗೊಳಿಸಿದ. ಎಷ್ಟಾದರೂ ಸಮ್ರಾಟನ ಪುತ್ರನೇ ಅವನು !

ರಾಜ್ಯದಲ್ಲಿ ಕ್ರಾಂತಿಯನ್ನುಂಟು ಮಾಡಿದಂತೆ ಧರ್ಮಕ್ರಾಂತಿಯನ್ನು ಆತ ಕೈಕೊಂಡ. ತಾನು ಭಗವಾನ್ ಬುದ್ಧನ ಅನುಯಾಯಿಯಾದ. ರಾಜಗೃಹದಲ್ಲಿ ಮೊದಲನೆಯ ಬೌದ್ಧ ಮಹಾಸಭೆಯನ್ನು ಕರೆದ. ಅದಕ್ಕಾಗಿ ವೈಭಾರ ಗಿರಿಯ ಒಂದು ಮಗ್ಗುಲಿಗೆ ಅಧ್ಯಕ್ಷನಾದ ಮಹಾ ಕಾಶ್ಯಪನ ನಿವಾಸಕ್ಕೆಂದು 'ಪಿಪ್ಪಲ' ಎಂಬ ಗುಹೆಯನ್ನು ನಿರ್ಮಿಸಿದ. ಬಹು ವಿಸ್ತಾರವೂ ಭವ್ಯವೂ ಆದ ಈ ಗುಹೆಯಲ್ಲಿ ದಿನಾಲು ಸಾವಿರಾರು ಜನರು ಕುಳಿತು ಧರ್ಮ ಪ್ರವಚನ ಕೇಳುವಂತಾಯಿತು. ಇದಲ್ಲದೆ ಬೌದ್ಧ ಭಿಕ್ಷುಗಳ ಸ್ವಾಧ್ಯಾಯಕ್ಕೆಂದು ವೈಭಾರ ಗಿರಿಯ ಉತ್ತರ ಬದಿಗೆ ಇನ್ನೊಂದು 'ಸಪ್ತಪರ್ಣಿ' ಗುಹೆಯನ್ನು ಕೊರೆಯಿಸಿದ. ಇದರ ಎದುರಿಗೇನೇ ಒಂದು ಭವ್ಯವಾದ ಶಿಲಾ ಮಂಟಪವನ್ನು ಕಟ್ಟಿಸಿದ. ಈ ಮಂಟಪದಲ್ಲಿಯೇ ಬೌದ್ಧ ಮಹಾಸಭೆಯು ನೆರೆಯುವಂತೆ ಯತ್ನಿಸಿದ.

ಅಜಾತಶತ್ರುವಿನ ಹೃದಯದಲ್ಲಿ ಕ್ರಾಂತಿಯಾದಂತೆ ಅವನ ನಿವಾಸಸ್ಥಾನದಲ್ಲಿಯೂ ಕ್ರಾಂತಿಯಾಗಿದ್ದಿತು. ಅರಮನೆಯ ಗೋಡೆಗಳ ಮೇಲೆಲ್ಲ ಭಗವಾನ್ ಬುದ್ಧನ ಜೀವನ ಪ್ರಸಂಗಗಳನ್ನು ಚಿತ್ರಿಸುವ ಪಟಗಳು ! ಒಂದೆಡೆಗೆ ಬುದ್ಧನ ಜನನೋತ್ಸವ ಚಿತ್ರ... ! ಇನ್ನೊಂದೆಡೆಗೆ ಶುದ್ಧೋದನನು ನೈಮಿತ್ತಿಕರನ್ನು ಕರೆಯಿಸಿ ಮಗನ ಜನ್ಮ ಕಾಲ ಹಾಗೂ ಅದರ ಫಲಗಳನ್ನು

ಕೇಳಿಕೊಳ್ಳುವ ಸಂದರ್ಭ. ಮತ್ತೊಂದು ಮಗ್ಗಲು ರಾಜ ಕುಮಾರ ಸಿದ್ಧಾರ್ಥನು ಸಂಸಾರದಲ್ಲಿ ದುಃಖ ಪ್ರಸಂಗಗಳನ್ನು ಕಂಡು ಅನುಭವಿಸಿದ ನೋಟ. ಒಂದೆಡೆಗೆ ಅವನ ಗೃಹತ್ಯಾಗದ ಚಿತ್ರ.... ಮಗುದೊಂದೆಡೆಗೆ ತಪಸ್ವಿ ಬುದ್ಧ ! — ಹೀಗೆ ಹಲವು ಪ್ರಸಂಗಗಳು ರಾಜಗೃಹದ ರಾಜಮಂದಿರದಲ್ಲಿ ಚಿತ್ರಿಸಲ್ಪಟ್ಟಿದ್ದುವು.

ಚೇಳನಾರಾಣಿಯ - ಕಣ್ಣುಗಳು ಎರಡೂ ಚಿತ್ರಗಳನ್ನು ಕಂಡಿದ್ದುವು. ಬಗೆಗಣ್ಣುಗಳು ಇನ್ನೂ ಕಾಣುತ್ತಿದ್ದುವು. ಭಗವಾನ್ ಬುದ್ಧದೇವನ ಪ್ರಭಾವವು ತನ್ನ ಸಮ್ರಾಟ್ ಶ್ರೇಣಿಕನ ಮೇಲೆ ಇರಲಿಲ್ಲೆಂತಲ್ಲ. ಆರಂಭದಲ್ಲಿ ಆ ಮಹಾಪುರುಷರಿಂದಲೇ ತನ್ನ ಪತಿಗೆ ಧರ್ಮದಲ್ಲಿ ಒಲವು ಮೂಡಿದುದು. ಮುಂದೆ ಬರಬರುತ್ತ ಭಗವಾನ್ ಮಹಾವೀರನ ಧರ್ಮ ಪ್ರಭಾವಕ್ಕೆ ಶ್ರೇಣಿಕನು ಒಳಗಾದ. ಅವನ ಧರ್ಮ ಸಭೆಯಲ್ಲಿ ಮುಖ್ಯ ಶ್ರಾವಕಾಗ್ರಗಣಿಯೇ ಎನಿಸಿದ. ಇಷ್ಟೇ ಅಲ್ಲ; ಸಾಮ್ರಾಜ್ಯದ ಶಕ್ತಿಯೆಸ್ನೆಲ್ಲ ಶ್ರಮಣ ಧರ್ಮದ ಪ್ರಸಾರಕ್ಕೆಂದೇ ಮೀಸಲಾಗಿರಿಸಿದ. ಭಗವಂತನ ಕಠೋರ ತಪಸ್ಸನ್ನು ಪುರಸ್ಕರಿಸಿದ. ಇದರಲ್ಲಿ ಯಾರ ಮೃದು ಹೃದಯಗಳು ನೊಂದಾವು ಎಂಥ ಕುಸುಮ ಕೋಮಲ ಸಂಸಾರಗಳು ಕಮರಿಯಾವು .... ಎಂಬುದರ ಕಲ್ಪನೆಯೂ ಕೂಡ ಅವರಿಗೆ ಆಗಲಿಲ್ಲ. ಇಂದು ಅವರ ಕಟು ಫಲಗಳನ್ನು ಅವರು ಅನುಭವಿಸಬೇಕಾಗಿದೆ.

ಈ ದುಃಖಾನುಭವದ ಕಲ್ಪನೆಯು ಬಹು ಹಳೆಯದು. ಇದೇನು ಅಕಸ್ಮಿನ ಘಟನೆಯಲ್ಲ....ಅಂತಲೇ ನಾನು ಅಂದು ಬಸಿರನ್ನು ಕಳೆದು ಕೊಳ್ಳಲಿಕ್ಕೆ ಜೀವಕ ವನದ ಆ ಬಂಡೆಗಲ್ಲಿಗೆ ಹೋದುದು. ಕರ್ಮದ ಆಟ. ನನ್ನ ಕಣ್ಣುಗಳು ಇಂಥದೆಲ್ಲವನ್ನೂ ಕಾಣುವದಿತ್ತು. ಕಿವಿಗಳು ಕೇಳುವವಿದ್ದುವು. ಸಮ್ರಾಟ್‌ನ ಸೆರೆಮನೆವಾಸ. ನಾನು ಅರೆಮನೆಯಲ್ಲಿದ್ದರೂ ಕಾರಾಗೃಹದಲ್ಲಿದ್ದಂತೆ. ಹೊರಗಿದ್ದೂ ಹೃದಯದಲ್ಲಿ ಅದನ್ನೇ ಅನುಭವಿಸುತ್ತಿರುವೆ. ಇದೆಲ್ಲ ಅನುಭವಿಸಲೆಂದೇ ಅಂದು ನನ್ನ ಗರ್ಭವನ್ನು ಭಗವಾನ್ ಬುದ್ಧ ಉಳಿಸಿದನೇ ? ಭಗವಂತ ಕರುಣಾಮಯಿಯಂತೆ. ಇದೇ ಏನು ಅವನ ಕರುಣೆ ? ಇಂಥದೇ ಏನು ಅವನ ಕರುಣೆಯ ಫಲ ?

ಈ ಅಜಾತಶತ್ರುವಿನನ್ನು ಇದಕ್ಕಾಗಿಯೇ ನಾನು ಹೆತ್ತೆನೆ ? ಮೊಲೆಯುಣಿಸಿ ಬೆಳಸಿ, ತಂದೆಯನ್ನು ಕಾರಾಗೃಹದಲ್ಲಿಡಲು ದೊಡ್ಡವನನ್ನಾಗಿ ಮಾಡಿದೆನೆ ?

ಇವರಲ್ಲಿ ನನ್ನ ಹೊಣೆ ಎಷ್ಟು ?

ಅದನ್ನು ನಾನು ಸರಿಯಾಗಿ ನಿರ್ವಹಿಸಿದೆನೆ ?

ಅಜಾತಶತ್ರುವನ್ನು ಹೆತ್ತುದು ತಪ್ಪೆ ?

ಅಲ್ಲ; ಅಲ್ಲ ! ಅದು ಪ್ರಕೃತಿ ಧರ್ಮ !

ನಾನೂ ಸೊಸೆಯಂತೆ ಮಗನನ್ನು ಹಡೆಯುವ ಮುಂಚೆಯೇ ಸನ್ಯಾಸಿನಿಯಾಗಿ ಬಿಟ್ಟಿದ್ದರೆ .... ?

ಅಂಥ ವೈರಾಗ್ಯಶಾಲಿನಿಯಾಗಿದ್ದರೆ ಸುಜ್ಯೇಷ್ಠೆಯನ್ನು ವಂಚಿಸಿ, ನಾನೇಕೆ ರಾಜಗೃಹಕ್ಕೆ ರಾಣಿಯಾಗುವ ಹಂಬಲದಿಂದ ಬರುತ್ತಿದ್ದೆ

ರಾಣಿಯಾದರೇನಾಯಿತು? ನನ್ನ ಈ ಮಗನಿಗೇ ಪಟ್ಟವಾಗಬೇಕೆಂಬ ಹುಚ್ಚು ಹಂಬಲವನ್ನಾದರೂ ಅದೇಕೆ ಇಟ್ಟುಕೊಳ್ಳಬೇಕಿತ್ತು ?

ನನ್ನ ಹಂಬಲವಲ್ಲ .... ಅಜಾತಶತ್ರುವಿನ ಇಚ್ಛೆ !

ಅದನ್ನು ಹುಟ್ಟಿಸಿದವರು ಯಾರು ?

ನಾನಲ್ಲ; ನಾನಲ್ಲ; ನಿಜವಾಗಿಯೂ ನಾನಲ್ಲ !

ಶ್ರೇಣಿಕರೇ ಅವನಲ್ಲಿ ಅದನ್ನು ಹುಟ್ಟಿಸಿದರು. ರಾಜ್ಯದಾಶೆಯನ್ನು ! ಯುವರಾಜ ಪದವಿಯನ್ನು ಮೊದಲು ಕೊಟ್ಟರು ... ! ತಿರುಗಿ ಕಸಿದುಕೊಂಡರು .... !

ಆಶಾ ರಾಕ್ಷಸ ! ಅಪಮಾನದ ಭೂತ! ನೊಂದ ಹೃದಯದ ಕಠೋರತೆಗಳು ಸೇರಿ ಅಜಾತಶತ್ರುವಿನ ಈ ಕೃತಿಗಳಿಗೆ ಕಾರಣವಾದುವು.

ಚೆಲುವಿಕೆಯಳಿದು, ಮುಪ್ಪಡರಿ, ಕಳೆಗುಂದಿದ ಮುಖದಲ್ಲಿ ಒಳಸೇರಿದ ಚೇಳನಾದೇವಿಯ ಎರಡೂ ಕಣ್ಣುಗಳಿಂದ ಒಂದೇ ಸವನೆ ನೀರು ಸೋರುತ್ತಿದ್ದುವು. ಆ ಪಾಶ್ಚಾತ್ತಾಪದ ಅಶ್ರುಗಳು ಅವಳ ಜೀವನದ ಹಿಂದಿನ ಒಂದೊಂದು ಘಟನೆಯ ಬಂಡೆಗಲ್ಲುಗಳ ನೆನಹಿನಿಂದ ಕಲಕಿದ ಅವಳ ಹೃದಯಸಾಗರದಿಂದ ಹೊರ ಚಿಮ್ಮುವ ಜಲ ಬಿಂದುಗಳಂತಿದ್ದುವು. ಈ ನೀರು ದುಂಬಿದ ನಯನಗಳಿಗೆ, ಎದುರಿಗೆ ತೂಗುವ ಮಂಚದ ಮೇಲೆ ಕುಳಿತು, ಮಗನನ್ನು ಮುದ್ದಿಸುವ ಅಜಾತ ಶತ್ರುವಿನ ಚಟುವಟಿಕೆ ಕಾಣದಂತಿತ್ತು. ಅತ್ತ ಅವಳ ಲಕ್ಷ್ಯವೂ ಇರಲಿಲ್ಲ.

" ಅಪ್ಪ ! ಅಪ್ಪ ! "

ಸಂತಸ ತುಂಬಿದ ಸ್ವರದಲ್ಲಿ ಮಗ ಅಜಾತಶತ್ರುವು ಕರೆದ. ಧ್ವನಿಯು ಒಮ್ಮೆಲೆ ತಾಯಿ ಚೇಳನೆಯ ಕಿವಿ ಸೇರಲಿಲ್ಲ. ಅವಳು ತನ್ನ ಚಿಂತೆಯ ಚಿತೆಯನ್ನೇರಿದ್ದಳು.

" ಅಪ್ಪ ! ಅಪ್ಪ ! "

ಇನ್ನೊಮ್ಮೆ ಕರೆದ ಅಜಾಶತ್ರು. ಮಗಧದ ಸಮ್ರಾಟ್.

" ಏನು ಮಗು ? ಕರೆದೆಯಾ ? "

" ಇದು ನೋಡು ಅಪ್ಪ ! ನನ್ನಂತೆ ಮಕ್ಕಳನ್ನು ಲಾಲಿಸುವವರು ಈ ಲೋಕದಲ್ಲಿ ಇನ್ನಾರಾದರೂ ಇರುವರೆ ? "

ಸ್ವಲ್ಪ ಹೆಮ್ಮೆ, ಪೂರ್ಣ ಹರ್ಷತುಂಬಿದ ದನಿಯಲ್ಲಿ ಕೇಳಿದ. ತನ್ನ ಹಾಗೂ ಮಗನ ಆಟವನ್ನು ತಾಯಿಗೆ ತೋರಿಸಿ ಸಂತಸಗೊಳಿಸಬೇಕೆಂದು ಅವನ ಬಯಕೆಯಾಗಿತ್ತು.

ಚೇಳನಾ ಏನನ್ನೂ ಹೇಳಲಿಲ್ಲ. ಮೌನವಾಗಿಯೇ ಉಳಿದಳು. ಅವಳ ಕಣ್ಣುಗಳಿಂದ ಅಶ್ರು ಬಿಂದುಗಳು ಇನ್ನೂ ಜೋರಾಗಿ ಉರುಳತೊಡಗಿದುವು. ' ಮಗ ಅಜಾತಶತ್ರುವು ಮಗನನ್ನು ಲಾಲಿಸುತ್ತಿರುವ. ಪರದೇಶಿ ಮಗುವನ್ನು ಮುದ್ದಿಸುತ್ತಿರುವ. ಲೋಕದಲ್ಲಿ ತನ್ನ ಒಲುಮೆಯೇ ಹೆಚ್ಚಿನದೆಂದು ಭಾವಿಸಿರುವ. ಪಾಪ ! ಇವನಿಗೇನು ಗೊತ್ತು.... ಇವನ ಹಡೆದವರು — ಶ್ರೇಣಿಕ — ಇವನನ್ನು ಇದಕ್ಕಿಂತ ಹೆಚ್ಚಿಗೆ ಪ್ರೀತಿಸುತ್ತಿದ್ದರೆಂಬುದು. ' ಚೇಳನಾದೇವಿಯ ವಿಚಾರ ಮಾಲಿಕೆ ಮುಂದರಿಯಿತು. ಅವಳ ಮುಂದದೃಷ್ಟಿ ಅಜಾತಶತ್ರುವಿನ ಬಾಲ್ಯ ಜೀವನದತ್ತ ಹೊರಳಿತು. ಅಲ್ಲಿ ಒಂದು ಪ್ರಸಂಗದ ಮೇಲೆ ಸ್ಥಿರವಾಗಿ ನಿಂತಿತು.

ಮೂರು ವರುಷದ ಮಗು ಅಜಾತ ಮಂಚಿಕೆಯ ಮೇಲೆ ಚಿಟ್ಟನೆ ಚೀರಿ ಚಟಪಟಿಸುತ್ತಿದ್ದಾನೆ. ಒಂದು ಕ್ಷಣ ಸುಮ್ಮನೆ ನಿಶಕ್ತನಾಗಿ ಬೀಳುವ. ಮರುಕ್ಷಣದಲ್ಲಿ ಚಿರ್ ಎಂದು ಚೀರುವ. ಬೆರಳಿಗೆ ಆದ ಹುಣ್ಣಿನ ನೋವನ್ನು ತಡೆಯದೆ ಮಮ್ಮಲನೆ ಮರಗುವ ...ರಾಜ ವೈದ್ಯರ ಉಪಚಾರವೆಲ್ಲ ತೀರಿತು. ಜೀವಕನ ಸರ್ವ ಪ್ರಯತ್ನ ನಿಂತಿತು. ಮಗುವಿನ ಜೀವಕ್ಕೇನೂ ಸಮಾಧಾನವಿಲ್ಲ. ಮಗನ ಈ ಸ್ಥಿತಿಯನ್ನು ಕಂಡು ಚೇಳನಾ—

ದೇವಿಯ ಮನಸ್ಸಿಗೂ ಶಾಂತಿಯಿಲ್ಲ. ಸಮಾಧಾನವಿಲ್ಲ. ಹಗಲಿರುಳೂ ಕಣ್ಣಿಗೆ ನಿದ್ರೆಯಿಲ್ಲ. ಮಗನ ಮುಖವನ್ನು ಕಂಡು ಬಾಳಿನಲ್ಲಿರುವ ದುಃಖದ ಕಲ್ಪನೆಯು ಮೊದಲ ಸಲ ಅವಳಿಗೆ ಆದಂತಿತ್ತು. ಅದರಿಂದ ಅವಳ ಮನಸ್ಸು ತುಂಬ ನೊಂದು ಹೋಗಿತ್ತು.

ಸಮ್ರಾಟ್ ಶ್ರೇಣಿಕನಿಗಂತೂ ಅಕ್ಕರೆಯ ಕಂದ ಅಜಾತಶತ್ರುವು. ಅವರ ಪ್ರಣಯ-ವಲ್ಲಿಯ ಕುಸುಮುವನು. ಅರಮನೆಯಲ್ಲಿ ಇತ್ತೀತ್ತಲಾಗಿ ಚಿಕ್ಕ ಮಕ್ಕಳೇ ಇರಲಿಲ್ಲ. ಬಹುದಿನಗಳ ಮೇಲೆ ಹುಟ್ಟಿದ ಹುಡುಗನೀತ. ಅದರಿಂದ ಇನ್ನೂ ಮಮತೆ ಹೆಚ್ಚಾಗಿದ್ದಿತು. ಅಜಾತಶತ್ರುವೂ ಕೂಡ ತನ್ನ ತೊದಲ್ನುಡಿಗಳಿಂದ ಎಲ್ಲರ ಮನಸ್ಸನ್ನು ಸೆಳೆಯುವಂಥ ಮಗು. ಈಗ ಒಂದೆರಡು ವಾರಗಳಿಂದ ಕೈ ಬೆರಳಿಗೆ ನೋವಾಗಿ ನರಳುತ್ತಿದ್ದಾನೆ. ಕೈಯಿಂದ ಒಂದೇಸವನೆ ಕೀವು ರಕ್ತಗಳು ಸೋರುತ್ತಿವೆ. ಅರಮನೆಯ ಉಲ್ಲಾಸವೆಲ್ಲ ಉಡುಗಿ ಹೋದಂತಾಗಿದೆ.

ಇಡೀ ಇರುಳೆಲ್ಲ ಚೇಳನಾರಾಣಿಯ ಮಹಲಿನೊಳಗಿನ ಜನರಿಗೆ ನಿದ್ರೆಯೆಂಬುದು ಇರುತ್ತಿರಲಿಲ್ಲ. ಕಿರಿಯ ರಾಣಿಗೆ ಸಮ್ರಾಟ್‌ನ ಹೃದಯದಲ್ಲಿ ಹಿರಿಯ ಸ್ಥಾನ. ಅದರಿಂದ ಶ್ರೇಣಿಕನೂ ಹಗಲಿರುಳು ರಾಜಕಾರ್ಯವನ್ನು ಮರೆತು ಅಲ್ಲಿಯೇ ಕಳೆಯುವ. ಮಗನ ನೋವಿನಿಂದ ಅಲ್ಲಿ ಯಾರ ಮನಸ್ಸಿಗೆ ನೆಮ್ಮದಿಯಿಲ್ಲ. ಆ ಕೀವು ಸೋರುವ ನೋವಿನ ಬೆರುಳನ್ನು ಯಾರಾದರೂ ಬಾಯಲ್ಲಿಟ್ಟುಕೊಂಡರೆ ಮಾತ್ರ ಮಗುವು ತುಸು ಹೊತ್ತು ನಿದ್ರೆ ಮಾಡುವುದು. ಸಮಾಧನದ ಉಸುರು ಬಿಡುವುದು. ಇಷ್ಟು ತಿಳಿದುದೇ ತಡ ಸಮ್ರಾಟ್ ಶ್ರೇಣಿಕನು ಇರುಳೆಲ್ಲ ಮಗನ ಬೆರಳನ್ನು ಬಾಯಲ್ಲಿಟ್ಟುಕೊಂಡು ಒರಗುವ ! ಆಗೆಲ್ಲ ಮಗುವಿಗೆ ನಿದ್ರೆ, ಶಾಂತಿ, ಸೌಖ್ಯ. ಪತಿಯ ಈ ಕಾರ್ಯವನ್ನು ಕಂಡಂತೂ ಚೇಳನಾದೇವಿಗೆ ಎಂದಿಲ್ಲದಷ್ಟು ಆದರು ಶ್ರೇಣಿಕನ ವಿಷಯದಲ್ಲಿ. ಅವಳ ಹೃದಯದಲ್ಲಿ ಪ್ರೇಮದ ಪ್ರವಾಹವು ಮಹಾಪೂರವಾಗಿ ಹರಿಯುವುದು.

ಅಂದಿನ ಶ್ರೇಣಿಕನು ಅಜಾತಶತ್ರುವನ್ನು ಪ್ರೀತಿಸುವ ದೃಶ್ಯ ! ಇಂದು ಅಜಾತ ತನ್ನ ಮಗುವನ್ನು ಲಾಲಿಸುವ ಚಿತ್ರ ! ಯಾವುದು ಮಿಗಿಲು, ಯಾವುದು ಕಡಿಮೆಯದು ? ಇದು ತಾಯಿಯಿಲ್ಲದ ತಬ್ಬಲಿ ಮಗು ಅವ್ವ

ವೈರಾಗ್ಯವನ್ನು ತಳೆದು ಆರ್ಯಿಕೆಯಾಗಿ ತೆರಳಿದಳು. ಸಂಸಾರ ಜೇಡವಾಯಿತವಳಿಗೆ.... ! ಹೊಟ್ಟೆಯಿಂದ ಹುಟ್ಟಿದ ಮಗನ ಮೋಹವನ್ನು ಮರೆತು ಕಾಡಿಗೆ ಸಾಗಿವಳು ! ಅಂಥ ಕೂಸನ್ನು ಪಡೆದ ತಂದೆ ಅಜಾತ ಸಂರಕ್ಷಿಸುತ್ತಿದ್ದಾನೆ. ಅದಕ್ಕಾಗಿ ಲಾಲಿಸುತ್ತಿದ್ದಾನೆ. ಶ್ರೇಣಿಕನಿಗೆ ಈ ಪ್ರಸಂಗವಿರಲಿಲ್ಲ. ಪ್ರತ್ಯಕ್ಷ ಒಂಭತ್ತು ತಿಂಗಳು ಹೊತ್ತು ಹೆತ್ತ ತಾಯಿ ಸಾಸು ಹತ್ತಿರವಿದ್ದೆ. ಅದರಲ್ಲೂ ಅಜಾತ ಹಡೆದಾತನಿಗೆ ವೈರಿ ! ಎಂಬ ಸಂಗತಿಯಂತೂ ಜನ ಜನಿತವಿತ್ತು. ರಾಜ ಜ್ಯೋತಿಷಿ ಹೇಳಿಯೂ ಇದ್ದ. ಇಂಥ ಮಗುವನ್ನು ಶ್ರೇಣಿಕ ಪ್ರೀತಿಸುವ ಚಿತ್ರ ! ಒಂದು ಅನಿವಾರ್ಯವಾದುದು. ಇನ್ನೊಂದು ಸ್ವಾಭಾವಿಕವಾದುದು. ಎರಡರಲ್ಲೂ ಎಷ್ಟು ಅಂತರ !

ಇದೆಲ್ಲವನ್ನು ನೆನೆದು ಚೇಳನಾರಾಣಿಯ ಕಪೋಲಗಳು ಒಂದೇ ಸವನೆ ನೆನೆಯುತ್ತಿದ್ದುವು, ತೊಳೆಯುತ್ತಿದ್ದುವು. ಅಜಾತ ಈ ತಾಯಿಯ ದುಃಖವನ್ನು ಕಂಡ. ಮರುಕಗೊಂಡ. ತನ್ನ ಮಾತಿಗೆ ಯಾವಾಗಲೂ ನಗು ನಗುತ್ತಲೇ ಉತ್ತರ ಕೊಡುವ ತಾಯಿ ಇಂದು – ಈ ಮಾತಿಗೆ – ಇಷ್ಟು ನೊಂದುಕೊಳ್ಳಲೇಕೆ ?– ಎಂಬ ಪ್ರಶ್ನೆ ಅವನ ಮನಸ್ಸಿನಲ್ಲಿ ಮೂಡಿತು. ತಿರುತಿರುಗಿ ವಿಚಾರಿಸಿದ. ಪ್ರಶ್ನೆ ಬಿಡಲಿಲ್ಲ. ಕೊನೆಗೆ ತಾಯಿಗೇ ಕೇಳಿದ.

"ಅವ್ವ ! ನೀನಿಷ್ಟು ನೊಂದುಕೊಂಡುದೇಕೆ ?"

ಚೇಳನಾ ತುಸು ಹೊತ್ತು ಮನದಲ್ಲಿ ತೂಗಾಡಿದಳು. ಸುಮ್ಮನೆ ಕುಳಿತಳು. ಕಣ್ಣೀರು ತೊಡೆದುಕೊಂಡಳು. ಮುಖದಲ್ಲಿ ಮುಗುಳು ನಗೆಯನ್ನು ಬೀರಲು ಯತ್ನಿಸಿದಳು. ಅಸಫಲಳಾದಳು.

" ಅವ್ವ ! ಹೇಳೇ ತಾಯೀ ! ಮನಸ್ಸಿಗೆ ಇಷ್ಟು ನೋವೇಕೆ ? " ತಿರುತಿರುಗಿ ಕೇಳಿದ ಅಜಾತ ತಾಯಿಗೆ. ಧ್ವನಿಯಲ್ಲಿ ಕರುಣರಸ ಕಟ್ಟೆಯೊಡೆದು ಪ್ರವಹಿಸುತ್ತಿತ್ತು.

ಏನೋ ಶುಭ ಘಳಿಗೆ ಸಮೀಪಿಸಿದಂತೆ ತೋರುತ್ತಿದೆ ! ಇದ್ದ ಸಂಗತಿಯನ್ನು ಹೇಳಿ ನೋಡುವ. ಅಜಾತನ ಹೃದಯ ಪರಿವರ್ತನವಾದರೂ ಆದೀತು, ಎಂದು ಮಾತಿನಲ್ಲಿ ತುಸು ಚತುರತೆಯನ್ನು ತಂದು ಚೇಳನಾ ಮಾತಿಗೆ ಆರಂಭಿಸಿದಳು.

"ನೋಡು ಅಜಾತ, ನೀನೂ ನಿನ್ನ ಮಗುವಿನಷ್ಟು ಚಿಕ್ಕವನಾಗಿದ್ದೆ, ಆಗ ಸಮ್ರಾಟ್‌ರು ನಿನ್ನನ್ನು ಬಹುವಾಗಿ ಪ್ರೀತಿಸುತ್ತಿದ್ದರು... ಒಮ್ಮೆ ನಿನ್ನ ಬೆರಳಿಗೆ ನೋವಾಗಿದ್ದಿತು, ಕೀವು ರಕ್ತ ಸೋರುತ್ತಿದ್ದಿತು. ಅದನ್ನು ಯಾರಾದರೂ ಬಾಯಲ್ಲಿಟ್ಟುಕೊಂಡರೆ ನೀನು ಸ್ವಲ್ಪ ಹೊತ್ತು ಸಮಾಧಾನದಿಂದ ಮಲಗುತ್ತಿದ್ದೆ...?

ಚೇಳನಾತಾಯಿಗೆ ದುಃಖ ತಡೆಯಲಿಲ್ಲ. ಬಿಕ್ಕಿ ಬಿಕ್ಕಿ ಅಳಹತ್ತಿದಳು.

"ಹೋಗೇ ತಾಯೀ; ಕೀವು ರಕ್ತ ಸೋರುವ ಬೆರಳನ್ನು ಬಾಯಲ್ಲಿ ಯಾರು ಇಟ್ಟುಕೊಂಡಾರೆ? ಎಂಥ ಹೇಸಿಕೆಯ ಕೆಲಸವದು ..."

ಅಜಾತ ಮುಖವನ್ನು ಕಿವುಚಿ ನುಡಿಯುತೊಡಗಿದ.

ಆ ದುಃಖದ ಸ್ವರದಲ್ಲಿಯೇ ಚೇಳನಾ ಮುಂದೆ ನುಡಿದಳು.

"ಅಂಥ ಕಾರ್ಯವನ್ನೇ ಮಾಡಿದರಪ್ಪ ನಿನ್ನ ಹಡೆದವರು ..."

ಮುಂದೆ ಅವಳ ಬಾಯಿಂದ ಮಾತುಗಳೇ ಹೊರಡಲಿಲ್ಲ. ಹೃದಯ ಕಂಠದವರೆಗೆ ತುಂಬಿ ಬಂದಿತು. ಇದ್ದ ಮಾತುಗಳೇ ತುಂಡ ತುಂಡಾಗಿ ಭಾವವನ್ನು ಹೊತ್ತು ಹೊರಕ್ಕೆ ತಂದುವು.

ನಿಂತಲ್ಲಿಯೇ ಅಜಾತನಿಗೆ ರಾಜಗೃಹವೆಲ್ಲ ಗರಗರನೆ ತಿರುಗಿದಂತಾಯಿತು. ಒಮ್ಮೆಲೇ ಮೇರುಗಿರಿಯಿಂದ ಕೆಳಗೆ ಉರುಳಿಸಿ ಬಿಟ್ಟಂತಾಯಿತು. ತನ್ನನ್ನು ಇಷ್ಟು ಪ್ರೀತಿಸುವ ತಂದೆಯನ್ನು ಕಾರಾಗೃಹದಲ್ಲಿಟ್ಟು ರಾಜ್ಯವನ್ನು ಸಂಪಾದಿಸಿದೆನಲ್ಲ. ನನ್ನ ರಾಜ್ಯ ಮೋಹಕ್ಕೆ ಏನೆನ್ನಬೇಕು? ಕೆಲವು ದಿನಗಳ ಹಿಂದೆ ಸಮ್ರಾಟ್‌ನೆನಿಸಿದ ತಂದೆ ಶ್ರೇಣಿಕ ಈಗ ಸೆರೆಯಾಳು! ಈ ರಾಜ್ಯ ವೈಭವವೇನು ಸ್ಥಿರವೇ? ಈ ನೆಲವನ್ನು ಎಷ್ಟು ಜನ ಅರಸರು ಈ ಮೊದಲು ಆಳಲಿಲ್ಲ? ನಾನೇಕೆ ಇಂಥ ಕೃತ್ಯ ಮಾಡಿದೆ?

ಹೀಗೆ ಒಂದೋ ಎರಡೋ ಹಲವು ಪ್ರಶ್ನೆಗಳು ಅಜಾತಶತ್ರುವಿನ ಮನಸ್ಸಿನಲ್ಲಿ ಎದ್ದು, ಅಲ್ಲೋಲ ಕಲ್ಲೋಲವನ್ನುಂಟು ಮಾಡಿದುವು. ಹೃದಯವನ್ನು ಹಿಂಡಿ ಬಿಟ್ಟುವು. ತಾಯಿಯ ಎದುರಿಗೂ ನಿಲ್ಲಲಿಕ್ಕೆ ನಾಚಿಕೆ ಎನಿಸಿತವನಿಗೆ. ಕೂಡಲೇ ತಂದೆಯನ್ನು ಬಿಡಿಸಿ ತರುವ ಆತುರ ಹೆಚ್ಚಿತು. ಭಾವಪರವಶನಾಗಿ ಹೊರಗೆ ಓಡಿದ.... ಹುಚ್ಚನಂತೆ ಕಿರುಚತೊಡಗಿದ.

“ ಅಪ್ಪಾ ! ಅಪ್ಪಾ ! ನಾನೆಂಥ ಅನ್ಯಾಯಿ ! ನಿನ್ನ ಹೃದಯವನ್ನು ತಿಳಿಯದೆ ಹೋದೆ.... ! ಕಾರಾಗೃಹದಲ್ಲಿಟ್ಟು ರಾಜ್ಯವನ್ನು ಸಂಪಾದಿಸಿದೆ. ? ಈ ಕರ್ಮವನ್ನು ಇನ್ನೆಲ್ಲಿ ಕಳೆಯಲಿ !

“ ತಂದೆಯನ್ನು ಬಿಡುವೆ ! ಕಾರಾಗೃಹದ ಹೊರಗೆ ಬಿಡುವೆ ! ತಿರುಗಿ ಸಾಮ್ರಾಜ್ಯ ಒಪ್ಪಿಸುವೆ. ! ಅವರ ಸೇವಕನಾಗಿ ನಿಲ್ಲುವೆ. !

“ ಅಭಯಕುಮಾರ ! ನೀನೆಂಥ ಪುಣ್ಯವಂತ ! ತಂದೆಗಾಗಿ ಬ್ರಹ್ಮಚಾರಿಯಾದೆ ! ವೈಶಾಲಿಗೆ ಹೋದೆ ! ಏನೆಲ್ಲ ಮಾಡಿದೆ ! ತಂದೆಗಾಗಿ ನಾನೇನು ಮಾಡಿದೆ. !

“ ಕಬ್ಬಿಣದ ಸಂಕೋಲೆಯನ್ನು ಮಾಡಿಸಿದೆ ! ಕಾರಾಗಾರವನ್ನು ಕಟ್ಟಿಸಿದೆ !

“ ಕೃತಘ್ನ ! ಪಾಪಿ ! ಕುಲಕಂಟಕ ! ಅಜಾತಶತ್ರು ! ”

ಸೆರೆಮನೆಯ ಕಡೆಗೆ ಧಾವಿಸಿದ ಅಜಾತಶತ್ರುವು. ಕೈಗೆ ಸಿಕ್ಕ ಸಾಧನವನ್ನು ತಕ್ಕೊಂಡ. ಅವನ ಮೈಯೊಳಗಿನ ನರನರಗಳೆಲ್ಲವು ತಂದೆಯನ್ನು ಅಪ್ಪಿಕೊಳ್ಳಲು ಕಾತರಿಸುತ್ತಿದ್ದುವು. ಆತುರಗೊಂಡಿದ್ದುವು, ಮೈಮರೆಯಿಸಿದ್ದುವು.

೪

ಚೇಳನಾ ಚಿಂತೆಯಲ್ಲಿಯೇ ಕುಳಿತಿದ್ದಳು. ಒಂದು ಕ್ಷಣ ತನ್ನ ಚತುರ ಮಾತಿನ ಪರಿಣಾಮ ಮಗನ ಮೇಲೆ ಹೀಗಾದುದಕ್ಕೆ ಸಂತಗೊಳ್ಳುವಳು. ಮುಪ್ಪಿನ ಕಾಲಕ್ಕಾದರೂ ಶ್ರೇಣಿಕರ ಬಿಡುಗಡೆಯಾಗುತ್ತಿದ್ದುದಕ್ಕೆ ಹಿರಿಹಿರಿ ಹಿಗ್ಗಿದಳು. ಕೆಲದಿನ ಅರಮನೆಯಲ್ಲಿದ್ದು, ಆ ಮೇಲೆ ಇಬ್ಬರೂ ಭಗವಾನ್ ಮಹಾವೀರನ ಮುಕ್ತಸ್ಥಾನವಾದ ಪಾವಾಪುರಿಯಲ್ಲಿಯೇ ಹೋಗಿ ಇದ್ದು ಬಿಟ್ಟರಾಯಿತು. ಅಲ್ಲಿಯೇ ಮುನಿ ಸಂಘದೊನೆ ಇದ್ದು, ಸ್ವಾಧ್ಯಾಯ, ಸಂಯಮ, ತಪಗಳಿಂದ ಜೀವನವನ್ನು ಪವಿತ್ರಗೊಳಿಸಿಕೊಳ್ಳಬೇಕು. ಸುಜೇಷ್ಠೆ, ಮಹಾವೀರರು ಎಂಥ ಪುಣ್ಯಜೀವಿಗಳು ! ಈ ಸಂಸಾರದ ಜಂಜಾಟದಲ್ಲಿಯೇ ಸಿಲುಕಲಿಲ್ಲ. ಇನ್ನು ಮೇಲಾದರೂ ಆ ತ್ಯಾಗ ಜೀವನವನ್ನು ನಾವು ಸ್ವೀಕರಿಸಬೇಕು.

ತಾವೊಂದೆಣಿಸಿದರೆ ದೈವವೊಂದೆಣಿಸುವುದಂತೆ ! ಚೇಳನಾ ತಮ್ಮ ಭವಿಷ್ಯ ಜೀವನದ ಚಿತ್ರವನ್ನು ಮನದಲ್ಲಿ ಬರೆಯುತ್ತಿದ್ದಳು. ಆ ಚಿತ್ರದಲ್ಲಿಯೂ ಒಂದರಕ್ಷಣ ಮುಕ್ಕು ಮುದುಕು ಕಂಡು ಬರುವುದು. ಅದೇಕೋ ಮನಸ್ಸು ವಿಫಲವಾಗುವುದು. ತಾನರಿಯದ ಯಾವುದೋ ಕಾರಣಕ್ಕಾಗಿ ಅವಳ ಮನಸ್ಸು ಹೆದರುವುದು. ಒಮ್ಮೆಲೇ ಭಯವು ಮನವನ್ನೆಲ್ಲ ಆವರಿಸುವುದು. ಮೈಯಲ್ಲ ನಡುಕ ಹುಟ್ಟುವದು. ತುಟಿಗಳು ಅದುರುವವು. ಅಕಾರಣವಾಗಿ ಶೋಕ ಉಕ್ಕಿಬರುವುದು.

ಪ್ರಾಮಾಣಿಕವಾದ ಅಂತರ್ವಾಣಿಯು ಭವಿಷ್ಯವನ್ನು ಸೂಚಿಸುವುದಂತೆ ! ಹಾಗೆಯೇ ಆಯಿತು ಚೇಳನೆಯ ಮನಸ್ಥಿತಿಯ ಪರಿಣಾಮ. ಸ್ವಲ್ಪ ಹೊತ್ತಿನಲ್ಲಿ ಸೇವಕನೊಬ್ಬ ಧಾವಿಸಿ ರಾಣಿಯನ್ನು ಹುಡುಕುತ್ತ ಬಂದ.... ಅವನ ಗಾಬರಿಯಾದ ಮುಖವನ್ನು ಕಂಡೇ ಚೇಳನಾದೇವಿಯ ಅರ್ಧ ಶಕ್ತಿ ಉಡುಗಿ ಹೋದಂತಾಯಿತು. ನಡಗುವ ಧ್ವನಿಯಲ್ಲಿಯೇ ಕೇಳಿದಳು.

" ಏನು .... ಸಮಾಚಾರ .... ? "

" ಘಾತಾಯಿತು .... ! ಅವ್ವ ಘಾತಾಯಿತು ! "

" ಏ .... ನು .... ? "

" ಮಹಾ .... ರಾಜರು .... ತಲೆಯೊಡೆದು ಕೊಂಡು ಪ್ರಾಣ .... ಬಿ....ಟ್ಟರು ! "

" ಆಂ ! ಯಾವ ಮಹಾರಾಜರು? ...ಹಿರಿಯರೋ....ಕಿರಿಯ ...."

" ಹಿರಿಯ ಶ್ರೇಣಿಕ ಮಹಾರಾಜರು ... ! "

" ಆಂ ! ಹ್ಞಾ ! .... ಹ್ಞಾ ! "

ಎಂದವಳೇ ಚೇಳನಾ ನೆಲಕ್ಕುರುಳಿದಳು. ನಿಶ್ಚೇತನಳಾದಳು.

"ಶ್ರೇಣಿಕ ಮಹಾರಾಜರನ್ನು ಬಿಡಿಸಲಿಕ್ಕೆಂದು ಕಿರಿಯ ಮಹಾರಾಜರು ಕೈಯಲ್ಲಿ ಸುತ್ತಿಗೆಯನ್ನು ತಕ್ಕೊಂಡು ಸೆರೆಮನೆಯತ್ತ ಧಾವಿಸುತ್ತಿದ್ದರು. ಮಗನ ಬರವನ್ನು ದೂರ ಇರುವಾಗಲೇ ಕಂಡು, ಕೊಲ್ಲಲಿಕ್ಕೇ ಬಂದರೆಂದು ಹೆದರಿ .... ತಲೆಯೊಡೆದುಕೊಂಡು ಪ್ರಾಣಬಿಟ್ಟರು ಶ್ರೇಣಿಕ ಸಮ್ರಾಟ್‌ರು .... ! "

ಸೇವಕನ ಈ ಹೇಳಿಕೆ ಅರಣ್ಯ ರೋದನವಾಯಿತು. ಅಲ್ಲಿ ಕೇಳುವ ಅವಸ್ಥೆಯಲ್ಲಿ ಯಾರೂ ಇರಲಿಲ್ಲ. ಇಲ್ಲ.

———

— ಮಿರ್ಜಿ ಅಣ್ಣಾರಾಯರ ಕೃತಿಗಳು —

ಧಾರ್ಮಿಕ:—

ಜೈನಧರ್ಮ	....	....	೧೫—೦—೦
ದಶಭಕ್ತಿ	....	....	೩—೦—೦
ಭರತೇಶ ವೈಭವ - ಶೋಭನ ಸಂಧಿಗಳು			೧—೦—೦
ಶ್ರೀಶಾಂತಿಸಾಗರರು		....	೦—೪—೦
ಚಿನ್ಮಯ ಚಿಂತಾಮಣಿ		....	೧—೦—೦
ಭರತೇಶನ ನಾಲ್ಕು ಚಿತ್ರಗಳು		....	೧—೪—೦

ಕಾದಂಬರಿಗಳು:—

ನಿಸರ್ಗ	....	....	೩—೮—೦
ರಾಷ್ಟ್ರ ಪುರುಷ	....	....	೭—೦—೦
ಅಶೋಕ ಚಕ್ರ	...	....	೩—೮—೦
ರಾಮಣ್ಣ ಮಾಸ್ತರು		....	೨—೦—೦
ಪ್ರತಿ ಸರಕಾರ	....	....	೧—೧೨—೦
ಭಸ್ಮಾಸುರ	....	....	೧—೮—೦

ಸಣ್ಣ ಕತೆಗಳು:—

ಪ್ರಣಯ ಸಮಾಧಿ	....	....	೧—೪—೦
ವಿಜಯಶ್ರೀ	...	...	೧—೦—೦

ವಿಮರ್ಶೆ:—

ಲೇಖನ ಕಲೆ	....	....	೨—೪—೦
ದತ್ತವಾಣಿ	....	....	೧—೪—೦

ಶೈಕ್ಷಣಿಕ:—

ಮೂಲ ಶಿಕ್ಷಣ ಮೌಲ್ಯ ಮಾಪಣ		....	೦—೧೨—೦

ಅಚ್ಚಿನಲ್ಲಿ:—

ಕಲಾಜೀವಿ (ಕಾದಂಬರಿ)

ನಾನು ಕಂಡ ನಾಡು

ದಿ ಅಜಿತ ಏಜನ್ಸಿ, ಟಿಳಕಚೌಕ - ಬೆಳಗಾವಿ.

